₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 27.11.2024 ಸಂಪುಟ: 9 ಸಂಚಿಕೆ: 338 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಯಲ್ ಚಾಲೆಂಜರ್ಸ್ ತಂಡಕ್ಕೆ ಲಿಯಾಮ್ ಲಿವಿಂಗ್‌ಸ್ಟೋನ್

18ನೇ ಆವೃತ್ತಿಯ ಐಪಿಎಲ್ ಟೂರ್ನಿಯ ಆಟಗಾರರ ಮೆಗಾ ಹರಾಜಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸೇರಿದ ಬೆನ್ನಲ್ಲೆ ಇಂಗ್ಲೆಂಡ್ ಬ್ಯಾಟ್ಸ್‌ಮನ್ ಲಿಯಾಮ್ ಲಿವಿಂಗ್‌ಸ್ಟೋನ್ ಅಬುದಾಬಿ ಟಿ-10 ಲೀಗ್ ಪಂದ್ಯವೊಂದರಲ್ಲಿ ಕೇವಲ 15 ಎಸೆತಗಳಲ್ಲಿಯೇ ಅರ್ಧಶತಕವನ್ನು ಸಿಡಿಸಿ ಆರ್‌ಸಿಬಿ ಅಭಿಮಾನಿಗಳ ಗಮನ ಸೆಳೆದಿದ್ದಾರೆ.

ಪುಟ ತೆರೆದಂತೆ...

ಎರಡು ಅಲಗಿನ ಖಡ್ಗ ಫೀನಾಲ್!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಮನಸ್ಸಿನ ಬಡತನಕ್ಕೆ ಪಡಿತರ ಉಂಟೇ?
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ಕಾನೂನುಗಳ ಬಗ್ಗೆ ಪರಿಶೀಲನೆ ನಡೆಸುವುದಷ್ಟೇ ನ್ಯಾಯಾಂಗದ ಕೆಲಸ. ಆದರೆ ಸಂಸತ್ತು ಅಥವಾ ವಿಧಾನಸಭೆಗಳ ಪ್ರತಿಪಕ್ಷಗಳಂತೆ ನ್ಯಾಯಾಂಗ ಕೆಲಸ ಮಾಡಬೇಕೆಂದು ಯಾರೊಬ್ಬರೂ ಒತ್ತಡ ಹಾಕುವಂತಿಲ್ಲ. ಅದು ನಮ್ಮ ಕೆಲಸವಲ್ಲ. ಈ ಬಗ್ಗೆ ಕೆಲವರಲ್ಲಿ ತಪ್ಪು ಕಲ್ಪನೆಗಳಿವೆ.

ಡಿ.ವೈ.ಚಂದ್ರಚೂಡ್
ನಿವೃತ್ತ ಸಿಜೆ

ದಾರಿದೀಪೋಕ್ತಿ

ನಮ್ಮ ಬದುಕಿನಲ್ಲಿ ಯಾವಾಗ ಭಯ, ಗಾಬರಿಗಳೇ ಹೆಚ್ಚಾದಾಗ ಜೀವನವೇ ಭಾರವಾದಂತೆ ಭಾಸವಾಗುತ್ತದೆ. ಬದುಕಿನಲ್ಲಿ ನಂಬಿಕೆ, ಭರವಸೆ ಹೆಚ್ಚಾದಾಗ ಬದುಕು ಹಗುರವಾಗಿ ಬಂಗಾರವಾಗುತ್ತದೆ. ಯಾವತ್ತೂ ಭರವಸೆಯನ್ನು ಕಳೆದುಕೊಳ್ಳಬಾರದು.

ವಕ್ರತುಂಡೋಕ್ತಿ

ಎರಡು ವೈಫೈ ಅಂಟೆನಾಗಳು ಮದುವೆ ಯಾದರೆ, ಚೆನ್ನಾಗಿರೋದು ರಿಸೆಪ್ಶನ್.

ಇವಿಎಂ ವಿರುದ್ಧದ ಅರ್ಜಿ ವಜಾ

ದೆಹಲಿ: ವಿದ್ಯುನ್ಮಾನ ಮತಯಂತ್ರಗಳ ಬದಲು ಮತಪತ್ರಗಳ ಮೂಲಕ ಚುನಾವಣೆ ನಡೆಸುವಂತೆ ಕೋರಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾ ಮಾಡಿದೆ. ಇವಿಎಂಗಳನ್ನು ತಿರುಚಬಹುದು ಎಂದು ವಾದಿಸಿದ್ದ ಡಾ.ಕೆ.ಎ. ಪಾಲ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಪಿ.ಬಿ.ವರಾಳೆ ಪೀಠ, ಮತ್ತೆ ಬ್ಯಾಲೆಟ್ ಪೇಪರ್ ವ್ಯವಸ್ಥೆ ತರುವ ಸಾಧ್ಯತೆಯನ್ನು ತಳ್ಳಿಹಾಕಿತು. ಬ್ಯಾಲೆಟ್ ಪೇಪರ್ ಮೂಲಕ ಮತದಾನ ವ್ಯವಸ್ಥೆ ಇದ್ದಾಗ ಏನು ಆಯಿತೆಂಬುದು ನಮಗೆ ಗೊತ್ತಿದೆ. ಹೀಗಾಗಿ ಈಗಿನ ವ್ಯವಸ್ಥೆಯನ್ನು ಕೆಳಕ್ಕೆ ತರುವ ಪ್ರಯತ್ನ ಬೇಡ ಎಂದು ಸ್ಪಷ್ಟವಾಗಿ ಹೇಳಿತು.

ನೆಲಮಂಗಲ ಬಳಿ ಎರಡು ಚಿರತೆ ಸೆರೆ

ನೆಲಮಂಗಲ: ಮಹಿಳೆಯೊಬ್ಬರನ್ನು ಚಿರತೆ ಕೊಂದ ಒಂದು ವಾರದಲ್ಲಿ ನರಭಕ್ಷಕ ಸೇರಿ ಎರಡು ಚಿರತೆಗಳನ್ನು ಅರಣ್ಯ ಸಿಬ್ಬಂದಿ ಸೆರೆಹಿಡಿದಿದ್ದಾರೆ. ಈ ಪೈಕಿ ಯಾವುದು ನರಭಕ್ಷಕ ಚಿರತೆ ಎಂಬುದು ಪರೀಕ್ಷೆಯಿಂದ ಇನ್ನಷ್ಟೇ ಗೊತ್ತಾಗಬೇಕಿದೆ. ನೆಲಮಂಗಲ ತಾಲೂಕಿನ ಶಿವಗಂಗೆ ಬೆಟ್ಟ ಪ್ರದೇಶದ ಕಂಬಾಳು ಗೊಲ್ಲರ ಹಟ್ಟಿ ಗ್ರಾಮದ ಬಳಿ ಇಟ್ಟ ಬೋನಿನಲ್ಲಿ ಸೋಮವಾರ ಒಂದು ಚಿರತೆ ಸೆರೆಸಿಕ್ಕರೆ, ಮಂಗಳವಾರ ಮತ್ತೊಂದು ಚಿರತೆ ಸಿಕ್ಕಿಬಿದ್ದಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಐಪಿಎಲ್ 2025: 13 ವರ್ಷದ ಕ್ರಿಕೆಟಿಗನಿಗೆ 1.1 ಕೋಟಿ – ದಾಖಲೆಯ ಮಾರಾಟ
ಸುದ್ದಿ



ಸೋನಿಯಾ ಮಾದರಿ ಅಧಿಕಾರ ತ್ಯಾಗ ಮಾಡಲು ಸಲಹೆ

ಡಿಕೆಶಿ ದಿಲ್ಲಿಗೆ: ಸಂಪುಟ ಪುನಾರಚನೆಯ ಸುಳಿವು

ಬೆಂಗಳೂರು: ಕೆಲ ದಿನಗಳಿಂದ ಪದೇಪದೆ ಕೇಳಿಬರುತ್ತಿರುವ ಸಚಿವ ಸಂಪುಟ ಪುನಾರಚನೆಯ 'ಗುಸುಗುಸು'ಗೆ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪರೋಕ್ಷವಾಗಿ 'ಧ್ವನಿ' ನೀಡುವ ಪ್ರಯತ್ನವನ್ನು ಮಾಡುವ ಮೂಲಕ ವಿಷಯವನ್ನು ಮುನ್ನಲೆಗೆ ತಂದಿದ್ದಾರೆ.

ಉಪಚುನಾವಣೆ ಬಳಿಕ ರಾಜ್ಯ ಸಂಪುಟದ ಕೆಲ ಸಚಿವರನ್ನು ಕೈಬಿಟ್ಟು, ಬೇರೆಯವರಿಗೆ ಅವಕಾಶ ನೀಡುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೆ ಈ ವಾದವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಬಹುತೇಕ ಸಚಿವರು ತಳ್ಳಿಹಾಕಿದ್ದರು. ಆದರೀಗ ಡಿಕೆಶಿ ಅವರು 'ತ್ಯಾಗ'ದ ಮಾತುಗಳನ್ನು ಆಡುವ ಜತೆಜತೆಗೆ ಕೆಲ ಸಚಿವರಿಗೆ ಈಗಾಗಲೇ ತ್ಯಾಗ ಮಾಡಲು ಸೂಚನೆ ನೀಡಲಾಗಿದೆ ಎನ್ನುವ ಮೂಲಕ ಸಚಿವಾಕಾಂಕ್ಷಿಗಳ ಆಸೆಗೆ ನೀರೆರಿದ್ದಾರೆ. ಮಂಗಳವಾರ ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಸಭಾಂಗಣದಲ್ಲಿ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡುವಾಗ, ಸಂಪುಟ ಪುನಾರಚನೆಯ ಸುಳಿವನ್ನು ನೀಡಿದ್ದಾರೆ. ಇದರೊಂದಿಗೆ ಈ ಹೇಳಿಕೆ ನೀಡಿದ ಬೆನ್ನಲ್ಲೇ, ದೆಹಲಿಗೆ ತೆರಳಿದ್ದು ಅಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ ಎನ್ನುವ ಮಾತು ಕೇಳಿಬಂದಿದೆ. ಈ ಎಲ್ಲ ಬೆಳವಣಿಗೆಯ ಬೆನ್ನಲ್ಲೇ, ರಾಜ್ಯದಲ್ಲಿ ಸಂಪುಟ ಪುನಾರಚನೆಗೆ ಕಾಲ ಸನಿಹಿತವಾಗಿದೆ ಎನ್ನುವ ಮಾತುಗಳಿಗೆ ಪುಷ್ಟಿ ಸಿಕ್ಕಿದೆ.

ಕಾಂಗ್ರೆಸ್ ಎಂದರೆ ತ್ಯಾಗ

ಭಾರತ್ ಜೋಡೋ ಸಭಾಂಗಣದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ತ್ಯಾಗದ ಸಂಕೇತ. ಸೋನಿಯಾ, ರಾಹುಲ್ ಅವರು ಪಕ್ಷ ಹಾಗೂ ದೇಶಕ್ಕಾಗಿ ಅನೇಕ ತ್ಯಾಗವನ್ನು ಮಾಡಿದ್ದಾರೆ. ದೇಶದಲ್ಲಿ ಯುಪಿಎ ಸರಕಾರ ಬಂದಾಗ ಸೋನಿಯಾ ಗಾಂಧಿ ಅವರಿಗೆ ಎರಡು ಬಾರಿ ಪ್ರಧಾನ ಮಂತ್ರಿಯಾಗಲು ಅವಕಾಶವಿತ್ತು. ಆದರೆ ಆ ಸ್ಥಾನವನ್ನು ಸ್ಥಾನ ತ್ಯಾಗ ಮಾಡಿದರು. ಬದಲಾಗಿ ಮನಮೋಹನ್ ಸಿಂಗ್ ಅವರಿಗೆ ನೀಡಿದರು. ಆದರೆ ಇತ್ತೀಚಿನ ದಿನದಲ್ಲಿ ಗ್ರಾ.ಪಂ. ಅಧ್ಯಕ್ಷರು ಅಧಿಕಾರ ಅವಧಿ ಮುಗಿದ ಬಳಿಕ ರಾಜೀನಾಮೆ ನೀಡಲು ಸಿದ್ಧರಿರುವುದಿಲ್ಲ. ಈ ರೀತಿ ಮಾಡಬಾರದು ಎಂದರು.

ರಾಹುಲ್ ಜತೆ ಡಿಕೆಶಿ ಚರ್ಚೆ

ಸಂಪುಟ ಪುನಾರಚನೆಯ ಸುಳಿವಿನ ಬೆನ್ನಲ್ಲೇ, ಡಿ.ಕೆ. ಶಿವಕುಮಾರ್ ಅವರು ದೆಹಲಿ ಪ್ರಯಾಣ ಬೆಳೆಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಅಧಿಕೃತವಾಗಿ ಜಲ ವಿವಾದಗಳ ಸಭೆ ಹಾಗೂ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅಧಿಕಾರ ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅದಾದ ಬಳಿಕ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಸಚಿವ ಸಂಪುಟ ಪುನಾರಚನೆ, ಉಪಚುನಾವಣೆ ಫಲಿತಾಂಶ ಸೇರಿದಂತೆ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸಂಪುಟ ಪುನಾರಚನೆ ಸಿಎಂ ಹಾಗೂ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಆದರೆ ನಿಗಮ ಮಂಡಳಿ ಅಧ್ಯಕ್ಷರುಗಳಿಗೆ 2 ವರ್ಷ ರಾಜೀನಾಮೆ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ.
- ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಇನ್ನೊಬ್ಬರಿಗೆ ಅವಕಾಶ ಕೊಡಿ

ಈ ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ವರ್ಷವಿತ್ತು. ಆದರೀಗ ಅಧಿಕಾರವಾಧಿಯನ್ನು ಎರಡೂವರೆ ವರ್ಷಕ್ಕೆ ಏರಿಸಲಾಗಿದೆ. ತಮ್ಮ ಸಮಯ ಮುಗಿಯುತ್ತಿದ್ದಂತೆ ರಾಜೀನಾಮೆ ನೀಡಬೇಕು. ಇದೇ ರೀತಿ ಕೆಲ ಸಚಿವರಿಗೂ ಎರಡುವರೆ ವರ್ಷದ ಬಳಿಕ ರಾಜೀನಾಮೆಗೆ ಸೂಚಿಸಲಾಗಿದೆ. ಇನ್ನೊಬ್ಬರಿಗೆ ಅವಕಾಶ ಸಿಗಲಿ ಎನ್ನುವ ಕಾರಣಕ್ಕೆ ಈ ರೀತಿ ಮಾಡಲಾಗಿದೆ ಹೊರತು ಇನ್ಯಾವುದೇ ಕಾರಣವಿಲ್ಲ ಎಂದು ಹೇಳುವ ಮೂಲಕ ಸಂಪುಟ ಪುನಾರಚನೆಯ ಸುಳಿವನ್ನು ನೀಡಿದರು. ಡಿಕೆ ಶಿವಕುಮಾರ್ ಅವರ ಹೇಳಿಕೆಯ ಬೆನ್ನಲ್ಲೇ ಪಕ್ಷದಲ್ಲಿ ಭಾರಿ ಚರ್ಚೆಗೆ ಕಾರಣವಾಗಿತ್ತು. ಇದರ ಬೆನ್ನಲ್ಲೇ ತಮ್ಮ ಹೇಳಿಕೆಯನ್ನು ಹಿಂಪಡೆಯುವ ರೀತಿಯಲ್ಲಿ ಮಾತನಾಡಿರುವ ಡಿಕೆಶಿ, ಸಂಪುಟ ಪುನಾರಚನೆ ಬಗ್ಗೆ ನನಗೆ ಗೊತ್ತಿಲ್ಲ. ಗೊತ್ತಾದಾಗ ಮಾತನಾಡುತ್ತೇನೆ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು.

ವಕ್ಫ್ ಬೋರ್ಡ್ ಕಿಚ್ಚು ಬಿಜೆಪಿಯಲ್ಲೇ ಬೆಂಕಿ

ಪ್ರತ್ಯೇಕ ಹೋರಾಟ ಕೈಬಿಡಲು ಬಸನಗೌಡ ಪಾಟೀಲ್ ಯತ್ನಾಳ್ ನಕಾರ
ಬಿವೈವಿ ಬಣದಿಂದ ವರಿಷ್ಠರಿಗೆ ದೂರು | ಇಕ್ಕಟ್ಟಿನಲ್ಲಿ ವಿಜಯೇಂದ್ರ ತಂಡ

ಬೆಂಗಳೂರು: ವಕ್ಫ್ ವಿರುದ್ಧ ಕೇಂದ್ರದ ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಆರಂಭವಾಗಿರುವ ಜನಾಂದೋಲನ ಯಾತ್ರೆಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಅವರ ಆಪ್ತರು ವಿರೋಧಿಸಿ, ದೂರು ನೀಡುವ ಎಚ್ಚರಿಕೆಯನ್ನು ನೀಡಿರುವುದು ಇದೀಗ ವಿಜಯೇಂದ್ರ ಆ್ಯಂಡ್ ಟೀಂ ಅನ್ನೇ ಇಕ್ಕಟ್ಟಿಗೆ ಸಿಲುಕಿಸಿದೆ.

ಹೌದು, ಯತ್ನಾಳ್ ಬಣದ ವಿರುದ್ಧ ಬಿಜೆಪಿ ರಾಷ್ಟ್ರೀಯ ನಾಯಕರಿಗೆ ದೂರು ನೀಡುವ ಮಾತುಗಳನ್ನು ವಿಜಯೇಂದ್ರ ಹಾಗೂ ಅವರ ಆಪ್ತರು ಹೇಳಿದ್ದರು. ಆದರೆ ವಕ್ಫ್ ನೋಟಿಸ್ ವಿರುದ್ಧ ಯತ್ನಾಳ್ ಅವರು ಆರಂಭಿಸಿರುವ ಜನಾಂದೋಲನ ಯಾತ್ರೆಗೆ ದೂರು ನೀಡಲು ಮುಂದಾಗಿರುವುದು ಬಿಜೆಪಿಯಲ್ಲಿಯೇ ವಿರೋಧಕ್ಕೆ ಕಾರಣವಾಗಿದೆ. ಹಿಂದೂ ದೇವಾಲಯ, ಸರಕಾರಿ ಜಮೀನು, ಕೃಷಿಕರ ಜಮೀನುಗಳ ರಕ್ಷಣೆಗೆಂದು ಆರಂಭಿಸಿರುವ 'ಜನಪರ' ಹೋರಾಟದ ವಿರುದ್ಧ ದೂರು ನೀಡುವ ಮೂಲ ಯಾವ ಸಂದೇಶವನ್ನು ರವಾನಿಸಲು ವಿಜಯೇಂದ್ರ ಪಯತ್ನಿಸುತ್ತಿದ್ದಾರೆ ಎನ್ನುವ ಪ್ರಶ್ನೆಗಳನ್ನು ಬಿಜೆಪಿ ನಾಯಕರು ಎತ್ತಿದ್ದಾರೆ.

ಹಿಂದೂ ರೈತರನ್ನೇ ಗುರಿಮಾಡಿ ನೋಟಿಸ್ ನೀಡಲಾಗಿದೆ ಎನ್ನುವ ಆರೋಪ ಕೇಳಿಬರುತ್ತಿರುವುದರಿಂದ, ಈ ಹಂತದಲ್ಲಿ ರಾಜ್ಯ ಬಿಜೆಪಿ ಘಟಕವೇ ಮಾಡಬೇಕಿದ್ದ ಕೆಲಸವನ್ನು ಯತ್ನಾಳ್ ತಂಡ ಮಾಡುತ್ತಿದೆ. ಇಂತಹ ಹೋರಾಟಕ್ಕೆ ಪಕ್ಷದ ರಾಜ್ಯಾಧ್ಯಕ್ಷರಾಗಿ ಬೆಂಬಲ ನೀಡಬೇಕಿತ್ತು. ಬೆಂಬಲ ನೀಡಲು ಸಾಧ್ಯವಾಗದಿದ್ದರೆ, ಕನಿಷ್ಠ ಮೌನವಾಗಿರಬೇಕು.

→ 4

ದೆಹಲಿ ನಾಯಕರಿಗೆ ಪೂರ್ಣ ವರದಿ ಸಲ್ಲಿಕೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಯತ್ನಾಳ್ ಹಾಗೂ ತಂಡದ ವಿರುದ್ಧ ದೂರು ಸಲ್ಲಿಸಲು ಸಜ್ಜಾಗುತ್ತಿದ್ದಂತೆ, ವಿಜಯೇಂದ್ರ ವಿರೋಧಿ ಬಣವೂ ಪಕ್ಷದ ವರಿಷ್ಠರನ್ನು ಭೇಟಿಯಾಗಲು ತೀರ್ಮಾನಿಸಿದೆ. ಆದರೆ ಈ ಭೇಟಿಯ ವೇಳೆ ವಿಜಯೇಂದ್ರ ಅಥವಾ ಇನ್ಯಾರದ್ದೇ ವಿರುದ್ಧ ದೂರು ನೀಡುವ ಬದಲು, ರಾಜ್ಯದಲ್ಲಾಗಿರುವ ವಕ್ಫ್ ವಿವಾದದ ಸಂಪೂರ್ಣ ಮಾಹಿತಿಯ ವರದಿಯನ್ನು ಸಲ್ಲಿಸಲಿದ್ದಾರೆ. ಈ ವೇಳೆ ಜನಾಂದೋಲನ ಯಾತ್ರೆಯ ವೇಳೆ ಜನರು ಹೇಳಿಕೊಂಡಿರುವ ದೂರುಗಳನ್ನು ಸಿದ್ಧಪಡಿಸಿ, ಯಾವೆಲ್ಲ ರೀತಿಯಲ್ಲಿ ಸಮಸ್ಯೆಯಾಗುತ್ತಿದೆ? ಈ ಸಮಸ್ಯೆಗಳಿಗೆ ಇರುವ ಪರಿಹಾರ ಸೇರಿದಂತೆ ವಿಸ್ತಾರ ವರದಿಯನ್ನು ನೀಡಲಿದ್ದಾರೆ. ಕೇಂದ್ರ ಸರಕಾರ ತರಲು ಹೊರಟಿರುವ ವಕ್ಫ್ ಕಾಯಿದೆ ತಿದ್ದುಪಡಿಗೆ ಪೂರಕವಾಗಿ ಈ ವರದಿ ಇರಲಿದೆ ಎಂದು ತಿಳಿದುಬಂದಿದೆ.

ಆಂದೋಲನದ ಮಾಸ್ಟರ್‌ಮೈಂಡ್ ಲಿಂಬಾವಳಿ

ಬಸನಗೌಡ ಯತ್ನಾಳ್, ರಮೇಶ್ ಜಾರಕಿಹೊಳಿ ನೇತೃತ್ವದಲ್ಲಿ ಆರಂಭ ಗೊಂಡಿರುವ ವಕ್ಫ್‌ನ ಈ ಜನಾಂದೋಲನ ಯಾತ್ರೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದಾರೆ. ರಾಜ್ಯದಲ್ಲಿ ವಕ್ಫ್ ವಿಷಯವನ್ನು ಬಸನಗೌಡ ಯತ್ನಾಳ್ ಅವರು ಆರಂಭಿಸಿದರೂ, ಇದನ್ನು ಯಾವ ರೀತಿ ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಸ್ಪಷ್ಟತೆ ಇರಲಿಲ್ಲ. ಈ ಹಂತದಲ್ಲಿ ಲಿಂಬಾವಳಿ ಅವರು ವಾರ್ ರೂಂ ಅನ್ನು ಆರಂಭಿಸಿ, ವಕ್ಫ್ ನೋಟಿಸ್‌ಗಳಿಗೆ ಸಂಬಂಧಿಸಿದಂತೆ ಮಾಹಿತಿ ಕಲೆಹಾಕಿ, ಕಾನೂನಾತ್ಮಕವಾಗಿ, ರಾಜಕೀಯವಾಗಿ ಹಾಗೂ ಸ್ವಪಕ್ಷೀಯರೂ ಧ್ವನಿ ಎತ್ತದ ರೀತಿಯಲ್ಲಿ ಹೋರಾಟವನ್ನು ರೂಪಿಸುವಲ್ಲಿ ಪ್ರಮುಖ ಮಾತ್ರವಹಿಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಈ ಹಿಂದೆ 12 ಬಾರಿ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿ, ಪ್ರಮುಖ ಯಾತ್ರೆಗಳ ಉಸ್ತುವಾರಿಯನ್ನು ವಹಿಸಿದ್ದರು. ಆ ಎಲ್ಲ ತಂತ್ರಗಾರಿಕೆಯನ್ನು ಈ ಜನಾಂದೋಲನ ಯಾತ್ರೆಯಲ್ಲಿಯೂ ಬಳಸಿರುವುದರಿಂದ, ಸ್ವಪಕ್ಷೀಯರ ವಿರೋಧದ ನಡುವೆಯೂ ಯಶಸ್ವಿಯಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಸಿಬಿಐಗೆ ವಹಿಸಲು ಕೋರಿದ್ದ ಅರ್ಜಿ ವಿಚಾರಣೆ ಡಿ.10ಕ್ಕೆ

ಮುಡಾ: ಸಿಎಂ ವಿರುದ್ಧದ ಅರ್ಜಿ ವಿಚಾರಣೆ ಮುಂದಕ್ಕೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ತಮ್ಮ ಕುಟುಂಬ ಸದಸ್ಯರಿಗೆ ಬದಲಿ ನಿವೇಶನ ಹಂಚಿಕೆ ಹಗರಣ ಆರೋಪದ ಸಂಬಂಧ ಸಿಎಂ ಸಿದ್ದರಾಮಯ್ಯ ವಿರುದ್ಧದ ಪ್ರಕರಣವನ್ನು ಸಿಬಿಐಗೆ ವಹಿಸ ಬೇಕು ಎಂದು ಕೋರಿ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಡಿ. 10ಕ್ಕೆ ನಿಗಧಿಪಡಿಸಿದೆ.

ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮಂಗಳವಾರ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಪೀಠ ನಡೆಸಿತು. ಜಮೀನಿನ ಮೂಲ ಮಾಲೀಕ ದೇವರಾಜು ಪರ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದ ಸುಪ್ರೀಂ ಕೋರ್ಟ್ ವಕೀಲ ದುಶ್ಯಂತ್ ದವೆ, ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲರ ಆದೇಶ ಎತ್ತಿಹಿಡಿದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿದೆ. ಈ ಅರ್ಜಿವಿಚಾರಣೆ ಡಿ. 5ಕ್ಕೆ ನಿಗದಿಯಾಗಿದೆ. ಈ ನಿಟ್ಟಿನಲ್ಲಿ ಸಿಬಿಐ ತನಿಖೆ ಕೋರಿದ ಅರ್ಜಿಯ ವಿಚಾರಣೆ ಡಿ. 5ರ ನಂತರ ನಿಗದಿಪಡಿಸಬೇಕು ಎಂದು ಮನವಿ ಮಾಡಿದರು.

ಮುಡಾ ದಾಖಲೆ ಪರಿಶೀಲನೆಗೆ ವಿರೋಧ

ಈ ವೇಳೆ ಸ್ನೇಹಮಯಿ ಕೃಷ್ಣ ಪರ ವಕೀಲ ಕೆ.ಜಿ.ರಾಘವನ್, ವಿಚಾರಣೆ ಮುಂದೂಡುವುದಕ್ಕೂ ಮುನ್ನ ತನಿಖೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ದಾಖಲೆ ಪರಿಶೀಲಿಸುವಂತೆ ಮಾಡಿದ ಮನವಿಗೆ ದುಶ್ಯಂತ್ ದವೆ ಆಕ್ಷೇಪಿಸಿದರು. ಅಂತಿಮವಾಗಿ ದಾಖಲೆ ಪರಿಶೀಲನೆ ನಡೆಸುವ ಅಗತ್ಯವಿಲ್ಲ ಎಂದು ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿ. 10ರಂದು 2.30ಕ್ಕೆ ನಿಗದಿಪಡಿಸಿತು.

ಪ್ರಕರಣದ ಹಿನ್ನೆಲೆ: ಸಿಎಂ ಪತ್ನಿ ಬಿ.ಎಂ. ಪಾರ್ವತಿ ಮುಡಾದಿಂದ ಕೋಟ್ಯಂತರ ಮೌಲ್ಯದ ನಿವೇಶನಗಳನ್ನು ಅಕ್ರಮವಾಗಿ ಪಡೆದಿದ್ದಾರೆ. ಪ್ರಕರಣದ ತನಿಖೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಲೋಕಾಯುಕ್ತ ಪೊಲೀಸರಿಗೆ ವಹಿಸಿದೆ. ಆದರೆ, ಸಿದ್ದರಾಮಯ್ಯ ಹಾಲಿ ಮುಖ್ಯಮಂತ್ರಿ ಆಗಿದ್ದು, ಲೋಕಾಯುಕ್ತ ಮತ್ತು ಪೊಲೀಸ್ ಪ್ರಾಧಿಕಾರಗಳಂತಹ ತನಿಖಾ ಸಂಸ್ಥೆಗಳ ಮೇಲೆ ಭಾರಿ ಪ್ರಭಾವ ಬೀರುವ ಸಾಧ್ಯತೆಯಿದೆ. ಆದ್ದರಿಂದ ಪ್ರಕರಣದ ತನಿಖೆ ಸಿಬಿಐಗೆ ವರ್ಗಾಯಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

ಫೆಂಗಲ್ ಚಂಡಮಾರುತ ತ.ನಾಡಿನಲಿ ಕಟ್ಟೆಚ್ಚರ

ಚೆನ್ನೈ: ಬಂಗಾಳ ಕೊಲ್ಲಿಯಲ್ಲಿ ವಾಯು ಭಾರ ಕುಸಿತವಾಗಿ ಫೆಂಗಲ್ ಚಂಡಮಾರುತ ಸೃಷ್ಟಿಯಾಗಿದ್ದು, ತಮಿಳುನಾಡು ಕರಾವಳಿಗೆ ಅಪ್ಪಳಿಸಲಿದೆ. 4 ದಿನಗಳ ಕಾಲ ಭಾರಿ ಮಳೆಯಾಗುವ ನಿರೀಕ್ಷೆಯಿದ್ದು, ತಮಿಳುನಾಡಿನ ಕರಾವಳಿ ಪ್ರದೇಶಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಚಂಡಮಾರುತ ಬೆಂಗಳೂರು ನಗರದ ಮೇಲೂ ಪ್ರಭಾವ ಬೀರಲಿದ್ದು, ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಫೆಂಗಲ್ ಚಂಡಮಾರುತ ಬುಧವಾರ ತೀವ್ರಗೊಳ್ಳಲಿದ್ದು, ಉತ್ತರ-ವಾಯುವ್ಯ ದಿಕ್ಕಿನತ್ತ ಚಂಡಮಾರುತ ಚಲಿಸಲಿದೆ.

ದರ್ಶನ್ ಜಾಮೀನು ವಿಚಾರಣೆ ಮುಂದಕ್ಕೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಹಾಗೂ ಇತರ ಆರೋಪಿ ಗಳು ಸಲ್ಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆಯ ನ.28ಕ್ಕೆ ಮುಂದೂಡಲಾ ಗಿದೆ. ಜಾಮೀನು ಅರ್ಜಿಗಳ ವಿಚಾರಣೆ ಯನ್ನು ನ್ಯಾ.ಎಸ್.ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ ನಡೆಸಿತು. ಎರಡೂವರೆ ತಾಸು ವಾದ ಮಂಡಿಸಿದ ಹಿರಿಯ ವಕೀಲರಾದ ನಾಗೇಶ್ ಅವರು ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ ತಂದು ಕೊಲೆ ಮಾಡಲಾಗಿಲ್ಲ ಎಂದು ವಾದಿಸಿದರು.

ಮುಂದುವರಿದ ಜಿಟಿಡಿ-ಸಾರಾ ವಾಕ್ಸಮರ

ಜೆಡಿಎಸ್‌ಗೆ ಸೋಲಿನ ಬರೆ ಶಾಸಕರ ಪಕ್ಷಾಂತರ ಭೀತಿ

ಬೆಂಗಳೂರು: ಜೆಡಿಎಸ್ ಪಕ್ಷದ ಸ್ಥಿತಿ ಸದ್ಯಕ್ಕೆ ತ್ರಿಶಂಕು ಹಂತ ತಲುಪಿದೆ. ವಿಧಾನಸಭೆ ಚುನಾವಣೆಯಲ್ಲಿ ಸೋಲು ಕಂಡ ಮೇಲೆ ಬಿಜೆಪಿ ಹಾಗೂ ಜೆಡಿಎಸ್ ಲೋಕಸಭೆಯಲ್ಲಿ ಮೈತ್ರಿ ಮಾಡಿಕೊಂಡವು. ಇದು ಅಂದಿಗೆ ಅನುಕೂಲವಾಗಿದ್ದರೂ, ಈಗಿನ ಉಪಚುನಾವಣೆಯಲ್ಲಿ ಲೆಕ್ಕಾಚಾರ ಬದಲಾಗಿದೆ.

ವಿಶ್ವವಾಣಿ ವಿಶೇಷ

ಇದೇ ವೇಳೆ ಶಾಸಕ ಸಿ.ಪಿ. ಯೋಗೇಶ್ವರ್ ಹೇಳಿಕೆ ಹಾಗೂ ದಳದ ಜಿ.ಟಿ.ದೇವೇಗೌಡ ಹಾಗೂ ಸಾ.ರಾ.ಮಹೇಶ್ ಅವರ ಮುನಿಸು, ಮತ್ತೊಂದೆಡೆ ಸಿ.ಎಂ.ಇಬ್ರಾಹಿಂ ಅವರ ನಡೆ ಮತ್ತೊಂದು ಸುತ್ತಿನ ಪರ್ವಕ್ಕೆ ಕಾರಣವಾಗಿ ಜೆಡಿಎಸ್‌ನ ಭವಿಷ್ಯದ ಬಗ್ಗೆ ಹಲವು ಚರ್ಚೆ ಯಾಗುತ್ತಿದೆ.

ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿ ಕೊಂಡರೂ ಅದು ರಾಜ್ಯ ಮಟ್ಟದ ನಾಯಕರೊಂದಿಗೆ ಆಗಿಲ್ಲ. ದೆಹಲಿ ಮಟ್ಟದಲ್ಲಿ ಜೆಡಿಎಸ್ ಒಪ್ಪಂದ ಮಾಡಿಕೊಂಡಿತ್ತು. ಹೀಗಾಗಿ, ಬಿಜೆಪಿಯ ನಾಯಕರೊಂದಿಗೆ ಹೇಳಿಕೊಳ್ಳುವ ಹೊಂದಾಣಿಕೆ ಜೆಡಿಎಸ್‌ಗೆ ಇಂದಿಗೂ ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ಮೈತ್ರಿ ನಾಯಕರ ನಡುವೆ ಹೊಂದಾಣಿಕೆ ಕೊರತೆಯ ಬಗ್ಗೆ ಚರ್ಚೆಗಳು ನಡೆಯುತ್ತಿರುತ್ತವೆ.

→ 4

ಆಪರೇಷನ್ ಯೋಗಿ ?

ಉಪಚುನಾವಣೆಯಲ್ಲಿ ಭರ್ಜರಿ ಗೆಲುವು ಕಂಡ ಕಾಂಗ್ರೆಸ್ ತನ್ನ ಸದಸ್ಯ ಬಲವನ್ನು 139 ಕ್ಕೆ ಏರಿಸಿಕೊಂಡಿದೆ. ಇದೇ ವೇಳೆ ಪಕ್ಷ ಟಾಸ್ಕ್ ನೀಡಿದರೆ ಜೆಡಿಎಸ್ ಶಾಸಕರನ್ನು ಕಾಂಗ್ರೆಸ್‌ಗೆ ತರುತ್ತೇನೆ ಎಂಬ ಶಾಸಕ ಸಿ.ಪಿ.ಯೋಗೇಶ್ವರ್ ಹೇಳಿದ್ದಾರೆ. ಇದಕ್ಕೆ ಜೆಡಿಎಸ್ ನ ಶಾಸಕರು ತಿರುಗಿ ಬಿದ್ದಿದ್ದರೂ, ಅಂತರಾಳದಲ್ಲಿ ಏನೋ ನಡೆಯುತ್ತಿದೆ ಎಂದು ದಳಪತಿಗಳೂ ಕೂಡ ಲೆಕ್ಕಾಚಾರ ಹಾಕಿದ್ದಾರೆ. ಒಂದು ವೇಳೆ ಜೆಡಿಎಸ್ ನಿಂದ ಒಂದಷ್ಟು ಜನ ಹೊರಬಿದ್ದರೆ ಪಕ್ಷದ ಸ್ಥಿತಿ ಅಧೋಗತಿಯಗಿಳಿಯಲಿದೆ. ಇದೇ ವೇಳೆ ಪಕ್ಷಕ್ಕೆ ಯಾರೇ ಬಂದರೂ ಸ್ವಾಗತ ಎಂದು ಸ್ವತಃ ಸಚಿವರೇ ಹೇಳಿರುವುದು ಕೂಡ ಜೆಡಿಎಸ್‌ಗೆ ನುಂಗಲಾರದ ತುತ್ತಾಗಿದೆ.

ನನ್ನನ್ನು ಯಾರೂ ಸಂಪರ್ಕ ಮಾಡಿಲ್ಲ. ನಾನಿನ್ನೂ ಜೆಡಿಎಸ್ ನಲ್ಲೇ ಇದ್ದೇನೆ. ಎಲ್ಲಿಯೂ ನಾನು ಹೋಗಲ್ಲ. ಎಲ್ಲ ಪಕ್ಷದಲ್ಲೂ ಭಿನ್ನ ಅಭಿಪ್ರಾಯಗಳು ಇರುತ್ತವೆ. ಅಂತಹ ಅಭಿಪ್ರಾಯ ಭೇದ ನಮ್ಮಲ್ಲೂ ಇರಬಹುದು. ಅದಕ್ಕೆಂದು ನಾವೆಲ್ಲ ಪಕ್ಷ ತೊರೆದು ಕಾಂಗ್ರೆಸ್ ಸೇರುತ್ತೇವೆ ಎಂಬ ಹೇಳಿಕೆಯೂ ಸುಳ್ಳು. ನಾನು ಯಾವುದೇ ಪಕ್ಷಕ್ಕೆ ಹೋಗುವುದಿಲ್ಲ.
- ಶಾರದಾ ಪೂರ್ಯಾನಾಯ್ಕ, ಜೆಡಿಎಸ್ ಶಾಸಕಿ.

ಇಮ್ರಾನ್ ಬೆಂಬಲಿಗರ ಪ್ರತಿಭಟನೆ: ಕಂಡಲ್ಲಿ ಗುಂಡಿಕ್ಕಲು ಆದೇಶ

ಇಸ್ಲಾಮಾಬಾದ್: ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಿಡುಗಡೆಗೆ ಒತ್ತಾಯಿಸಿ ತೆಹ್ರಿಕ್ -ಇ-ಇನ್ಸಾಫ್ ಪಕ್ಷದ ಕಾರ್ಯಕರ್ತರು ನಡೆಸಿರುವ ಪ್ರತಿಭಟನೆ ಹಿಂಸಾರೂಪ ತಳೆದಿದ್ದು, ಅರೆಸೈನಿಕ ಪಡೆಗಳ ನಾಲ್ವರು ಯೋಧರು ಮತ್ತು ಇಬ್ಬರು ಪೊಲೀಸರು ಸೇರಿದಂತೆ ಆರು ಜನರು ಬಲಿಯಾಗಿದ್ದಾರೆ. ನೂರಕ್ಕೂ ಹೆಚ್ಚು ಯೋಧರು ಗಾಯಗೊಂಡಿದ್ದಾರೆ. ಹಲವೆಡೆ ಸೈನಿಕರ ಮೇಲೆ ಕಲ್ಲುತೂರಾಟ ನಡೆಸಲಾಗಿದೆ.

ಇಸ್ಕಾನ್ ಕೃಷ್ಣದಾಸ್‌ಗೆ ಬಾಂಗ್ಲಾ ಕೋರ್ಟ್ ಜಾಮೀನು ನಕಾರ

ಢಾಕಾ: ದೇಶದ್ರೋಹ ಆರೋಪದ ಮೇಲೆ ಸೋಮವಾರ ಬಂಧನಕ್ಕೊಳಗಾದ ಇಸ್ಕಾನ್‌ನ ಹಿಂದೂ ನಾಯಕ ಚಿನ್ಮಯ್ ಕೃಷ್ಣದಾಸ್ ಪ್ರಭುಗೆ ಬಾಂಗ್ಲಾದೇಶದ ಚಿತ್ತಗಾಂಗ್ ನ್ಯಾಯಾಲಯ ಜಾಮೀನು ನಿರಾಕರಿಸಿದೆ. ಇದರ ಬೆನ್ನಲ್ಲೇ ದೇಶಾದ್ಯಂತ ಹಿಂದೂಗಳ ಆಕ್ರೋಶ ಭುಗಿಲೆದ್ದಿದ್ದು, ಪ್ರತಿಭಟನೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಬಾಂಗ್ಲಾದ ಅಲ್ಪಸಂಖ್ಯಾತ ಹಿಂದೂಗಳ ಹಕ್ಕುಗಳ ಬಗ್ಗೆ ಮಾತನಾಡುವ ವೇಳೆ ಆಕ್ಷೇಪಾರ್ಹ ಮಾತುಗಳನ್ನಾಡಿದ್ದಾರೆಂದು ಆರೋಪಿಸಲಾಗಿದೆ.

ಸಂವಿಧಾನ ದಿನ ಆಚರಣೆಯಲ್ಲೂ ಆರೋಪ-ಪ್ರತ್ಯಾರೋಪ

10 ನಗರಗಳಲ್ಲಿ ಸಂವಿಧಾನ ಪೀಠಿಕೆಯ ಪ್ರತಿಕೃತಿ: ಸಿಎಂ

ಬೆಂಗಳೂರು: ಜಾತಿ ವ್ಯವಸ್ಥೆಯಿಂದಲೇ ಅಸಮಾನತೆ-ಮನುಷ್ಯ ತಾರತಮ್ಯ ಸೃಷ್ಟಿಯಾಗಿದೆ. ಸಂವಿಧಾನ ವಿರೋಧಿಗಳು ಮತ್ತು ಮನುಸ್ಮೃತಿ ಬಗ್ಗೆ ಎಚ್ಚರವಹಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿ, ನಾನು ಮುಖ್ಯಮಂತ್ರಿ ಆಗಿದ್ದೇ ಈ ಸಂವಿಧಾನ ಬಲದಿಂದ ಎಂದರು.

ಸಮಾಜ ಕಲ್ಯಾಣ ಇಲಾಖೆ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ 75 ನೇ ವರ್ಷದ ಸಂವಿಧಾನ ಅಂಗೀಕರಣ ದಿನೋತ್ಸವವನ್ನು ಉದ್ಘಾಟಿಸಿ, ಪ್ರಜಾಪ್ರಭುತ್ವ ದಿನದ ಯಶಸ್ಸಿಗೆ ಶ್ರಮಿಸಿದ ಜಿಲ್ಲಾಧಿಕಾರಿಗಳು ಮತ್ತು ನಾಗರಿಕ ಸಂಘಟನೆಗಳ ಮುಖಂಡರಿಗೆ ಪ್ರಶಸ್ತಿ ಪತ್ರ ವಿತರಿಸಿ ಮಾತನಾಡಿದರು.

ವಿಶ್ವದಲ್ಲಿ ದೀರ್ಘಕಾಲ ಜಾರಿಯಲ್ಲಿರುವ ಸಂವಿಧಾನ ನಮ್ಮದಾಗಿದೆ. ಸಂವಿಧಾನ ಜಾರಿ ಸಭೆಯಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಕೊಟ್ಟ ಎಚ್ಚರಿಕೆಯನ್ನು ನಾವ್ಯಾರೂ ಮರೆಯಬಾರದು. ಎಷ್ಟೇ ಒಳ್ಳೆಯ ಸಂವಿಧಾನ ನಮ್ಮದಾಗಿದ್ದರೂ ಅದು ಕೆಟ್ಟವರ ಕೈಗೆ ಹೋದರೆ ಪರಿಣಾಮವೂ ಕೆಟ್ಟದಾಗಿರುತ್ತದೆ. ಸಂವಿಧಾನದ ಮೌಲ್ಯಗಳನ್ನು ಪಾಲಿಸುವವರ ಕೈಯಲ್ಲಿ ಈ ಸಂವಿಧಾನ ಇದ್ದಾಗ ಮಾತ್ರ ಸಾರ್ಥಕತೆ ಬರುತ್ತದೆ ಎಂದು ಬಾಬಾ ಸಾಹೇಬರು ಹೇಳಿದ್ದರು. ಆದ್ದರಿಂದ ಈ ಸಂವಿಧಾನದ ಮೌಲ್ಯಗಳನ್ನು ವಿರೋಧಿಸುವವರ ಕೈಗೆ ಅಧಿಕಾರ ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು. ರಾಜ್ಯದ 10 ನಗರಗಳಲ್ಲಿ ಸಂವಿಧಾನ ಪೀಠಿಕೆಯ ಪ್ರತಿಕೃತಿಗಳನ್ನು ನಿರ್ಮಿಸಲು ತಮ್ಮ ಸರಕಾರ ಸಂಕಲ್ಪ ಮಾಡಿದೆ ಎಂದು ಸಿದ್ದರಾಮಯ್ಯ ಪ್ರಕಟಿಸಿದರು.

→ 4

- ನಮಗೆ ಬಂದಿರುವ ಸ್ವಾತಂತ್ರ್ಯ ಸಫಲ ಆಗಬೇಕಾದರೆ ಎಲ್ಲರಿಗೂ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಸಾಧ್ಯ.
- ವಿಶ್ವದ ಎಲ್ಲ ಸಂವಿಧಾನಗಳನ್ನು ಅಧ್ಯಯನ ಮಾಡಿದ ಬಳಿಕ ಅಂಬೇಡ್ಕರ್ ನಮ್ಮ ಅತ್ಯುನ್ನತವಾದ ಸಂವಿಧಾನ ರಚಿಸಿದ್ದಾರೆ.
- ನಮ್ಮ ಸರಕಾರ ಕೂಡ ಸಂವಿಧಾನದ ಆಶಯಗಳನ್ನು ಈಡೇರಿಸಲು ಹತ್ತು ಹಲವು ಭಾಗ್ಯಗಳನ್ನು ಜಾರಿಮಾಡಿದೆ.

ಸಂವಿಧಾನ ದಿನದ ಅಂಗವಾಗಿ ಸಿಎಂ ವಿಧಾನಸೌಧದ ಎದುರಿನ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ಮೋದಿ ಸರಕಾರದಲ್ಲಿ ಮಂತ್ರಿಯಾಗಿದ್ದ ಅನಂತ ಕುಮಾರ ಹೆಗ್ಡೆ ಸಾರ್ವಜನಿಕವಾಗಿ ಒಪ್ಪಿಕೊಂಡರು. ಆದರೆ ಮೋದಿ ಹಾಗೂ ಬಿಜೆಪಿಯವರಾಗಲಿ ಇದನ್ನು ವಿರೋಧಿಸಲಿಲ್ಲ. ಅವರನ್ನು ಮಂತ್ರಿ ಸ್ಥಾನದಿಂದ ಇಳಿಸಲಿಲ್ಲ. ಅವರ ಮಾತಿಗೆ ಅವರೆಲ್ಲರ ಸಮ್ಮತಿ ಇತ್ತು ಅಂತಲೇ ಅರ್ಥ. ಇದನ್ನು ದೇಶದ ಜನತೆ ಸರಿಯಾಗಿ ಅರ್ಥಮಾಡಿಕೊಳ್ಳಬೇಕು.
- ಸಿದ್ದರಾಮಯ್ಯ, ಮುಖ್ಯಮಂತ್ರಿ.

ಸಂವಿಧಾನ ಕೃತಿ ಪ್ರದರ್ಶನಕ್ಕಲ್ಲ: ಪ್ರಧಾನಿ



ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವೇಳೆ ಪ್ರಧಾನಿ ಮೋದಿ ಸಂವಿಧಾನಕ್ಕೆ ನಮಿಸಿದರು.

ದೆಹಲಿ: ದೇಶಕ್ಕೆ ಪೂಜ್ಯವೆನಿಸಿರುವ ಸಂವಿಧಾನ ಕೃತಿ ಪ್ರದರ್ಶನದ ವಸ್ತುವಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಗೆ ತಿರುಗೇಟು ನೀಡಿದ್ದಾರೆ. ಸಂವಿಧಾನ ದಿನಾಚರಣೆ ಅಂಗವಾಗಿ ಮಂಗಳವಾರ ಸುಪ್ರೀಂ ಕೋರ್ಟ್‌ನಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ, ಕಾಂಗ್ರೆಸ್ ನಡೆಸಿದ ಸಂವಿಧಾನ ಉಳಿಸಿ ಕಾರ್ಯಕ್ರಮದಲ್ಲಿ ರಾಹುಲ್ ಮಾಡಿದ ಭಾಷಣವನ್ನು ಪರೋಕ್ಷವಾಗಿ ಪ್ರಸ್ತಾಪಿಸಿದರು.

ಸಂವಿಧಾನದ ಕೃತಿಯನ್ನು ರಾಹುಲ್ ಓದಿಲ್ಲ ಎಂದು ನಾನು ಖಚಿತವಾಗಿ ಹೇಳಬಲ್ಲೆ ಎಂದ ಅವರು, ಮೋದಿ ಸಂವಿಧಾನವನ್ನು ಓದಿಲ್ಲ ಎಂಬ ಪ್ರತಿಪಕ್ಷ ನಾಯಕನ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು.

ದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ತರಲು ಹಲವು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಸಂವಿಧಾನದ ಮೌಲ್ಯಗಳನ್ನು ಬಲಪಡಿಸಿದೆ. ದೇಶಕ್ಕೆ ಪರಿವರ್ತನೆಯ ಸಮಯದಲ್ಲಿ ಸಂವಿಧಾನ ದಾರಿದೀಪವಾಗಿದೆ ಎಂದು ಅವರು ನುಡಿದರು.

ತುರ್ತುಪರಿಸ್ಥಿತಿಯ ಸವಾಲು ಸೇರಿದಂತೆ ದೇಶದ ಅಗತ್ಯಗಳು ಮತ್ತು ನಿರೀಕ್ಷೆಗಳನ್ನು ಈಡೇರಿಸುತ್ತ ಜೀವಂತವಾಗಿರುವ ಸಂವಿಧಾನ ಹರಿಯುವ ನದಿಯೆನಿಸಿದೆ. ಬದಲಾದ ಕಾಲಘಟ್ಟದಲ್ಲೂ ರಾಷ್ಟ್ರಕ್ಕೆ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಿದೆ ಎಂದು ಮೋದಿ ಬಣ್ಣಿಸಿದರು.

ಇದಕ್ಕೂ ಮುನ್ನ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಸಂವಿಧಾನ ದಿನಾಚರಣೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ ಧನಕರ್, ಪ್ರಧಾನಿ ನರೇಂದ್ರ ಮೋದಿ, ಪ್ರತಿಪಕ್ಷ ನಾಯಕರಾದ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು. ಈ ವೇಳೆ, ರಾಷ್ಟ್ರಪತಿಯವರು ವಿಶೇಷ ನಾಣ್ಯ ಮತ್ತು ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು.

ಆಂಧ್ರ ಗೃಹಿಣಿ ಸಾವು: ತನಿಖೆ ಆರಂಭ

ಬೆಂಗಳೂರು: ಆಂಧ್ರದ ತಿರುಪತಿಯಿಂದ ಬಳೇಪೇಟೆಯಲ್ಲಿರುವ ಸಂಬಂಧಿಕರ ಮನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಪತಿಯೊಂದಿಗೆ ಬಂದಿದ್ದ ಲಕ್ಷ್ಮಿ (25) ಎಂಬ ಗೃಹಿಣಿ ಸ್ನಾನಕ್ಕೆಂದು ತೆರಳಿದ ಸಂದರ್ಭದಲ್ಲಿ ನಿಗೂಢವಾಗಿ ಸಾವನ್ನಪ್ಪಿದ್ದಾರೆ. ಇದೀಗ ಈ ನಿಗೂಢ ಸಾವಿನ ತನಿಖೆ ಯನ್ನು ಪೊಲೀಸರು ಪ್ರಾರಂಭಿಸಿದ್ದಾರೆ. ಮೃತ ಲಕ್ಷ್ಮಿ ಬೆಳಗ್ಗೆ 9.30ರ ಸುಮಾರಿಗೆ ಸ್ನಾನ ಮಾಡಲು ಸ್ನಾನಗೃಹಕ್ಕೆ ತೆರಳಿದ್ದಾರೆ. 25 ನಿಮಿಷ ಕಳೆದರೂ ಆಕೆ ಹೊರಗೆ ಬಾರದಿದ್ದಾಗ ಪತಿ ತಪಾಸಣೆ ನಡೆಸಿದ್ದು, ಆಗ ಆಕೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ. ತಕ್ಷಣವೇ ಆಕೆಯನ್ನು ಆಂಬುಲೆನ್ಸ್ ಸಮೀಪದ ಆಸ್ಪತ್ರೆಗೆ ಸಾಗಿಸಲಾಗಿದೆ. ಆದರೆ, ಆಕೆ ಮೃತಪಟ್ಟಿದ್ದಾಳೆ ಎಂದು ವೈದ್ಯರು ಘೋಷಿಸಿದ್ದಾರೆ. ಈ ಸಮಯದಲ್ಲಿ ನನ್ನ ಹೆಂಡತಿಯ ಮುಖದಲ್ಲಿ ಗೀರು ಗುರುತುಗಳು ಕಂಡುಬಂದಿವೆ ಎಂದು ಮೃತ ಮಹಿಳೆ ಪತಿ ಆರೋಪಿಸಿದ್ದಾರೆ. ಸ್ಥಳಕ್ಕೆ ಎಫ್‌ಎಸ್‌ಎಲ್ ಮತ್ತು ಎಸ್‌ಒಸಿಒ ತಂಡಗಳು ಭೇಟಿ ನೀಡಿ ಮಾದರಿ ಮತ್ತು ಸುಳಿವ ಸಂಗ್ರಹಿಸಿ ಮೃತದೇಹ ಮರಣೋತ್ತರ ಪರೀಕ್ಷೆಗಾಗಿ ನೆಲಮಂಗಲ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯಲಾಗುತ್ತಿದೆ. ಸ್ನಾನಗೃಹ ದೊಳಗಿನ ಗ್ಯಾಸ್ ಗೀಸರ್‌ನಿಂದ ವಿಷಕಾರಿ ಕಾರ್ಬನ್ ಮಾನಾಕ್ಸೈಡ್ ಅನಿಲ ಉಸಿರಾಡಿರುವುದರಿಂದ ಸಾವು ಸಂಭವಿಸಿದೆ ಎಂದು ಶಂಕಿಸಲಾಗಿದೆ. ಆದರೆ, ಗೀಸರ್ ಆಫ್ ಆಗಿತ್ತು ಎಂದು ಆಕೆಯ ಪತಿ ಹೇಳಿದ್ದಾರೆ. ಆಕೆಯ ಮುಖದ ಮೇಲಿನ ಗೀರು ಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

Tracxn

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್

CIN: L72200KA2012PLC065294

ನೋಂ. ಕಚೇರಿ: ನಂ. ಎಲ್–248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ–560102. ದೂ: +91 90360 90116.

ಇ–ಮೇಲ್: investor.relations@tracxn.com, ವೆಬ್‌ಸೈಟ್ : www.tracxn.com

ಅಂಚೆ ಮತಪತ್ರದ ಬಗ್ಗೆ ಸದಸ್ಯರಿಗೆ ಸೂಚನೆ

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸೆಕ್ಷನ್ 108 ಮತ್ತು 110ರ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಗಳ ಕಾಯಿದೆ, 2013 ("ಕಾಯಿದೆ") ಓದಿಕೊಂಡಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ತದನಂತರ ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ, ನಿಯಂತ್ರಣ 44 ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಆಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಂತ್ರಗಳು, 2015 ("ಲಿಸ್ಟಿಂಗ್ ನಿಯಂತ್ರಣಗಳು"), (ಯಾವುದಾದರೂ ಶಾಸನಬದ್ಧ ಬದಲಾವಣೆ/ಗಳು ಅಥವಾ ಕಾಯಿದೆ ಮರುಸ್ಥಾಪನೆ(ಗಳು) ಅಥವಾ ನಿಯಮಗಳು ಅಥವಾ ಲಿಸ್ಟಿಂಗ್ ನಿಯಂತ್ರಣಗಳು, ಆಯಾ ಸಂದರ್ಭಕ್ಕನ್ನುಸಾರವಾಗಿ ಯಾವುದಾದರೂ ಜಾರಿಗೊಂಡಿದ್ದಲ್ಲಿ) ಕಾಲಾನುಕಾಲಕ್ಕೆ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ ಸುತ್ತೋಲೆಗಳು") ದಿಂದ ಯಾವುದಾದರೂ ಸುತ್ತೋಲೆಗಳು ನೀಡಲ್ಪಟ್ಟಿರುವಂತೆ, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ ("ಎಸ್‌ಎಸ್–2") ಸಾಮಾನ್ಯ ಸಭೆಗಳಿಗೆ ನೀಡಿದ ಸೆಕ್ರೆಟರಿಯಲ್ ಗುಣಮಟ್ಟ ಮತ್ತು ಇತರೆ ಅನ್ವಯವಾಗುವ ಯಾವುದೇ ಕಾನೂನು ಮತ್ತು ನಿಯಂತ್ರಣಗಳಂತೆ ಕಂಪನಿಯು ಸೆಕ್ಷನ್ 102ರ ಕಾಯಿದೆಯಂತೆ ಸಾಮಾನ್ಯ ಸಭೆಗಳ ಮೇಲಿನ ಅಂಚೆಮತಪತ್ರದ ಸೂಚನೆಯ ಜೊತೆಗೆ ವಿವರವಾದ ಹೇಳಿಕೆಗಳೊಂದಿಗೆ, ತಮ್ಮ ಇ–ಮೇಲ್ ವಿಳಾಸವನ್ನು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್)/ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ ರ ಬಳಿ ಮಂಗಳವಾರ ನವೆಂಬರ್ 22, 2024ರ ("ಕಟ್ ಆಫ್ ದಿನಾಂಕ") ಮೊದಲು ನೋಂದಾಯಿಸಿಕೊಂಡ ಸದಸ್ಯರಿಗೆ ಕಳುಹಿಸಿಕೊಡುವ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದೆ. ವಿದ್ಯುನ್ಮಾನ ಮಾದರಿಯಲ್ಲಿ ಅಂಚೆಮತ್ರಪತ್ರದ ಸೂಚನೆಯನ್ನು ಕಳುಹಿಸಿಕೊಡುವುದನ್ನು ಕಂಪನಿಯು ಮಂಗಳವಾರ, ನವೆಂಬರ್ 26, 2024ರಂದು ಮುಕ್ತಾಯಗೊಳಿಸಿದೆ.

ಅಂಚೆ ಮತ ಪತ್ರ ಸೂಚನೆಯು ಕಂಪನಿಯ ವೆಬ್‌ಸೈಟ್ www.tracxn.com ಮತ್ತು ಬಿಎಸ್‌ಇ ಲಿಮಿಟೆಡ್ ನ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್‌ನ www.nseindia.com ಹಾಗೂ ಇ–ಮತದಾನದ ಏಜೆನ್ಸಿಯ ವೆಬ್‌ಸೈಟ್ https://instavote.linkintime.co.in ನಲ್ಲಿ ಲಭ್ಯವಿದೆ. ಅಂಚೆಮತಪತ್ರ ಸೂಚನೆಯು ಲಭ್ಯವಾಗದೆ ಇದ್ದಂತಹ ಸದಸ್ಯರು ಈ ಮೇಲಿನ ವೆಬ್‌ಸೈಟ್‌ಗಳಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ವಿದ್ಯುನ್ಮಾನ ವಿಧಾನದ ಮೂಲಕ ಅಂಚೆಮತಪತ್ರ ಸೂಚನೆಯಲ್ಲಿ ತಿಳಿಸಿದಂತೆ ವ್ಯವಹಾರಗಳನ್ನು ವಿದ್ಯುನ್ಮಾನದ ಮೂಲಕ ನಡೆಸಬೇಕು. ಎಂಸಿಎ ಸುತ್ತೋಲೆಗಳಂತೆ ಅಂಚೆಮತಪತ್ರ ಸೂಚನೆಯು ಕೇವಲ ವಿದ್ಯುನ್ಮಾನವಾಗಿ ಮಾತ್ರ ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರೊಂದಿಗೆ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸಿದ ಸದಸ್ಯರಿಗೆ ಮಾತ್ರ ಕಳುಹಿಸಿಕೊಡಲಾಗುತ್ತದೆ. ಸದಸ್ಯರು ತಮ್ಮ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯವನ್ನು ಇ–ಮತದಾನ ವಿಧಾನದ ಮೂಲಕ ಮಾತ್ರ ಸಂವಹನ ನಡೆಸಬೇಕು.

ಕಂಪನಿಯು ತನ್ನೆಲ್ಲಾ ಸದಸ್ಯರು ತಮ್ಮ ಮತದಾನವನ್ನು ವಿದ್ಯುನ್ಮಾನವಾಗಿ ಚಲಾಯಿಸಲು ಇ–ಮತದಾನ ಸೌಲಭ್ಯ ಒದಗಿಸಲು ಲಿಂಕ್ ಇನ್‌ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ ("ಲಿಂಕ್ ಇನ್‌ಟೈಮ್") ನ್ನು ಬಳಸಿಕೊಳ್ಳಲಿದೆ. ಇ–ಮತದಾನದ ಅವಧಿಯ ವಿವರವನ್ನು ಈ ಕೆಳಗೆ ನೀಡಲಾಗಿದೆ.

ವಿಶೇಷ ನಡಾವಳಿ: 1. ಟ್ರ್ಯಾಕ್ಷನ್ ನೌಕರರ ಸ್ಟಾಕ್ ಆಪ್ಶನ್ ಯೋಜನೆ 2024 ರ ಪರಿಚಯಿಸಲು, ಅನುಷ್ಠಾನಗೊಳಿಸಲು ಅನುಮೋದನೆ	
ಮತದಾನಕ್ಕೆ ಅರ್ಹರಾಗಲು ಕಟ್ ಆಫ್ ದಿನಾಂಕ	ಶುಕ್ರವಾರ, ನವೆಂಬರ್ 22, 2024
ಇ–ಮತದಾನದ ಅವಧಿಯ ಆರಂಭ	09.00 ಎ.ಎಂ.(ಐಎಸ್‌ಟಿ) ಶುಕ್ರವಾರ, ನವೆಂಬರ್ 29, 2024
ಇ–ಮತದಾನದ ಮುಕ್ತಾಯ	05.00 ಪಿ.ಎಂ.(ಐಎಸ್‌ಟಿ) ಶನಿವಾರ, ಡಿಸೆಂಬರ್ 28, 2024

ಇ–ಮತದಾನದ ಮಾಡ್ಯೂಲ್‌ನ್ನು ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಲಿಂಕ್ ಇನ್‌ಟೈಮ್ ನಿಷ್ಕ್ರಿಯಗೊಳಿಸಲಾಗುವುದು. ಇ–ಮತದಾನದ ವಿವರವಾದ ವಿಧಾನವನ್ನು ಅಂಚೆಮತಪತ್ರ ಸೂಚನೆಯಲ್ಲಿ ತಿಳಿಸಲಾಗಿದೆ ಮತ್ತು ಇ–ಮತದಾನದ ಹೆಚ್ಚಿನ ವಿವರಗಳಿಗಾಗಿ ಸದಸ್ಯರು https://instavote.linkintime.co.in ಗೆ ಲಾಗ್‌ಆನ್ ಮಾಡಬಹುದು. 'ಕಟ್ ಆಫ್ ದಿನಾಂಕ' ದವರೆಗೆ ಸದಸ್ಯರಾಗಿಲ್ಲದವರಿಗೆ ಈ ಅಂಚೆಮತಪತ್ರ ಸೂಚನೆಯು ಕೇವಲ ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಆಗಿರುತ್ತದೆ.

ಒಂದು ವೇಳೆ ಸದಸ್ಯರು ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು, ತಮ್ಮ ಇ–ಮೇಲ್ ವಿಳಾಸವನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) ಬಳಿ ನೋಂದಾಯಿಸಿಲ್ಲವಾದರೆ, ತಮ್ಮ ಡಿಮ್ಯಾಟ್ ಖಾತೆಯನ್ನು ನಿರ್ವಹಿಸುವ ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) ಬಳಿ ನೋಂದಾಯಿಸಲು/ಅಪ್‌ಡೇಟ್ ಮಾಡಿಕೊಳ್ಳಲು ಕೋರಲಾಗಿದೆ.

ಕಂಪನಿಯ ನಿರ್ದೇಶಕ ಮಂಡಳಿಯು ಸಿಎಸ್ ಮನೀಶ್ ಎಲ್ ಘಿಯಾ ಪಾಲುದಾರ, ಮೆ॥ ಮನೀಶ್ ಘಿಯಾ ಅಸೋಸಿಯೇಟ್ಸ್, ಕಂಪನಿ ಕಾರ್ಯದರ್ಶಿಗಳು, ಮುಂಬಯಿ ಇವರನ್ನು ಅಂಚೆಮತದಾನ ಸೇರಿದಂತೆ ಇ–ಮತದಾನ ಪ್ರಕ್ರಿಯೆ ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರನ್ನಾಗಿ ನೇಮಿಸಿದೆ.

ಒಂದು ವೇಳೆ ನಡಾವಳಿಗಳು ಅನುಮೋದನೆಗೊಂಡರೆ, ಇ–ಮತದಾನದ ಕೊನೆಯ ದಿನಾಂಕ ಅಂದರೆ ಶನಿವಾರ ಡಿಸೆಂಬರ್ 28, 2024ರಂದು ತೇರ್ಗಡೆಯಾಗಬೇಕಾಗುತ್ತಿದೆ. ಅಂಚೆಮತಪತ್ರದ ಫಲಿತಾಂಶಗಳನ್ನು ಅಧ್ಯಕ್ಷರು ಅಥವಾ ಅಧ್ಯಕ್ಷರಿಂದ ಅಧಿಕೃತಗೊಂಡ ಇತರೆ ವ್ಯಕ್ತಿಯಿಂದ ಇ–ಮತದಾನ ಅಂತ್ಯಗೊಂಡ ಎರಡು ಕೆಲಸದ ದಿನಗಳಲ್ಲಿ ಘೋಷಿಸಲ್ಪಡುತ್ತದೆ. ಹೇಳಲಾದ ಫಲಿತಾಂಶಗಳ ಜೊತೆಗೆ ಪರಿಶೀಲಕರ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ www.tracxn.com ಮತ್ತು ಬಿಇಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ಮತ್ತು ಇ–ವೋಟಿಂಗ್ ಏಜೆನ್ಸಿಯ ವೆಬ್‌ಸೈಟ್ https://instavote.linkintime.co.in ನಲ್ಲಿ ನೀಡಲಾಗುತ್ತದೆ.

ಎಲೆಕ್ಟ್ರಾನಿಕ್ ಮತದಾನದ ಬಗ್ಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ಸದಸ್ಯರು ಫ್ರೀಕ್ವೆಂಟ್ಲಿ ಆಸ್ಕ್ಡ್ ಕ್ವೆಶ್ಚನ್ಸ್ (ಎಫ್‌ಎಕ್ಯು) ಮತ್ತು https://instavote.linkintime.co.in ನ "ಹೆಲ್ಪ್" ವಿಭಾಗದಲ್ಲಿ ಲಭ್ಯವಿರುವ ಇ–ವೋಟಿಂಗ್ ಕೈಪಿಡಿಯನ್ನು ಆಧಾರ ಮಾಡಿಕೊಳ್ಳಬಹುದು ಅಥವಾ enotices@linkintime.co.in ಇ–ಮೇಲ್ ಮಾಡಿ ಅಥವಾ ಈ ಸಂಖ್ಯೆ 022–4918 6000 ಗೆ ಕರೆಮಾಡಿ.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ,
ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/–
ಸುರಭಿ ಪಸಾರಿ
ಕಂಪನಿ ಸೆಕ್ರಟರಿ ಮತ್ತು
ಕಾಂಪ್ಲಯನ್ಸ್ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 26, 2024

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLDUB00309088 1. ಆನಂದ್ ಕುಮಾರ್ ಘೋಷಾಲ್ 2. ಪ್ರತೀತಿ ಡಿ	ಫ್ಲಾಟ್ ನಂ. ಸಿ-1001, ಹತ್ತನೇ ಮಹಡಿ, ಬ್ಲಾಕ್ ನಂ.-ಸಿ, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು - 560045, ಕರ್ನಾಟಕ	05.05.2024	ದಿನಾಂಕ 29.10.2024 ರಂತೆ ರೂ. 69,60,882.78/- (ರೂಪಾಯಿ ಅರವತ್ತ ಒಂಬತ್ತು ಲಕ್ಷ ಅರವತ್ತು ಸಾವಿರದ ಎಂಟು ನೂರ ಎಂಬತ್ತ ಎರಡು ಮತ್ತು ಪೈಸೆ ಎಪ್ಪತ್ತ ಎಂಟು ಮಾತ್ರ)
2.	ಸಾಲ ಖಾತೆ ನಂ. HHLDUB00423953 1. ರಾಮಸಾಮಿ ಪೋತಿಪಿಚೈ 2. ಸಬಿತಾ ಗೋಪಿನಾಥನ್	ಫ್ಲಾಟ್ ನಂ. ಡಿ-1002, 10ನೇ ಮಹಡಿ, ಟವರ್ ''ಡಿ'' ಓರ್ಝೋನ್ ಅರ್ಬಾನಾ ಅವೆನ್ಯೂ ಬೆಂಗಳೂರು ಗ್ರಾಮಾಂತರ ಕರ್ನಾಟಕ ಬೆಂಗಳೂರು - 562114, ಕರ್ನಾಟಕ	05.05.2024	ದಿನಾಂಕ 12.11.2024 ರಂತೆ ರೂ. 83,25,065.66/- (ರೂಪಾಯಿ ಎಂಬತ್ತ ಮೂರು ಲಕ್ಷ ಇಪ್ಪತ್ತ ಐದು ಸಾವಿರದ ಅರವತ್ತ ಐದು ಮತ್ತು ಪೈಸೆ ಅರವತ್ತ ಆರು ಮಾತ್ರ)
3.	ಸಾಲ ಖಾತೆ ನಂ. HHLBOR00309728 1. ಸ್ವೆಟ್ಲಾನಾ ಸಂಜಯ್ ಕೊಯಿಲ್ಹೋ 2. ಸಂಜಯ್ ಜೋಸೆಫ್ ಕೊಯಿಲ್ಹೋ ಪ್ರೊಪ್ರೈಟರ್ ಮೆ. ಸನ್ನಿ ಇಂಜಿನಿಯರಿಂಗ್	ಫ್ಲಾಟ್ ನಂ. 502, 5ನೇ ಮಹಡಿ, ಬ್ಲಾಕ್ ''ಬಿ'' ಓರ್ಝೋನ್ ಅರ್ಬನ ಅವೆನ್ಯೂ, ಕನ್ನಮಂಗಲ ಪೂಜಾನಹಳ್ಳಿ ಗ್ರಾಮ ಕಸಬಾ ಹೋಬಳಿ ದೇವನಹಳ್ಳಿ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು -562110 ಕರ್ನಾಟಕ	05.05.2024	ದಿನಾಂಕ 08.11.2024 ರಂತೆ ರೂ. 26,59,233.92/- (ರೂಪಾಯಿ ಇಪ್ಪತ್ತ ಆರು ಲಕ್ಷ ಐವತ್ತ ಒಂಬತ್ತು ಸಾವಿರದ ಇನ್ನೂರ ಮೂವತ್ತ ಮೂರು ಮತ್ತು ಪೈಸೆ ತೊಂಬತ್ತ ಎರಡು ಮಾತ್ರ)
4.	ಸಾಲ ಖಾತೆ ನಂ. HHLDUB00259588 1. ಮೆರ್ಲಿನ್ ಗೊನ್ಸಾಲ್ವೆಸ್ 2. ಮೆಲ್ವಿನ್ ಗೊನ್ಸಾಲ್ವೆಸ್	ಫ್ಲಾಟ್ ಸಂಖ್ಯೆ ಎಂ-704, 7ನೇ ಮಹಡಿ, ಬ್ಲಾಕ್-ಎಂ, ಅರ್ಬಾನಾ ಅವೆನ್ಯೂ, ಸರ್ವೆ ನಂ. 75, 77/1, 77/2, 77/3, 77/4, 78, 79, 80, 81/2, 83/2, 83/3, 83/5, 83/6 ಮತ್ತು 86/2 ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ ದೇವನಹಳ್ಳಿ ತಾಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು-560045 ಕರ್ನಾಟಕ	05.05.2024	ದಿನಾಂಕ 12.11.2024 ರಂತೆ ರೂ. 43,44,255.45/- (ರೂಪಾಯಿ ನಲವತ್ತ ಮೂರು ಲಕ್ಷ ನಲವತ್ತ ನಾಲ್ಕು ಲಕ್ಷ ಇನ್ನೂರ ಐವತ್ತ ಐದು ಮತ್ತು ಪೈಸೆ ನಲವತ್ತ ಐದು ಮಾತ್ರ)
5.	ಸಾಲ ಖಾತೆ ನಂ. HHLPUN00311188 1. ಅಂಜಲಿ ಎನ್ ಪಾಟೀಲ್ 2. ಜಯಂತ್ ದಿನಕರ್ ಭೈಸಾರೆ	ಫ್ಲಾಟ್ ನಂ. X 603 ಆರನೇ ಮಹಡಿ ಬ್ಲಾಕ್ ನಂ. X ಅರ್ಬಾನಾ ಅವೆನ್ಯೂ, ಸರ್ವೆ ನಂ. 75, 77/1, 77/2, 77/3, 77/4, 78, 79, 80, 81/2, 83/2, 83/3, 83/5, 83/6 ಮತ್ತು 86/2 ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ ದೇವನಹಳ್ಳಿ ತಾಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು-560045 ಕರ್ನಾಟಕ	10.05.2024	ದಿನಾಂಕ 29.10.2024 ರಂತೆ ರೂ. 78,91,100.31/- (ರೂಪಾಯಿ ಎಪ್ಪತ್ತ ಎಂಟು ಲಕ್ಷ ತೊಂಬತ್ತ ಒಂದು ಸಾವಿರದ ನೂರು ಮತ್ತು ಪೈಸೆ ಮೂವತ್ತ ಒಂದು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

ಸರಗಳವು: ಇಬ್ಬರ ಬಂಧನ

ಬೆಂಗಳೂರು: ಸರಗಳ್ಳತನ, ಮನೆ ಕಳ್ಳತನ ಮಾಡುತ್ತಿದ್ದ ಇಬ್ಬರು ಖತರ್ನಾಕ್ ಕಳ್ಳರನ್ನು ಬಂಧಿಸಿರುವ ನಂದಿನಿ ಲೇಔಟ್ ಪೊಲೀಸರು 8.55 ಲಕ್ಷ ಮೌಲ್ಯದ 113 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದಾರೆ. ಭದ್ರಾವತಿಯ ಬೋವಿ ಕಾಲೋನಿಯ ವಸಂತರಾಜು (40) ಹಾಗೂ ಶಿವಮೊಗ್ಗದ ಶ್ರೀರಾಮನಗರದ ಅತೀಕ್ ಉಲ್ಲಾ(27)ಬಂಧಿತ ಆರೋಪಿಗಳು. ನಂದಿನಿ ಲೇಔಟ್‌ನ ಶಂಕರ್ ನಗರದ ಮಂಗಳ ಅವರು ಕಳೆದ ಅ.11ರಂದು ಸಂಜೆ 7ರ ವೇಳೆ ನಂದಿನಿ ಲೇಔಟ್ ಶಂಕರನಗರದ ಗಣೇಶ ದೇವಸ್ಥಾನದಲ್ಲಿ ಭಜನೆಯ ಮಾಡುತ್ತಿದ್ದಾಗ, ಕಿಟಕಿಯ ಮೂಲಕ ಕೈಹಾಕಿ ಅವರ ಕೊರಳಿನಲ್ಲಿದ್ದ ಚಿನ್ನದ ಸರವನ್ನು ಯಾರೋ ಅಪರಿಚಿತ ವ್ಯಕ್ತಿಯು ಕಿತ್ತುಕೊಳ್ಳಲು ಪ್ರಯತ್ನಿಸಿದಾಗ, ಬಿಗಿಯಾಗಿ ಹಿಡಿದುಕೊಂಡಿದ್ದು, 70 ಗ್ರಾಂ ಚಿನ್ನದ ಸರದಲ್ಲಿ ಸುಮಾರು 20 ಗ್ರಾಂ ಸರ ಕಸಿದು ಪರಾರಿಯಾಗಿದ್ದ ಬಗ್ಗೆ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಸರಗಳ್ಳತನ ಪ್ರಕರಣ ದಾಖಲಾಗಿತ್ತು. ಕಾರ್ಯಾಚರಣೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ.

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿರಿಯ ಶ್ರೇಣಿ ವಿಭಾಗ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ

ಸಿ.ಮಿಸ್.ನಂ. 620/2024

ಅರ್ಜಿದಾರರು: ಶ್ರೀಮತಿ ಲಕ್ಷ್ಮೀದೇವಮ್ಮ ಕೋಂ ಮಹಾಲಿಂಗಪ್ಪ ಮತ್ತು ಬಿನ್ ಲೇಟ್ ದಾಸಯ್ಯ ವಯಸ್ಸು 71 ವರ್ಷ ವಾಸ: #14, 8ನೇ ಕ್ರಾಸ್, ಇಂದಿರಾಗಾಂಧಿ ಸ್ಲಂ ಈಜಿಪುರ, ವಿವೇಕ ನಗರ, ಬೆಂಗಳೂರು ದಕ್ಷಿಣ ಬೆಂಗಳೂರು 560047 ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಶ್ರೀಮತಿ ನಿಂಗಮ್ಮ ಕೋಂ ಲೇಟ್ ದಾಸಯ್ಯ ರವರು, ದಿನಾಂಕ 26.11.2022 ರಂದು ಯಲಚವಾಡಿ ಗ್ರಾಮ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 04/01/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 16ನೇ ನವಂಬರ್ 2024ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಪುಟ್ಟಸ್ವಾಮಿ. ಎಸ್
ವಕೀಲರು
ಕನಕಪುರ ಟೌನ್.
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ (ಕಿರಿಯ ಶ್ರೇಣಿ ವಿಭಾಗ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ

ಸಿ.ಮಿಸ್.ನಂ. 696/2024

ಅರ್ಜಿದಾರರು: ಶ್ರೀ ಕೆಂಪಯ್ಯ ಬಿನ್ ಲೇಟ್ ಕೋಡಿಗೌಡ ವಯಸ್ಸು 65 ವರ್ಷ ವಾಸ: ಚಿಕ್ಕ ಏರಂಗೆರೆ ಗ್ರಾಮ, ಹೊಸದುರ್ಗ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ 1 & 3 ರಿಂದ 5ನೇ ಅರ್ಜಿದಾರರ ತಂದೆ, 2ನೇ ಅರ್ಜಿದಾರರ ಮಾವನವರಾದ ಕೋಡಿಗೌಡ ಬಿನ್ ಲೇಟ್ ಈರೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಚಿಕ್ಕಏ–ರಂಗೆರೆ ಗ್ರಾಮದಲ್ಲಿ ದಿನಾಂಕ 14.01.2002 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥ–ವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ–ದರೆ, 31/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 26ನೇ ನವಂಬರ್ 2024ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಎಂ ಚೇತನ್
ಮತ್ತು ಪ್ರವೀಣ್‌ಕುಮಾರ್ ವಕೀಲರು
ಕನಕಪುರ ಟೌನ್.
ಸ್ಥಳ : ಕನಕಪುರ
ದಿನಾಂಕ: 11/11/2024

TEJAS NETWORKS ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಟಿ ನಂಬರ್: L72900KA2000PLC026980

ನೋಂದಾಯಿತ ಮತ್ತು ಕಾರ್ಪೋರೇಟ್ ಕಚೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17 & 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು–560 100, ಕರ್ನಾಟಕ ದೂರವಾಣಿ: +91 80 4179 4600 ಫ್ಯಾಕ್ಸ್: +91 80 2852 0201 ವೆಬ್‌ಸೈಟ್: www.tejasnetworks.com ಇ–ಮೇಲ್: corporate@tejasnetworks.com

ಅಂಚೆ ಮತದಾನ ಫಲಿತಾಂಶದ ನೋಟೀಸು

ಕಂಪನಿಗಳ ಕಾಯಿದೆ 2013ರ, ಸೆಕ್ಷನ್ 110ರ ನಿಬಂಧನೆಗಳ ಅನುಸಾರವಾಗಿ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ಮತ್ತು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಘೋಷಣೆಗಳ ಅವಶ್ಯಕತೆಗಳು) ನಿಬಂಧನೆಗಳು 2015ರ ನಿಯಂತ್ರಣ 44ನ್ನು ಓದಿಕೊಂಡಂತೆ, ಅಕ್ಟೋಬರ್ 18, 2024ರ ನೋಟೀಸ್‌ನ ಪ್ರಕಾರ ಪ್ರಸ್ತಾವಿತ ಈ ಕೆಳಗಿನ ವ್ಯವಹಾರದ ಅಂಚೆ ಮತಪತ್ರ ಮೂಲಕ ಮತದಾನವು ಷೇರುದಾರರ ಅನುಮೋದನೆ ಕೋರುವ ನಿರ್ಣಯವನ್ನು ನವೆಂಬರ್ 26, 2024ರಂದು ಪರಿಶೋಧಕರಾದ ಶ್ರೀ ಸಿ. ದ್ವಾರಕಾನಾಥ್, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ (ಎಫ್‌ಸಿಎಸ್–7723 ಮತ್ತು ಸಿಪಿ ನಂ. 4847) ಮತ್ತು ಐಪಿ ವರದಿಯ ಪ್ರಕಾರ ಅಗತ್ಯ ಬಹುಮತದೊಂದಿಗೆ ಅಂಗೀಕರಿಸಲಾಗಿದೆ.

ಕ್ರ. ಸಂ.	ನಿರ್ಣಯದ ವಿವರಗಳು	ನಿರ್ಣಯದ ಪರವಾಗಿ ಚಲಾವಣೆಯಾದ ಒಟ್ಟು ಮಾನ್ಯ ಮತಗಳು% (ಅಂಚೆ ಮತಪತ್ರ ಮತ್ತು ರಿಮೋಟ್ ಇ–ಮತದಾನ ಎರಡನ್ನೂ ಒಳಗೊಂಡು)
1	ಕಂಪನಿಯ ಸಂಬಂಧಿತ ಗ್ರಾಹಕ (ಪಾರ್ಟಿ), ಟಾಟಾ ಆಟೋಕಾಂಪ್ ಸಿಸ್ಟಮ್ಸ್ ಲಿಮಿಟೆಡ್‌ನೊಂದಿಗೆ ವಸ್ತು ಸಂಬಂಧಿತ ಗ್ರಾಹಕ ವಹಿವಾಟುಗಳನ್ನು ನಡೆಸಲು ಅನುಮೋದನೆ.	97.20

ನವೆಂಬರ್ 25, 2024 ಪೂರ್ಣಗೊಂಡ ಅಂಚೆ ಮತಪತ್ರಗಳು ಮತ್ತು ರಿಮೋಟ್ ಇ–ಮತದಾನದ ಕೊನೆಯ ದಿನಾಂಕವಾದ್ದರಿಂದ ಅಂದು ಈ ನಿರ್ಣಯವನ್ನು ಪರಿಗಣಿಸಲಾಗಿದೆ.

ಅಂಚೆ ಮತಪತ್ರದ ಫಲಿತಾಂಶಗಳನ್ನು ನವೆಂಬರ್ 26, 2024ರಂದು ಘೋಷಿಸಲಾಯಿತು. ಪರಿಶೋಧಕರ (ಸ್ಕ್ರುಟಿನೈಜರ್) ವರದಿಯೊಂದಿಗೆ ಫಲಿತಾಂಶಗಳನ್ನು ಸ್ಟಾಕ್ ಎಕ್ಸ್‌ಚೇಂಜ್‌ಗಳು, ಡಿಪಾಸಿಟರಿಗಳು, ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಿಗೆ ಸಂವಹನ ಮಾಡಲಾಗಿದೆ ಮತ್ತು ಕಂಪನಿಯ ವೆಬ್‌ಸೈಟ್ https://www.tejasnetworks.com/shareholders/ ಹಾಗೂ ಎನ್‌ಎಸ್‌ಡಿಎಲ್ ವೆಬ್‌ಸೈಟ್ ಅಂದರೆ, https:// www.nsdl.co.inನಲ್ಲಿ ಸಹ ಪ್ರಕಟಿಸಲಾಗಿದೆ.

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಎನ್ ಆರ್ ರವಿಕೃಷ್ಣನ್
ಜನರಲ್ ಕೌನ್ಸಿಲ್, ಮುಖ್ಯ ಕಂಪ್ಲೈನ್ಸ್ ಅಧಿಕಾರಿ ಮತ್ತು ಕಂಪನಿ ಕಾರ್ಯದರ್ಶಿ

ದಿನಾಂಕ : ನವೆಂಬರ್ 26, 2024
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **17.05.2023** ರಂದು ಕರೆದು ಸಾಲಗಾರ **ಚಂದ್ರಾನಿ ಕುಂದು ಅಲಿಯಾಸ್ ಚಂದ್ರಾನಿ ಬಿಶ್ವನಾಥ್ ಕುಂದು ಮತ್ತು ಆಂಟೋನಿ ಇ ಹೆನ್ರಿ ಅಲಿಯಾಸ್ ಆಂಟೋನಿ ಎಡ್ವರ್ಡ್ ಹೆನ್ರಿ ಪ್ರೊಪ್ರೈಟರ್ ಸೊಲ್ಲುನಾ ಪ್ರೊಡಕ್ಷನ್ಸ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 1,06,35,436.97 (ರೂಪಾಯಿಗಳು ಒಂದು ಕೋಟಿ ಆರು ಲಕ್ಷ ಮೂವತ್ತೈದು ಸಾವಿರದ ನಾಲ್ಕುನೂರಾ ಮೂವತ್ತಾರು ಮತ್ತು ತೊಂಬತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBEC00470938** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **16.05.2023** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **22.11.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್** (ಈಗಿನ ಹೆಸರು: **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**)ಬಾಕಿ ಇರುವ ಮೊತ್ತ **ರೂ. 1,06,35,436.97 (ರೂಪಾಯಿಗಳು ಒಂದು ಕೋಟಿ ಆರು ಲಕ್ಷ ಮೂವತ್ತೈದು ಸಾವಿರದ ನಾಲ್ಕುನೂರಾ ಮೂವತ್ತಾರು ಮತ್ತು ತೊಂಬತ್ತೇಳು ಪೈಸೆ ಮಾತ್ರ) 16.05.2023** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಸ್ಥಿರಾಸ್ತಿ ಹೊಂದಿರುವ ಎಲ್ಲಾ ತುಂಡು ಮತ್ತು ಪಾರ್ಸೆಲ್ ಸೈಟ್ ನಂ. 135, ಎಸ್.ವೈ. ನಿಂದ ಕೆತ್ತಲಾಗಿದೆ. ಸಂ. 124/2 ಮತ್ತು 125/2, ಬೇರಿಂಗ್ ಕಥಾ ನಂ. ಬಿಡಿಎ / ಆರ್ಒ / ಎನ್ / 135 / 2014-15, ರೋಸ್ ಬೇ ಎಂದು ಕರೆಯಲ್ಪಡುವ ಲೇಔಟ್‌ನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಅಳತೆ: (9.85+14.27) / 2 ಮೀಟರ್ಗಳು. ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.02 ಮೀಟರ್ಗಳು., ಎಲ್ಲಾ ಅಳತೆಗಳಲ್ಲಿ 144.96 ಚೌಕ ಮೀಟರ್ಗಳು. ಬೈಯಪ್ಪನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು - 560049, ಕರ್ನಾಟಕದಲ್ಲಿ ನೆಲೆಗೊಂಡಿದೆ ಮತ್ತು ಇದು ಈ ಕೆಳಗಿನಂತೆ ಬಂಧಿತವಾಗಿದೆ:-

ಪೂರ್ವದಲ್ಲಿ ಇದರಿಂದ : ಸೈಟ್ ಸಂಖ್ಯೆ. 107 ಮತ್ತು 108. ಪಶ್ಚಿಮದಲ್ಲಿ ಇದರಿಂದ: ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ. 136 ದಕ್ಷಿಣದಲ್ಲಿ ಇದರಿಂದ : ಸೈಟ್ ನಂ. 134

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)
ದಿನಾಂಕ : 22.11.2024
ಸ್ಥಳ : ಬೆಂಗಳೂರು

ಯುವತಿಯ ಕೊಲೆ

ಮೃತದೇಹದೊಂದಿಗೆ ಕಾಲ ಕಳೆದ ಆರೋಪಿ | ಇಂದಿರಾನಗರದಲ್ಲಿ ಘಟನೆ

ಬೆಂಗಳೂರು: ಯುವತಿಯೊಬ್ಬಳನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ಇಂದಿರಾ ನಗರದ ಅಪಾರ್ಟ್‌ಮೆಂಟ್‌ವೊಂದರಲ್ಲಿ ನಡೆದಿದೆ.

ಅಸ್ಸಾಂ ಮೂಲದ ಮಾಯಾ ಗೊಗೋಯ್ ಹತ್ಯೆಯಾಗಿರುವ ಯುವತಿ. ಸುದ್ದಿ ತಿಳಿದು ಘಟನಾ ಸ್ಥಳಕ್ಕೆ ಇಂದಿರಾನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಹತ್ಯೆಯಾದ ಮಾಯಾ ಗೊಗೋಯ್ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡಿಕೊಂಡು ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸವಿದ್ದಳು. ನ. 23ರಂದು ಮಾಯಾ ಹಾಗೂ ಆಕೆಯ ಪ್ರಿಯಕರ ಆರವ್ ಹಾರ್ನಿ ಇಂದಿರಾನಗರದ ಅಪಾರ್ಟ್‌ಮೆಂಟ್‌ನಲ್ಲಿ ರೂಮ್ ಪಡೆದು ತಂಗಿದ್ದರು. ಆದರೆ ಮಂಗಳವಾರ ಬೆಳಗ್ಗೆ ಕ್ಯಾಬ್ ಬುಕ್ ಮಾಡಿಕೊಂಡು ಆರವ್ ಹಾರ್ನಿ ಮಾತ್ರ ಅಪಾರ್ಟ್‌ಮೆಂಟ್‌ನಿಂದ ತೆರಳಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಹೋಟೆಲ್ ಸಿಬ್ಬಂದಿ ಗಮನಿಸಿದಾಗ ಹತ್ಯೆಯ ವಿಚಾರ ಬಯಲಾಗಿದೆ. ತಕ್ಷಣ ಪೊಲೀಸರು ಮಾಹಿತಿ ನಿಡಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಇಂದಿರಾನಗರ ಠಾಣೆ ಪೊಲೀಸರು ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ. ಇಬ್ಬರೂ ಅಪಾರ್ಟ್‌ಮೆಂಟ್‌ಗೆ ಬಂದಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ. ಆದರೆ, ಹೋಟೆಲ್ ರೂಮ್ ಪಡೆದಿದ್ದು ಇಬ್ಬರೇ ಆಗಿದ್ದು, ಇತರರು ಯಾರು ಒಳಗೆ ಹೋಗಿರುವ ಸುಳಿವು ಇಲ್ಲ. ಪ್ರಾಥಮಿಕ ತನಿಖೆಯಲ್ಲಿ ಪ್ರಿಯಕರನ ಮೇಲೆ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತದೇಹದೊಂದಿಗೆ ಕಾಲ ಕಳೆದ ಆರೋಪಿ: ಯುವತಿ ಮಾಯಾ ಗೊಗೋಯ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರಿಗೆ ಸಿಸಿಟಿವಿ ದೃಶ್ಯ ದೊರೆತಿದ್ದು, ನ.23 ರಂದು ಮಧ್ಯಾಹ್ನ ಸರ್ವಿಸ್ ಅಪಾರ್ಟ್‌ಮೆಂಟ್‌ಗೆ ಮಾಯಾ ಗೊಗೋಯ್ ಹಾಗೂ ಆರವ್ ಅರ್ನಿ ಇಬ್ಬರು ಬಂದಿದ್ದಾರೆ. ಇವರಿಬ್ಬರು ಒಟ್ಟಿಗೆ ಬಂದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಇನ್ನು ನ.24ರಂದೇ ಮಾಯ ಕೊಲೆ ಮಾಡಿರೊ ಶಂಕೆ ವ್ಯಕ್ತವಾಗುತ್ತಿದೆ. ಕೊಲೆ ಬಳಿಕ ಅದೇ ರೂಮ್ ನಲ್ಲಿಯೇ ಉಳಿದುಕೊಂಡಿದ್ದ ಆಸಾಮಿ, ಅಲ್ಲಿಯೇ ಕೂತು ಸಿಗರೇಟ್ ಸೇದಿದ್ದಾನೆ. ಮೃತದೇಹ ಜೊತೆಯಲ್ಲೇ ಕಾಲ ಕಳೆದಿದ್ದಾನೆ. ನಂತರ ಇಂದು ಬೆಳಗ್ಗೆ ಕ್ಯಾಬ್ ಬುಕ್ ಮಾಡಿಕೊಂಡು ಆರೋಪಿ ತೆರಳಿದ್ದಾನೆ. ಆರೋಪಿಗೆ ಮೃತದೇಹವನ್ನು ಪೀಸ್ ಮಾಡೊ ಪ್ಲಾನ್ ಇತ್ತಾ ಎಂಬ ಅನುಮಾನ ಪೊಲೀಸರಿಗೆ ಮೂಡಿದೆ.

ಕೊಲೆ ಮಾಡಿ ಪರಾರಿ

ಆರೋಪಿ ಆರವ್ ಅರ್ನಿ ಮಾಯಾ ಕೊಲೆ ಮಾಡಿದ ಬಳಿಕ, ಒಂದು ದಿನ ಮೃತದೇಹದ ಜತೆಗೆ ಕಾಲ ಕಳೆದಿದ್ದ. ಹಾಗಾಗಿ ಮೃತದೇಹ ಪೀಸ್ ಪೀಸ್ ಮಾಡಿರುವ ಪ್ಲಾನ್ ಮಾಡಿದ್ದ ಎಂಬ ಶಂಕೆ ಈಗ ಪೊಲೀಸರಿಗೆ ಕಾಡುತ್ತಿದೆ. ಕೊನೆಗೆ ಪ್ಲಾನ್ ಫೇಲ್ ಆಗಿ ಮೃತದೇಹ ಬಿಟ್ಟು ಪರಾರಿಯಾಗಿದ್ದಾನೆ. ಆರೋಪಿ ಉಸಿರುಗಟ್ಟಿಸಿ ಚಾಕುವಿನಿಂದ ಇರಿದು ಕೊಲೆ ಮಾಡಿ, ನಂತರ ಕೈಗೂ ಕೂಡ ಚಾಕುವಿನಿಂದ ಇರಿದಿದ್ದಾನೆ ಎಂದು ಇಂದಿರಾನಗರದ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

2 ಲಕ್ಷ ಮೌಲ್ಯದ 4 ಕೆ.ಜಿ. ಗಾಂಜಾ ವಶ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಬಂಧಿಸಿ 2 ಲಕ್ಷ ಮೌಲ್ಯದ 4 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳುವಲ್ಲಿ ಸಂಪಿಗೆಹಳ್ಳಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಳ್ಳಂದೂರಿನ ಅಬುಲ್ ಬಷರ್ ಬಿನ್ ಅಬುಲ್ ಕಲಾಂ(34) ಬಂಧಿತ ಆರೋಪಿ. ಸಂಪಿಗೆಹಳ್ಳಿ ಮುಖ್ಯ ರಸ್ತೆಯ ನೀಲಗಿರಿ ತೋಪಿನ ಮುಂಭಾಗದ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಖಚಿತವಾದ ಮಾಹಿತಿ ಆಧರಿಸಿ ಆರೋಪಿ ಬಂಧಿಸಲಾಗಿದೆ. ಆರೋಪಿಯು ಪಶ್ಚಿಮ ಬಂಗಾಳದಿಂದ ಗಾಂಜಾ ಕಡಿಮೆ ಬೆಲೆಗೆ ತಂದು ಹೆಚ್ಚಿನ ಲಾಭಕ್ಕಾಗಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದಾಗಿ ವಿಚಾರಣೆಯಲ್ಲಿ ಬಾಯ್ಬಿಟ್ಟಿದ್ದಾನೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ದಯಾನಂದ ತಿಳಿಸಿದರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLDUB00426385 1. ಅಮಿತ್‌ಕುಮಾರ್ ಪಂಕಜಭಾಯ್ ಮಿಸ್ತ್ರಿ ಅಲಿಯಾಸ್ ಅಮಿತ್ ಮಿಸ್ತ್ರಿ 2. ರುಚಿತಾ ರಮೇಶ್‌ಭಾಯ್ ಖೇಣಿ ಅಲಿಯಾಸ್ ರುಚಿತಾ ಅಮಿತ್ ಮಿಸ್ತ್ರಿ	ಫ್ಲಾಟ್ ನಂ. ಬಿ-101, 1ನೇ ಮಹಡಿ, ಟವರ್ ಬಿ, ಓರ್ಝೋನ್ ಅರ್ಬಾನಾ ಅವೆನ್ಯೂ, ಬೆಂಗಳೂರು ಗ್ರಾಮಾಂತರ ಕರ್ನಾಟಕ-562110, ಕರ್ನಾಟಕ	05.05.2024	ದಿನಾಂಕ 29.10.2024 ರಂತೆ ರೂ. 69,44,608.90/- (ರೂಪಾಯಿ ಅರವತ್ತ ಒಂಬತ್ತು ಲಕ್ಷ ನಲವತ್ತ ನಾಲ್ಕು ಸಾವಿರದ ಆರು ನೂರ ಎಂಟು ಮತ್ತು ಪೈಸೆ ತೊಂಬತ್ತು ಮಾತ್ರ)
2.	ಸಾಲ ಖಾತೆ ನಂ. HHLLPM00252675 1. ಗಣೇಶ ಗಣಪತಿ ಭಟ್ ಅಡ್ಕಸ್ಥಳ ಅಲಿಯಾಸ್ ಗಣೇಶ ಭಟ್ಟ (ಅವರ ಪಿಓಎ ಹೋಲ್ಡರ್ ಹರಿಕಿಶನ್ ಎಚ್ ಮೂಲಕ)	ಫ್ಲಾಟ್ ನಂ. ಬಿ-301, 3ನೇ ಮಹಡಿ, ಟವರ್ ನಂ. ಬಿ, ಓರ್ಝೋನ್ ಅರ್ಬಾನಾ ಅವೆನ್ಯೂ ರಾಷ್ಟ್ರೀಯ ಹೆದ್ದಾರಿ 17 83/5, 83/6 ಮತ್ತು 86/2, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ ದೇವನಹಳ್ಳಿ ತಾಲೂಕು, ಬೆಂಗಳೂರು-560042 ಕರ್ನಾಟಕ	10.05.2024	ದಿನಾಂಕ 29.10.2024 ರಂತೆ ರೂ. 69,33,495.02/- (ರೂಪಾಯಿ ಅರವತ್ತ ಒಂಬತ್ತು ಲಕ್ಷ ಮೂವತ್ತ ಮೂರು ಸಾವಿರದ ನಾಲ್ಕು ನೂರ ತೊಂಬತ್ತ ಐದು ಮತ್ತು ಪೈಸೆ ಎರಡು ಮಾತ್ರ)
3.	ಸಾಲ ಖಾತೆ ನಂ. HHLBAG00314729 1. ಅನೀಶ್ ಕುನ್ನತ್ (ಅವರ ಪಿಓಎ ಹೋಲ್ಡರ್ ಅಜಿತ್ ನಾರಾಯಣನ್ ಮೂಲಕ) 2. ಲಾವಣ್ಯ ಮೆನನ್ ಮೇಲುವೀಟಿಲ್ ಅಲಿಯಾಸ್ ಲಾವಣ್ಯ ಮೆನನ್ (ಅವರ ಪಿಓಎ ಹೋಲ್ಡರ್ ಅಜಿತ್ ನಾರಾಯಣನ್ ಮೂಲಕ)	ಫ್ಲಾಟ್ ನಂ. ಇ-403, ನಾಲ್ಕನೇ ಮಹಡಿ, ಬ್ಲಾಕ್ ನಂ. ಇ, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ದೇವನಹಳ್ಳಿ ತಾಲೂಕು ಕಸಬಾ ಹೋಬಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು - 562110 ಕರ್ನಾಟಕ	10.05.2024	ದಿನಾಂಕ 29.10.2024 ರಂತೆ ರೂ. 63,00,560.88/- (ರೂಪಾಯಿ ಅರವತ್ತ ಮೂರು ಲಕ್ಷದ ಐದು ನೂರ ಅರವತ್ತು ಮತ್ತು ಪೈಸೆ ಎಂಬತ್ತ ಎಂಟು ಮಾತ್ರ)
4.	ಸಾಲ ಖಾತೆ ನಂ. HLAPBAN00135350 1. ಸತೀಶ್ ಕುಮಾರ್ ಕೆ ಎಸ್ ಅಲಿಯಾಸ್ ಕೆ. ಎಸ್. ಸತೀಶ್ ಕುಮಾರ್ (ಸಹ-ಸಾಲಗಾರ, ಮಗ ಹಾಗೆಯೇ ದಿವಂಗತ ಶ್ರೀನಿವಾಸ ಗೌಡ ಕೆಎಂ ಅಲಿಯಾಸ್ ಕೆ. ಎಂ ಶ್ರೀನಿವಾಸ ಗೌಡ ಮತ್ತು ದಿವಂಗತ ಶಾರದ ಅವರ ಕಾನೂನು ಉತ್ತರಾಧಿಕಾರಿ) 2. ಕೆ ಎಸ್ ಮಂಜೇಶ್ ಅಲಿಯಾಸ್ ಮಂಜೇಶ್ (ಸಹ-ಸಾಲಗಾರ, ಮಗ ಹಾಗೆಯೇ ದಿವಂಗತ ಶ್ರೀನಿವಾಸ ಗೌಡ ಕೆಎಂ ಅಲಿಯಾಸ್ ಕೆ. ಎಂ ಶ್ರೀನಿವಾಸ ಗೌಡ ಮತ್ತು ದಿವಂಗತ ಶಾರದ ಅವರ ಕಾನೂನು ಉತ್ತರಾಧಿಕಾರಿ) 3. ನಂದಾ ಕುಮಾರಿ (ಮಗಳು ಹಾಗೂ ದಿವಂಗತ ಶ್ರೀನಿವಾಸ ಗೌಡ ಕೆ.ಎಂ ಅಲಿಯಾಸ್ ಕೆ. ಎಂ ಶ್ರೀನಿವಾಸ ಗೌಡ ಮತ್ತು ದಿವಂಗತ ಶಾರದ ಅವರ ಕಾನೂನು ಉತ್ತರಾಧಿಕಾರಿ) 4. ಮಂಗಳಾ (ಮಗಳು ಹಾಗೂ ದಿವಂಗತ ಶ್ರೀನಿವಾಸ ಗೌಡ ಕೆ.ಎಂ ಅಲಿಯಾಸ್ ಕೆ. ಎಂ ಶ್ರೀನಿವಾಸ ಗೌಡ ಮತ್ತು ದಿವಂಗತ ಶಾರದ ಅವರ ಕಾನೂನು ಉತ್ತರಾಧಿಕಾರಿ) 5. ಚೇತನಾ (ಮಗಳು ಹಾಗೂ ದಿವಂಗತ ಶ್ರೀನಿವಾಸ ಗೌಡ ಕೆ.ಎಂ ಅಲಿಯಾಸ್ ಕೆ. ಎಂ ಶ್ರೀನಿವಾಸ ಗೌಡ ಮತ್ತು ದಿವಂಗತ ಶಾರದ ಅವರ ಕಾನೂನು ಉತ್ತರಾಧಿಕಾರಿ)	ಹೊಸ ಪುರಸಭೆ ನಂ. 115, ಮನೆ ನಂ. 77, ಖಾತಾ ನಂ. 2567/ಎ ಕಚರಕನಹಳ್ಳಿ ಗ್ರಾಮ, ಕಸಬಾ (ಎಚ್) ಬೆಂಗಳೂರು - 560084 ಕರ್ನಾಟಕ	03.11.2021	ದಿನಾಂಕ 05.11.2024 ರಂತೆ ರೂ. 51,70,648.87/- (ರೂಪಾಯಿ ಐವತ್ತ ಒಂದು ಲಕ್ಷ ಎಪ್ಪತ್ತು ಸಾವಿರದ ಆರು ನೂರ ನಲವತ್ತ ಎಂಟು ಮತ್ತು ಪೈಸೆ ಎಂಬತ್ತ ಏಳು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

ಕಾನೂನಿಗೆ ಎಳ್ಳಷ್ಟೂ ಗೌರವ ನೀಡದ ವ್ಯಕ್ತಿ ರೇಣುಕಾಸ್ವಾಮಿ: ಹಿರಿಯ ವಕೀಲ ನಾಗೇಶ್ ಆಕ್ಷೇಪ

ರೇಣುಕಾಸ್ವಾಮಿಯನ್ನು ರಾಷ್ಟ್ರೀಯ ನಾಯಕನಂತೆ ಬಿಂಬಿಸಲಾಗುತ್ತಿದೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿಯು ನಟ ದರ್ಶನ್ ಗೆಳತಿ ಪವಿತ್ರಾಗೌಡರನ್ನು ಮಂಚಕ್ಕೆ ಕರೆದಿದ್ದಾರೆ. ಸಮಾಜದಲ್ಲಿ ಮಹಿಳೆಯರನ್ನು ಗೌರವಿಸದ, ಸರಿಯಾದ ನಡತೆ ಹೊಂದಿರದ, ಕಾನೂನಿಗೆ ಎಳ್ಳಷ್ಟೂ ಗೌರವ ನೀಡದ ವ್ಯಕ್ತಿ ಈ ಪ್ರಕರಣದಲ್ಲಿ ರಾಷ್ಟ್ರೀಯ ನಾಯಕ ಎಂದು ಬಿಂಬಿಸಲಾಗುತ್ತಿದೆ. ಬಣ್ಣದ ಬದುಕಿನಲ್ಲಿ ನಾಯಕನಾಗಿದ್ದರೂ ದರ್ಶನ್ ನನ್ನು ಖಳನಾಯಕ (ವಿಲನ್) ರೀತಿಯಲ್ಲಿ ಕಾಣಲಾಗುತ್ತಿದೆ ಎಂದು ಹಿರಿಯ ವಕೀಲ ಸಿ.ವಿ.ನಾಗೇಶ್ ಆಕ್ಷೇಪಿಸಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಪವಿತ್ರಾಗೌಡ, ಆರ್. ನಾಗರಾಜು, ಎಂ.ಲಕ್ಷ್ಮಣ್, ಅನು ಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಸಲ್ಲಿಸಿರುವ ಜಾಮೀನು ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠ ನಡೆಸಿತು. ಸುಮಾರು ಎರಡೂವರೆ ತಾಸು ವಾದ ಮಂಡಿಸಿದ ಹಿರಿಯ ವಕೀಲರಾದ ನಾಗೇಶ್ ಅವರು ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ ತಂದು ಕೊಲೆ ಮಾಡಲಾಗಿಲ್ಲ ಎಂದು ಪ್ರಬಲವಾಗಿ ಹೈಕೋರ್ಟ್‌ನಲ್ಲಿ ವಾದಿಸಿದರು. ಕಲಾಪ ಮುಗಿದ ಹಿನ್ನೆಲೆಯಲ್ಲಿ ವಿಚಾರಣೆ ನ.28ಕ್ಕೆ ಮುಂದೂಡಲಾಗಿದೆ.

ನಾಗೇಶ್ ಅವರ ವಾದಾಂಶ: ನಮ್ಮ ಸಮಾಜದಲ್ಲಿ ಮಹಿಳೆಯರನ್ನು ದೇವಿಯರಾದ ಸರಸ್ವತಿ, ಲಕ್ಷ್ಮಿ, ಅನ್ನಪೂರ್ಣೇಶ್ವರಿ ಎಂದು ಕರೆಯುತ್ತೇವೆ. ಆದರೆ, ಮಹಿಳೆಯರ ಘನತೆಗೆ ಧಕ್ಕೆ ತರುವ ಕೆಲಸ ಕೊಲೆಯಾಗಿರುವ ರೇಣುಕಾಸ್ವಾಮಿ ಮಾಡಿದ್ದಾರೆ. ರೇಣುಕಾಸ್ವಾಮಿಯ ನಡತೆ, ಆತನ ವ್ಯಕ್ತಿತ್ವ ನೋಡದೇ ಆತನನ್ನು ರಾಷ್ಟ್ರೀಯ ನಾಯಕ ಎನ್ನುವ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ಗೌತಮ್ ಹೆಸರಿನಲ್ಲಿ ರೇಣುಕಾಸ್ವಾಮಿ ಇನ್‌ಸ್ಟಾಗ್ರಾಂನಲ್ಲಿ ಕಳುಹಿಸಿರುವ ಸಂದೇಶಗಳನ್ನು ನೋಡಿದರೆ ಆತ ಏನು ಎಂದು ಅರ್ಥವಾಗುತ್ತದೆ. ದರ್ಶನ್ ಅವರ ಫೋಟೋಗಳನ್ನು ಆರೋಪ ಪಟ್ಟಿಯಲ್ಲಿ ಕಲರ್ ಫೋಟೊ ಮಾಡಿ ಹಾಕುವ ಬದಲು ರೇಣುಕಾಸ್ವಾಮಿ ಕಳುಹಿಸಿರುವ ಚಿತ್ರ/ಸಂದೇಶಗಳನ್ನು ಕಲರ್ ಫೋಟೊ ಮಾಡಿ ಹಾಕಿದ್ದರೆ ಚೆನ್ನಾಗಿರುತ್ತಿತ್ತು.

ರೇಣುಕಾಸ್ವಾಮಿಯನ್ನು ಬಲಪ್ರಯೋಗದಿಂದ ಚಿತ್ರದುರ್ಗದಿಂದ ಬೆಂಗಳೂರಿಗೆ ಕರೆತರಲಾಗಿದೆ ಎಂಬುದು ಪ್ರಾಸಿಕ್ಯೂಷನ್ ವಾದವಲ್ಲ. ನನ್ನನ್ನು ಅಪಹರಿಸಲಾಗಿಲ್ಲ ಎಂದು ರೇಣುಕಾಸ್ವಾಮಿ ಸಾಯುವುದಕ್ಕೂ ಮುನ್ನ ತಂದೆ ಕಾಶಿನಾಥಯ್ಯ ಮತ್ತು ತಾಯಿಗೆ ಹೇಳಿದ್ದಾರೆ. ಗೆಳೆಯರ ಜತೆ ಊಟಕ್ಕೆ ಹೊರ ಹೋಗುತ್ತಿದ್ದೇನೆ. ಮಧ್ಯಾಹ್ನ ಊಟಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ, ಬಲಪ್ರಯೋಗ ಅಥವಾ ವಂಚನೆಯಿಂದ ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಬೆಂಗಳೂರಿಗೆ ಕರೆತಂದಿಲ್ಲ. ಜೂ.8ರಂದು ಚಿತ್ರದುರ್ಗದಿಂದ ಬರುವಾಗ ಬೆಂಗಳೂರು-ತುಮಕೂರಿನ ದುರ್ಗಾ ಬಾರ್‌ಗೆ ರೇಣುಕಾಸ್ವಾಮಿ ಸೇರಿ ನಾಲ್ವರು ಭೇಟಿ ನೀಡುತ್ತಾರೆ. ಈ ಬಾರ್‌ನ ಉಸ್ತುವಾರಿ ಮಂಜುನಾಥ್ ಅವರ ಹೇಳಿಕೆ ಪೊಲೀಸರು ದಾಖಲಿಸಿದ್ದಾರೆ. ಇಲ್ಲಿ ಊಟ, ಲಿಕ್ಕರ್ ಸೇವನೆ ಮಾಡಿದ ಬಳಿಕ ರೇಣುಕಾಸ್ವಾಮಿಯೇ ದುರ್ಗಾ ಬಾರ್‌ನಲ್ಲಿ 640 ರೂಪಾಯಿ ಪಾವತಿಸಿದ್ದಾನೆ. ರೇಣುಕಾಸ್ವಾಮಿ ತಂದೆ, ತಾಯಿ ಮತ್ತು ಮಂಜುನಾಥ್ ಹೇಳಿಕೆ ನೋಡಿದರೆ ಆತನನ್ನು ಕೊಲೆ ಮಾಡಲು ಅಪಹರಿಸಲಾಗಿಲ್ಲ ಎಂಬುದು ತಿಳಿಯುತ್ತದೆ. ಇಲ್ಲಿ ಕೊಲೆ ಮಾಡಿದವರು ಸೆಕ್ಷನ್ 302 ಅಡಿ ಶಿಕ್ಷೆಗೆ ಗುರಿಯಾಗುತ್ತಾರೆಯೇ ವಿನಾ ಸೆಕ್ಷನ್ 364 ಅಡಿ ಅಪಹರಣ ಅಪರಾಧಕ್ಕಲ್ಲ ಎಂದು ವಕೀಲ ನಾಗೇಶ್ ಅವರ ವಾದ ಮಂಡಿಸಿದ್ದಾರೆ.

ದರ್ಶನ್, ಸಹಚರರ ವಿರುದ್ಧ ಹೆಚ್ಚುವರಿ ಚಾರ್ಜ್‌ಶೀಟ್

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಾಲಯಕ್ಕೆ 3,991 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿರುವ ಪೊಲೀಸರು ಮತ್ತೊಂದು ಹೆಚ್ಚುವರಿ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಡಿಜಿಟಲ್ ಸಾಕ್ಷ್ಯಾಧಾರಗಳು, ಎಫ್‌ಎಸ್‌ಎಲ್ ಹಾಗೂ ಸಿಎಫ್‌ಎಸ್‌ಎಲ್ ವರದಿಗಳು, ಮೊಬೈಲ್ ಕರೆಗಳ ವಿವರ ಹಾಗೂ ಸಾಕ್ಷಿಗಳ ಹೇಳಿಕೆಯನ್ನೊಳಗೊಂಡ ಮಾಹಿತಿ ಸೇರಿ ಆರೋಪಿಗಳಿಗೆ ಹಣ ವರ್ಗಾವಣೆಯಾದ ವಿವರವನ್ನು ಹೆಚ್ಚುವರಿ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ ಎಂಬ ಮಾಹಿತಿ ಪೊಲೀಸ್ ಮೂಲಗಳಿಂದ ಲಭ್ಯ ವಾಗಿದೆ. ಆರೋಪಿಗಳಾದ ಜಗದೀಶ್ ಮೊಬೈಲ್‌ನಲ್ಲಿ 4 ಫೋಟೊ, ಅನುಕುಮಾರ್ ಮತ್ತು ಚಾಲಕ ರವಿ ಮೊಬೈಲ್‌ನಲ್ಲಿ ತಲಾ 2 ಫೋಟೋ ಗಳನ್ನು ರಿಟ್ರೀವ್ ಮಾಡಲಾಗಿದ್ದು, ಆ ಕುರಿತು ಸಹ ಚಾರ್ಜ್‌ಶೀಟ್‌ನಲ್ಲಿ ದಾಖಲಿ ಸಲಾಗಿದೆ. ಅಲ್ಲದೇ, ಆರೋಪಿಗಳ ಹಣಕಾಸಿನ ವ್ಯವಹಾರದ ಕುರಿತು ಸಹ ಮಾಹಿತಿ ಸಂಗ್ರಹಕ್ಕೆ ತನಿಖಾ ಧಿಕಾರಿಗಳು ಮುಂದಾಗಿದ್ದು, ಎಲ್ಲಾ ಆರೋಪಿಗಳ ಬ್ಯಾಂಕ್ ಖಾತೆ ಹಾಗೂ ಕೆವೈಸಿ ದಾಖಲೆಗಳ ಮಾಹಿತಿಯನ್ನು ಪೊಲೀಸರು ಸಂಗ್ರಹಿಸಿದ್ದಾರೆ.

ಕೆನರಾಬ್ಯಾಂಕ್ ವತಿಯಿಂದ ನಡೆದ ವಾರ್ಷಿಕ ಮೆರಾಥಾನ್‌ಗೆ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸತ್ಯನಾರಾಯಣ ರಾಜು ಚಾಲನೆ ನೀಡಿದರು. ಬ್ಯಾಂಕ್‌ನ ಅಧಿಕಾರಿ ವಿಜಯ್ ಶ್ರೀರಂಗನ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

ಬೆಂಗಳೂರಿನ ಜಿಕೆವಿಕೆಯ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣ ದಲ್ಲಿ ಆಯೋಜಿಸಿದ್ದ ತಾಂತ್ರಿಕ ವಿಚಾರಗೋಷ್ಠಿಯಲ್ಲಿ ಅತಿಹೆಚ್ಚು ಹಾಲು ಉತ್ಪಾದನೆ ಮಾಡಿರುವ ಹೈನುಗಾರರನ್ನು ಸನ್ಮಾನಿಸಲಾಯಿತು. ಮೈಸೂರು ಹಾಲು ಒಕ್ಕೂಟದ ಜ್ಯೋತಿ ಉಮೇಶ್, ವಿಜಯಪುರದ ಪ್ರಕಾಶ್ ದೇಸಾಯಿ, ಬೆಂಗಳೂರಿನ ಡಾ. ಮಂಜುನಾಥ್, ಶಾಂತಮ್ಮ, ಸಂತೋಷ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಚಿವ ಕೆ. ವೆಂಕಟೇಶ್ ಸೇರಿದಂತೆ ವಿವಿಧ ಹಾಲು ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂವಿಧಾನಕ್ಕೆ ಸಂಪೂರ್ಣ ಗೌರವ ತಂದು ಕೊಟ್ಟ ಪ್ರಧಾನಿ ನರೇಂದ್ರ ಮೋದಿ

ಕಾಂಗ್ರೆಸಿಗರಿಂದ ಸಂವಿಧಾನದ ರಕ್ಷಕರಂತೆ ಕಪಟ ನಾಟಕ

ಬೆಂಗಳೂರು: ಸ್ವಾತಂತ್ರ್ಯ ಬಂದಾಗಿನಿಂದ ದೇಶದ ಆಡಳಿತದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಪಕ್ಷವು ಹಲವಾರು ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ಅಲ್ಲದೆ, ಸಂವಿಧಾನದ ದುರುಪಯೋಗ ಪಡಿಸಿಕೊಂಡು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಹೇಯ ಕೃತ್ಯಕ್ಕೆ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಆಗಿದೆ ಎಂಬುದನ್ನು ದೇಶದ ಜನರು ಮರೆತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸಂವಿಧಾನ ದಿನಾಚರಣೆಯ ಪ್ರಯುಕ್ತ ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸಂವಿಧಾನ ಸನ್ಮಾನ ಅಭಿಯಾನ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿ, ಹಿಂದೆ ಕಾನೂನು ದಿನವನ್ನಾಗಿ ಇದನ್ನು ಆಚರಿಸಲಾಗುತ್ತಿತ್ತು. ಇದನ್ನು ಸಂವಿಧಾನ ಸಮರ್ಪಣಾ ದಿನವಾಗಿ ಅರ್ಥಪೂರ್ಣವಾಗಿ ಆಚರಿಸುವ ಅಭಿಲಾಷೆ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರದು ಎಂದರು.

ನ.26ರಿಂದ ಜನವರಿ 26ರವರೆಗೆ 2 ತಿಂಗಳುಗಳ ಕಾಲ ದೇಶಾದ್ಯಂತ ಸಂವಿಧಾನ ಸನ್ಮಾನ ಅಭಿಯಾನ ಆಚರಿಸಲಾಗುತ್ತಿದೆ. ಸಂವಿಧಾನ ಒಂದು ಧರ್ಮಗ್ರಂಥ ಎಂದ ಅವರು, ಸಂವಿಧಾನಕ್ಕೆ ಅವಹೇಳನ ಮಾಡಿದ ಕಾಂಗ್ರೆಸಿಗರು ಸಂವಿಧಾನದ ರಕ್ಷಕರು, ಸಂವಿಧಾನ ಪ್ರತಿಪಾದಕರಂತೆ ಕಪಟ ನಾಟಕ ಹಲವು ದಶಕಗಳಿಂದ ನಿರಂತರವಾಗಿ ಮಾಡುತ್ತ ಬಂದಿದ್ದಾರೆ. ಕಾಂಗ್ರೆಸ್ ಪಕ್ಷದವರು ಸಂವಿಧಾನಕ್ಕೆ ಧಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಆದರೆ, ಸಂವಿಧಾನಕ್ಕೆ ಗೌರವ ತರುವ ನಿಟ್ಟಿನಲ್ಲಿ, ಸಂವಿಧಾನವನ್ನು ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಕೂಡ ಗೌರವದಿಂದ ಕಾಣುವ ಮತ್ತು ಪಾಲಿಸುವ ಕಡೆ ಬಿಜೆಪಿ ಮುಂದಾಗಿದೆ. ಈ ಆಚರಣೆಯು ಕೇವಲ ನ.26ಕ್ಕೆ ಸೀಮಿತ ಆಗಬಾರದು ಎಂದರು.

ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ, ಸರ್ವರಿಗೂ ಸಮಾನ ಅವಕಾಶ ನೀಡುವ ಸಂವಿಧಾನವನ್ನು ಡಾ.ಅಂಬೇಡ್ಕರರು ನೀಡಿದ್ದು, ಅದು ಸಾರ್ವಕಾಲಿಕ. ಸದಾ ಪ್ರಸ್ತುತ ಎಂದು ವಿವರಿಸಿದರು. ಸಂವಿಧಾನದ ಕುರಿತು ಅಪಪ್ರಚಾರ ಬರಬಾರದು ಎಂದರು. ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್.ದತ್ತಾತ್ರಿ, ಪಕ್ಷದ ಪಿ. ರಾಜೀವ್, ಎನ್. ರವಿಕುಮಾರ್, ಬಿ.ಜಿ.ಪಾಟೀಲ್, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶಾಸಕ ಬಸವರಾಜ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಯಲಹಂಕ ಸಮಸ್ಯೆ ಆಲಿಸಿದ ತುಷಾರ್

ಯಲಹಂಕ ವಲಯ ವ್ಯಾಪ್ತಿಯಲ್ಲಿ ಇ-ಖಾತಾ, ತ್ಯಾಜ್ಯ ವಿಲೇವಾರಿ, ಬೀದಿ ದೀಪಗಳ ಅಳವಡಿಕೆ, ಕುಡಿಯುವ ನೀರು ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಸಾರ್ವಜನಿಕರ ಕುಂದುಕೊರತೆ ಅಹವಾಲುಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ವೀಕರಿಸಿದರು.

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯಲ್ಲಿ ಇ-ಖಾತಾ, ತ್ಯಾಜ್ಯ ವಿಲೇವಾರಿ, ಬೀದಿ ದೀಪಗಳ ಅಳವಡಿಕೆ, ಕುಡಿಯುವ ನೀರು ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಸಾರ್ವಜನಿಕರ ಕುಂದುಕೊರತೆ ಅಹವಾಲುಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ವೀಕರಿಸಿದರು.

ಯಲಹಂಕ ವಲಯ ಕಚೇರಿಯಲ್ಲಿ ಮುಖ್ಯ ಆಯುಕ್ತರ ನಡೆ ವಲಯದ ಕಡೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ 33ಕ್ಕೂ ಹೆಚ್ಚು ದೂರುಗಳು ಬಂದಿದ್ದು, ಬಂದಿರುವ ಸಮಸ್ಯೆಗಳ ಅನ್ವಯ ಕಾಲಮಿತಿಯೊಳಾಗಿ ದೂರುಗಳನ್ನು ಇತ್ಯರ್ಥ ಪಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರ್ವಜನಿಕರೊಬ್ಬರು ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಈ ಹಿಂದೆ ವಾರ್ಡ್ ಕಮಿಟಿ ಸಭೆ ನಡೆಸಲಾಗುತ್ತಿತ್ತು, ಅದರಲ್ಲಿ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಇತ್ಯರ್ಥಪಡಿಸಿ ಕೊಳ್ಳಬಹುದಿತ್ತು. ಆದ್ದರಿಂದ ವಾರ್ಡ್ ಕಮಿಟಿ ಸಭೆಗಳನ್ನು ಸರಿಯಾಗಿ ನಡೆಸಲು ಮನವಿ ಮಾಡಿದ್ದು, ಇದಕ್ಕೆ ಪ್ರತಿಕ್ರಿಯಿಸಿ, ಇದೀಗ ಪಾಲಿಕೆಯ ಎಲ್ಲಾ ವಾರ್ಡ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗುತ್ತಿದ್ದು, ಅವರ ಬಳಿ ತಮ್ಮ ದೂರುಗಳನ್ನು ಹೇಳಿ ಪರಿಹಾರ ಕಂಡುಕೊಳ್ಳಬಹುದು ಎಂದು ಹೇಳಿದರು.

ಮನೆ ಖರೀದಿ ಮಾಡುವ ಸಲುವಾಗಿ ಅಂತಿಮ ಇ-ಖಾತಾ ಪಡೆಯಲು ಸಾಕಷ್ಟು ಸಮಸ್ಯೆಯಾಗುತ್ತಿದ್ದು, ಅದನ್ನು ಬಗೆಹರಿಸಿಕೊಡುವಂತೆ ಮಾಡಿದ ಮನವಿಗೆ ಪ್ರತಿಕ್ರಿಯಿಸಿ, ಅಂತಿಮ ಇ-ಖಾತಾ ನೀಡುವ ವಿಚಾರವಾಗಿ ವಲಯ ಜಂಟಿ ಆಯುಕ್ತರು ವಾರದೊಳಗಾಗಿ ಸಮಸ್ಯೆ ಬಗೆಹರಿಸಿ ಇ-ಖಾತಾ ನೀಡಲು ಕ್ರಮವಹಿಸುವಂತೆ ಸೂಚನೆ ನೀಡಿದರು.

3.5 ಲಕ್ಷ ರು. ಪರಿಹಾರ ನೀಡಲು ಸೂಚನೆ: ಸರ್ವೀಸ್ ರಸ್ತೆಯಲ್ಲಿ ಮರದ ಕೊಂಬೆ ಬಿದ್ದು, ವ್ಯಕ್ತಿಯ ಬುಜಕ್ಕೆ ಪೆಟ್ಟಾಗಿ ಸುಮಾರು 6 ಲಕ್ಷ ರು. ವೈದ್ಯಕೀಯ ವೆಚ್ಚವಾಗಿದ್ದು, ವೈದ್ಯಕೀಯ ಕಾಯಿದೆ ಪ್ರಕಾರ 3.5 ಲಕ್ಷ ರು. ನೀಡಲು ಕ್ರಮ ವಹಿಸಲಾಗುತ್ತಿದ್ದು, ಕೂಡಲೆ ಅವರ ಖಾತೆಗೆ ಜಮೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಹವಾಲುಗಳ ವಿವರ

- ಕಾವೇರಿ ನೀರು ಸಂಪರ್ಕ ಕೊಡಿಸಲು ಮನವಿ
- ಒಂಟಿ ಮನೆಗೆ ಅರ್ಜಿ ಸಲ್ಲಿಸಿದ್ದು, ಅನುದಾನ ಬಿಡುಗಡೆ ಮಾಡಲು ಮನವಿ
- ಮನೆ ಖರೀದಿ ಮಾಡುತ್ತಿದ್ದು, ಇ-ಖಾತಾ ಪಡೆಯಲು ಸಮಸ್ಯೆಯಾಗುತ್ತಿದೆ. ತ್ವರಿತವಾಗಿ ಇ-ಖಾತಾ ವ್ಯವಸ್ಥೆ ಮಾಡಲು ಮನವಿ.
- ರಸ್ತೆ ಬದಿ ಕಸ ಬಿಸಾಡುವ ಸಮಸ್ಯೆ ಹೆಚ್ಚಾಗಿದ್ದು, ಅದನ್ನು ನಿಯಂತ್ರಿಸಲು ಮನವಿ.
- ರಸ್ತೆ ಮೇಲೆ ಕೊಳಚೆ ನೀರು ತುಂಬಿ ಹರಿಯುತ್ತಿದ್ದು, ಆ ಸಮಸ್ಯೆಯನ್ನು ಬಗೆಹರಿಸಲು ಮನವಿ.
- ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಮನವಿ
- ಮರದ ಕೊಂಬೆಗಳು ರಸ್ತೆಗೆ ಬಂದಿದ್ದು,ವಾಹನಗಳ ಓಡಾಟಕ್ಕೆ ಸಮಸ್ಯೆಯಾಗುತ್ತಿದೆ. ಅದನ್ನು ಕಟಾವು ಮಾಡಲು ಮನವಿ.
- ದಾಸರಹಳ್ಳಿ ಮುಖ್ಯ ರಸ್ತೆಯಲ್ಲಿ ಪಾದಚಾರಿ ಒತ್ತುವರಿ ಹಾಗೂ ರಸ್ತೆ ಬದಿ ಪಾರ್ಕಿಂಗ್ ಮಾಡುವುದನ್ನು ನಿಯಂತ್ರಿಸಲು ಮನವಿ.
- ಟಾಟಾ ನಗರ ವ್ಯಾಪ್ತಿಯಲ್ಲಿ ರಾಜಕಾಲುವೆಯಲ್ಲಿ ಹೂಳೆತ್ತಲು ಮನವಿ.

ಮುದ್ದುರಾಮ ಪ್ರಶಸ್ತಿ ಪ್ರದಾನ ನ.31ಕ್ಕೆ

ಬೆಂಗಳೂರು: ಮೈಸೂರಿನ ಮುದ್ದುರಾಮ ಪ್ರತಿಷ್ಠಾನ ಹಾಗೂ ಅಭಿನವ, ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಮುದ್ದುರಾಮ ಪ್ರಶಸ್ತಿ ಪ್ರದಾನ ಹಾಗೂ ಮುದ್ದುರಾಮ ಚೌಪದಿಗಳ 10 ಸಂಪುಟಗಳ ಲೋಕಾರ್ಪಣಾ ಕಾರ್ಯಕ್ರಮವು ನ.31 ರಂದು ನಡೆಯಲಿದೆ.

ಅಂದು ಬೆಳಗ್ಗೆ 10.30ಕ್ಕೆ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ನಡೆಯಲಿರುವ ಕಾಯಕ್ರಮಕ್ಕೆ ಸುತ್ತೂರು ಕ್ಷೇತ್ರದ ವೀರ ಸಿಂಹಾಸನ ಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ.

ಸಾಹಿತಿ ಪ್ರೊ.ಅ.ರಾ.ಮಿತ್ರ ಅವರಿಗೆ ಮುದ್ದುರಾಮ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಮುದ್ದುರಾಮ ಸಂಪುಟಗಳ ಕುರಿತು ಅಂಕಣಕಾರ ಡಾ.ಗುರುರಾಜ ಕರಜಗಿ ಅವರು ಪರಿಚಯಿಸಲಿದ್ದಾರೆ. ಪ್ರಶಸ್ತಿ ಪುರಸ್ಕೃತರ ಕುರಿತು ಮೈಸೂರಿನ ಸೇಂಟ್ ಫಿಲೋಮಿನ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಪ್ರೊ.ಎಂ.ಕೃಷ್ಣೇಗೌಡ ಅವರು ಪರಿಚಯಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್, ಪ್ರತಿಷ್ಠಾನದ ಅಧ್ಯಕ್ಷ ಕೆ.ಸಿ.ಶಿವಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಡಾ.ಸಿ.ಸೋಮಶೇಖರ್ ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT.
THIS DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES.
THIS PUBLIC ANNOUNCEMENT IS NOT INTENDED FOR PUBLICATION OR DISTRIBUTION, DIRECTLY OR INDIRECTLY OUTSIDE INDIA.

C2C Advanced Systems

C2C ADVANCED SYSTEMS LIMITED

Corporate Identity Numbers: U72200KA2018PLC110361

Our Company was incorporated as 'C2C – DB Systems Private Limited, a private limited company, under the Companies Act, 2013, pursuant to a Certificate of Incorporation dated February 21, 2018 issued by the Registrar of Companies, Bengaluru, Karnataka **("RoC")**. Subsequently, the name of our Company was changed to C2C Advanced Systems Private Limited and a fresh Certificate of Incorporation dated May 12, 2022 was issued by the RoC. Pursuant to a special resolution passed by our shareholders in the Extra Ordinary General Meeting held on October 28, 2023 our Company was converted into a public limited company and the name of our Company was changed to 'C2C Advanced Systems Limited and a fresh Certificate of Incorporation dated December 22, 2023 was issued to our Company by the RoC. For further details on the changes in the name and registered office of our Company, see *"History and Certain Corporate Matters"* on page 168 of the Red Herring Prospectus.

Registered Office: No 86, Wings of Eagles, SS Commercial Estate, Varthur Road, Nagavarapalaya Main Road, C V Raman Nagar, Bengaluru – 560 093, Karnataka, India
Corporate Office: C4, Anand Niketan, New Delhi – 110 021, India
E-mail: compliance@ c2c-as.com; | **Tel :** +91 80 4372 4052; | **Website:** www.c2c-as.com | **Company Secretary and Compliance Officer:** Mr. Manjeet Singh

PROMOTERS OF OUR COMPANY: C2C INNOVATIONS PRIVATE LIMITED, PVR MULTIMEDIA PRIVATE LIMITED, LAKSHMI CHANDRA, MAYA CHANDRA, SUBRAHMANYA SRINIVASA NARENDRA LANKA, KURIYEDATH RAMESH AND MURTAZA ALI SOOMAR

C2C Advanced Systems as the pre-eminent domain agnostic technology company focused on "Intelligent Platform" is in a very unique position to dominate this space. We have a technological advantage over our existing competitors, as reflected in our higher margins and globally competitive offerings. Our expertise in architecture design, data acquisition, data analytics and modelling, AI/ML has dual use in the civilian applications. The rigorous requirements placed by Military requirements allows us to innovate for the highest levels of performance.

THE ISSUE

INITIAL PUBLIC ISSUE OF 43,83,600 EQUITY SHARES OF FACE VALUE OF ₹ 10.00 EACH ("EQUITY SHARES") OF C2C ADVANCED SYSTEMS LIMITED (THE "COMPANY" OR THE "ISSUER") FOR CASH AT A PRICE OF ₹ [●] PER EQUITY SHARE INCLUDING A SHARE PREMIUM OF ₹ [●] PER EQUITY SHARE (THE "ISSUE PRICE") AGGREGATING TO ₹ [●] LAKHS ("THE ISSUE") OF WHICH 2,19,600 EQUITY SHARES AGGREGATING TO ₹ [●] LAKHS WILL BE RESERVED FOR SUBSCRIPTION BY MARKET MAKER TO THE ISSUE (THE "MARKET MAKER RESERVATION PORTION"). THE ISSUE LESS THE MARKET MAKER RESERVATION PORTION I.E. NET ISSUE OF 41,64,000 EQUITY SHARES AGGREGATING TO ₹ [●] LAKHS (THE "NET ISSUE"). THE ISSUE AND THE NET ISSUE WILL CONSTITUTE 26.34% AND 25.02% RESPECTIVELY OF THE POST ISSUE PAID-UP EQUITY SHARE CAPITAL OF OUR COMPANY.

PRICE BAND: ₹ 214/- TO ₹ 226/- PER EQUITY SHARE OF FACE VALUE ₹ 10/- EACH
The Floor Price is 21.40 times of the Face Value and the Cap Price is 22.60 times of the Face Value
Bids can be made for a minimum of 600 Equity Shares and in multiples of 600 Equity Shares thereafter

CORRIGENDUM CUM ADDENDUM TO THE RED HERRING PROSPECTUS DATED NOVEMBER 11, 2024 AND ISSUE OPENING ADVERTISEMENT DATED NOVEMBER 14, 2024
NOTICE TO THE INVESTORS READ WITH CORRIGENDUM CUM ADDENDUM DATED NOVEMBER 20, 2024, NOVEMBER 24, 2024 AND NOVEMBER 25, 2024
("THE CORRIGENDUM CUM ADDEDNUM")

This corrigendum cum Addendum is with reference to the Issue Opening Advertisement dated November 14, 2024 in the Financial Express (English), Jansatta (Hindi) and Bengaluru edition of Vishwavani (Kannada). In this regard, please note the following:

"We refer to the directions received from National Stock Exchange of India Limited ("NSE"), vide letter no. NSE/LIST/3837E dated November 25, 2024. Accordingly, the issuer company is giving an option to withdraw the application from this IPO. Please contact your broker/ASBA banker through whom the bid was placed. This is to be read along with the Red Herring Prospectus dated November 11, 2024, Corrigendum cum Addendum dated November 20, 2024, November 24, 2024 and November 25, 2024.

Procedure for withdrawal of application/bid:

Step 1: Investor to approach the Designated Intermediary for withdrawal of its application/bid;
Step 2: Designated Intermediary to acknowledge the request received from the investors;
Step 3: Designated Intermediary based on the request received to cancel the bid on the National Stock Exchange of India Limited ("NSE") Portal;
Step 4: Designated Intermediary to receive the acknowledgement (TRS slip) received from NSE, as required.

You can also mention the details of your broker/bidder, in case you are not able to place your bid (withdrawal) on their platform.

Your mail with the above details should be addressed to us at our email, c2csmeipo@linkintime.co.in and in the subject line please mention PAN Number of the sole / first bidder/applicant with the wording withdrawal. It should read us **XXXXX1234F – Appl. No. XXXXXXXX Withdrawal request".**

In case if any further clarifications or details are required please contact on c2csmeipo@linkintime.co.in, smeipo@markcorporateadvisors.com, investorgrievance@markcorporateadvisors.com and ig@beelinemb.com.

REVISED BID / ISSUE PROGRAM

Bid Closing Date (T day)	Tuesday, November 26, 2024	Initiation of Unblocking of Funds/refunds (T +2 Days)*	On or before Monday, December 02, 2024
Withdrawal Option to all the Investors (Excluding Anchor Investor)	On or before Thursday, November 28, 2024 before 5 pm	Credit of Equity Shares to demat accounts of Allotees (T +2 Days)	On or before Monday, December 02, 2024
Finalization of basis of allotment with the Designated Stock Exchange/ Allotment of Securities (T +1 Day)	On or before Friday, November 29, 2024	Commencement of Trading of Equity Shares on the Stock Exchanges/ Listing Date (T + 3 Days)	On or before Tuesday, December 03, 2024

*In case of any delay in unblocking of amounts in the ASBA Accounts (including amounts blocked through the UPI Mechanism) exceeding two Working Days from the closure of withdrawal option date (Nov 28, 2024) the Bidder shall be compensated at a uniform rate of ₹ 100 per day or 15% per annum of the Bid Amount, whichever is higher, for the entire duration of delay exceeding two Working Days from the closure of withdrawal option date (Nov 28, 2024) by the intermediary responsible for causing such delay in unblocking. The BRLM shall, in their sole discretion, identify and fix the liability on such intermediary or entity responsible for such delay in unblocking.

(1) Under Section titled "SECTION III – RISK FACTORS" heading "Internal Risk Factors", Risk factor No. 11 appearing on page no. 31 of RHP shall be read as:

11. We do not own our Registered Office from where we operate. Further, our rented premises from which we operate are based on the rent agreement which are not registered as per the requirement.

Our Company does not own its Registered Office situated at No: 86, Wings of Eagles, S S Commercial Estate, Varthur Road, Nagavarapalya Main Road, C V Raman Nagar, Bengaluru–560093 Karnataka, India. For further details in relation to our Properties, please refer to the section titled – Land and Property in the chapter titled "Our Business" on page 128 of this Red Herring Prospectus.

We cannot assure that we will be able to renew our leases on commercially favourable terms or at all in future. We also cannot assure you that we will be permitted to use any of our leased properties on a continuous basis. In the event that we are required to vacate the aforementioned premises, we would be required to make alternative arrangements for new offices and other infrastructure and we cannot assure that the new arrangements will be on commercially acceptable terms. In the event, we are unable to continue to use the premises or renew the lease agreement on favourable terms or at all, we may suffer disruption in our business and administrative operations, which may have an adverse effect on the business, financial condition and results of operations on our Company.

Further, we have not registered rent agreements/lease deed which are for tenure of more than 11 months. The company is in process of registration of the same. Though no penalty or other action has been initiated against the company regarding for such non-registration, our company may incur penalty for the non-registration of the same.

(2) Under Section titled "SECTION V – ABOUT OUR COMPANY" – "OUR BUSINESS" heading "Our Revenue", paragraph below Domestic and Overseas Sales appearing on Page 132 of RHP shall be read as:

The countries to which we have exported our products in the last 2 years and for the period ended September 30, 2024 are Malaysia, United States of America, and Singapore. We sell our products in the states of Tamil Nadu, Karnataka, West Bengal and Uttarakhand

(3) Under Section titled "SECTION IV – INTRODUCTION – OBJECT FOR THE ISSUE" heading "Purchase of Fixed Assets (both hardware and software) for our existing operations and Dubai Experience Centre", the quotation details for Sr.29 for Fire-wall appearing on page no. 92 of RHP shall be read:

Sr No	Hardware and Software	Quantity	Cost per Unit	Date of Quotation	Expiry Date	Name of Vendor	Quotation Amount (₹)
29	Computers for the Training Centre at Bengaluru – Firewall	2	2,12,541 plus GST@18%	20/04/2024	31/12/2024	Yashas Computers	5,01,596

(4) Under Section titled "SECTION VI – FINANCIAL INFORMATION – RESTATED FINANCIAL INFORMATION" heading "Note No. 30 - Related Party Disclosures- (c) Outstanding balances at the end of the period", the outstanding balance of Unsecured Loans of C2C Innovations Private Limited for the six months ended September 30, 2024 shall be read as ₹ 13.29 Crores instead of ₹ 13.29 Lakhs.

All capitalized terms used herein and not specifically defined shall have the same meaning as ascribed to them in the Red Herring Prospectus dated November 11, 2024 read with corrigendum cum addendum dated November 20, 2024, November 24, 2024 and November 25, 2024.

LAST DATE FOR WITHDRAWAL OF BIDS: THURSDAY, NOVEMBER 28, 2024 BEFORE 5:00 P.M.

BOOK RUNNING LEAD MANAGERS TO THE ISSUE

MARK CORPORATE ADVISORS PRIVATE LIMITED
CIN Number : U67190MH2008PTC181996
Address: 404/1, The Summit Business Bay, Sant Janabai Road (Service Lane), Off W. E. Highway, Vile Parle (East), Mumbai-400 057. Maharashtra
Tel. No.: +91 22 2612 3207/08
Email id: smeipo@markcorporateadvisors.com
Investor Grievance Email id: investorsgrievance@markcorporateadvisors.com
Website: www.markcorporateadvisors.com
Contact Person: Mr Manish Gaur
SEBI Registration Number.: INM000012128

BEELINE CAPITAL ADVISORS PRIVATE LIMITED
Address: B 1311-1314, Thirteenth Floor, Shilp Corporate Park, Rajpath Rangoli Road, Thaltej, Ahmadabad, Gujarat – 380054, India.
Telephone Number: 079 4918 5784
Email Id: mb@beelinemb.com
Investors Grievance Id: ig@beelinemb.com
Website: www.beelinemb.com
Contact Person: Mr. Nikhil Shah
CIN: U67190GJ2020PTC114322
SEBI Registration Number: INM000012917

REGISTRAR TO THE ISSUE

LINK INTIME INDIA PRIVATE LIMITED
Address: C-101, 1st Floor, 247 Park, L.B. S. Marg, Vikhroli (West) Mumbai 400 083 Maharashtra, India
Tel. No: + 91 22 4918 6200
Email id: c2csme.ipo@linkintime.co.in
Investor grievance e-mail: c2csmeipo@linkintime.co.in
Website: www.linkintime.co.in
Contact Person: Ms. Shanthi Gopalkrishnan.
SEBI Registration No.: INR000004058

COMPANY SECRETARY AND COMPLIANCE OFFICER

C2C Advanced Systems Limited
Mr. Manjeet Singh
Address: C4, Anand Niketan, New Delhi – 110 021, India | **Tel No:** +91 80 4372 4052 | **Email:** compliance@ c2c-as.com
Website: www.c2c-as.com

Investors can contact the Company Secretary and Compliance Officer or the BRLMs or the Registrar to the Issue in case of any pre-Issue or post-issue related problems, such as non-receipt of letters of Allotment, non-credit of Allotted Equity Shares in the respective beneficiary account and refund orders, etc.

On behalf of Board of Directors
For, C2C ADVANCED SYSTEMS LIMITED
sd/-
Lakshmi Chandra
Managing Director

Place: Bengaluru
Date: November 26, 2024

Disclaimer: C2C Advanced Systems Limited is proposing, subject to applicable statutory and regulatory requirements, receipt of requisite approvals, market conditions and other considerations, to make an initial public issue of its Equity Shares and has filed the RHP with the Registrar of Companies, Bengaluru, Karnataka on November 12, 2024 and thereafter with SEBI and the Stock Exchanges. The RHP is available on the websites of SEBI at www.sebi.gov.in, website of the Company at www.c2c-as.com, the website of NSE i.e. www.nseindia.com, the website of the BRLMs i.e. Mark Corporate Advisors Private Limited and Beeline Capital Advisors Private Limited at www.markcorporateadvisors.com and www.beelinemb.com, respectively. Any potential investors should note that investment in equity shares involves a high degree of risk and for details relating to the same, please refer to the RHP including the section titled "Risk Factors" beginning on page 26 of the Red Herring Prospectus.

The Equity Shares have not been and will not be registered under the U.S. Securities Act of 1933, as amended (the "Securities Act") or any state securities laws in the United States, and unless so registered, and may not be issued or sold within the United States, except pursuant to an exemption from, or in a transaction not subject to, the registration requirements of the Securities Act and in accordance with any applicable U.S. state securities laws. The Equity Shares are being Offered and sold outside the United States in 'offshore transactions' in reliance on R egulation S under the Securities Act and the applicable laws of each jurisdiction where such Offers and sales are made. There will be no public offering in the United States.

garima advt.

ಸಮಾಚಾರ ಸಣ್ಣದಲ್ಲ

ದಾವಣಗೆರೆ: ಸಾವಿನಲ್ಲೂ ಒಂದಾದ ದಂಪತಿ

ದಾವಣಗೆರೆ: ಪತಿಯ ಸಾವಿನ ಸುದ್ದಿ ಕೇಳಿ ಕುಸಿದುಬಿದ್ದು ಪತ್ನಿಯೂ ಸಾವನ್ನಪ್ಪಿದ ಹೃದಯ ವಿದ್ರಾವಕ ಘಟನೆ ಚನ್ನಗಿರಿ ತಾಲೂಕಿನ ದೇವರಹಳ್ಳಿ ಗ್ರಾಮದಲ್ಲಿ ನಡೆದಿದೆ. ಕಸ್ತೂರಿ ರಂಗಪ್ಪ (65) ಜಯಮ್ಮ (58) ಸಾವನ್ನಪ್ಪಿದ ದಂಪತಿ. ಪಡಿತರ ಅಕ್ಕಿ ತರಲು ನ್ಯಾಯಬೆಲೆ ಅಂಗಡಿಗೆ ಕಸ್ತೂರಿ ರಂಗಪ್ಪ ಹೋಗಿದ್ದ ವೇಳೆ ಅವರು ಕುಸಿದು ಬಿದ್ದಿದ್ದಾರೆ. ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಸಾವನ್ನಪ್ಪಿದ್ದಾರೆ. ಕಸ್ತೂರಿ ರಂಗಪ್ಪ ಸಾವನ್ನಪ್ಪಿದ ವಿಚಾರವನ್ನು ಫೋನ್ ಮೂಲಕ ಪತ್ನಿ ಜಯಮ್ಮನಿಗೆ ಕುಟುಂಬಸ್ಥರು ತಿಳಿಸಿದ್ದಾರೆ. ಕೂಡಲೇ ಅವರು ಸಹ ಕುಸಿದು ಸಾವನ್ನಪ್ಪಿದ್ದಾರೆ.

ಗುಂಡ್ಲುಪೇಟೆ: ವಿದ್ಯುತ್ ಸ್ಪರ್ಶದಿಂದ ಆನೆ ಸಾವು

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದುಕೆರೆ ವಲಯ ವ್ಯಾಪ್ತಿಯ ಮಂಗಲ ಗ್ರಾಮದ ಕಾಡಂಚಿನಲ್ಲಿ ಮೂರು ವರ್ಷದ ಗಂಡಾನೆ ವಿದ್ಯುತ್ ಸ್ಪರ್ಶಿಸಿ ಸಾವನ್ನಪ್ಪಿದೆ. ಹುಲಿಯಮ್ಮನ ಗುಡಿಗೆ ಹೋಗುವ ದಾರಿಯಲ್ಲಿ ಷರೀಫ್ ಖಾನ್ ಎಂಬುವರ ಜಮೀನಿನಲ್ಲಿ ಬೆಳೆಯಲಾಗಿದ್ದ ರಾಗಿ ರಕ್ಷಣೆಗೆ ಅನುಮತಿ ಪಡೆಯದೆ ವಿದ್ಯುತ್ ತಂತಿ ಬೇಲಿ ಅಳವಡಿಸಲಾಗಿತ್ತು. ಸೋಮವಾರ ತಡರಾತ್ರಿ ಮೇವು ಅರಸಿ ಬಂದಾಗ ಆನೆಗೆ ವಿದ್ಯುತ್ ತಗುಲಿ ಮೃತಪಟ್ಟಿದೆ. ಭೂಮಾಲೀಕ ಷರೀಫ್ ಖಾನ್ ಜಮೀನನ್ನು ಬೇರೊಬ್ಬರಿಗೆ ಗುತ್ತಿಗೆ ನೀಡಿದ್ದರು ಎನ್ನಲಾಗಿದೆ. ಭೂಮಿಯ ಮಾಲೀಕ, ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಆರೆಸ್ಸೆಸ್ ಭಾಗಿಯಾಗಿಲ್ಲ

ಸಂವಿಧಾನ ಜಾರಿಯ 75ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ

ಬೆಂಗಳೂರು: ಬ್ರಿಟಿಷರ ಅವಧಿಯಲ್ಲಿ ಹುಟ್ಟಿದ ಆರ್‌ಎಸ್‌ಎಸ್ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಈಗ ದೇಶಭಕ್ತಿಯ ಪಾಠ ಮಾಡುತ್ತಿದೆ ಎಂದು ಸಿ.ಎಂ.ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಂವಿಧಾನ ಜಾರಿಯ 75ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಆರ್‌ಎಸ್‌ಎಸ್‌ನ ಒಬ್ಬರೂ ದೇಶಕ್ಕಾಗಿ ಹೋರಾಡಿಲ್ಲ, ಒಬ್ಬನೂ ದೇಶಕ್ಕಾಗಿ ಪ್ರಾಣಕೊಟ್ಟಿಲ್ಲ. ಅವರು ಮನುಸ್ಮೃತಿ ಪರವಾಗಿರುವುದರಿಂದಲೇ ನಮ್ಮ ಸಂವಿಧಾನ ವಿರೋಧಿಸುತ್ತಾರೆ. ಪೇಜಾವರ ಶ್ರೀಗಳು ಸಂವಿಧಾನ ಬಗ್ಗೆ ಆಡಿದ ಮಾತನ್ನು ಪ್ರಸ್ತಾಪಿಸಿದ ಸಿಎಂ, ಆ ರೀತಿ ಹೇಳುವ ಅಗತ್ಯ ಏನಿತ್ತು ಎಂದು ಪ್ರಶ್ನಿಸಿದರು.

ಮನುಷ್ಯರನ್ನು ಜಾತಿ-ಧರ್ಮದ ಹೆಸರಲ್ಲಿ ವಿಂಗಡಿಸೋದು ದೇವರ ಕೆಲಸ ಅಲ್ಲ. ಎಲ್ಲ ಮಾಡಿದ್ದು ಮನುಸ್ಮೃತಿ. ಬಿಜೆಪಿ ಮನುಸ್ಮೃತಿಯಲ್ಲಿ ನಂಬಿಕೆ ಇಟ್ಟುಕೊಂಡಿದೆ. ಕಾಂಗ್ರೆಸ್ ಸಂವಿಧಾನದಲ್ಲಿ ನಂಬಿಕೆ ಇಟ್ಟುಕೊಂಡಿದೆ. ಇದೇ ಎರಡೂ ಪಕ್ಷಕ್ಕೂ ಇರುವ ವ್ಯತ್ಯಾಸ ಎಂದರು.

ಇಡೀ ದೇಶದ ಪಾಲಿಗೆ ಇಂದು ಸಂವಿಧಾನ ದಿನ. ಬಸವಣ್ಣನವರು 850 ವರ್ಷಗಳ ಹಿಂದೆ ಜಾತಿ ವ್ಯವಸ್ಥೆ, ಜಾತಿ ಅಸಮಾನತೆ ವಿರೋಧಿಸಿದ್ದರು. ಆದರೆ ಇವತ್ತಿಗೂ ಜಾತಿ ವ್ಯವಸ್ಥೆ ಹೋಗಿಲ್ಲ. ಬಾಯಲ್ಲಿ ಬಸವಾದಿ ಶರಣರ ವಚನ ಹೇಳೋದು. ಆಮೇಲೆ, ನೀನು ಯಾವ ಜಾತಿ ಅಂತ ಕೇಳ್ತಾರೆ. ಈಗಲೂ ಇವನಾರವ, ಇವನಾರವ ಅಂತಲೇ ಕೇಳುತ್ತಿದ್ದಾರೆ ಹೊರತು, ಇವ ನಮ್ಮವ ಅಂತ ಹೇಳುತ್ತಲೇ ಇಲ್ಲ ಎಂದು ವ್ಯಂಗ್ಯವಾಡಿದರು

ಸಂವಿಧಾನದ ಧ್ಯೇಯೋದ್ದೇಶಗಳು ಎಷ್ಟರ ಮಟ್ಟಿಗೆ ಜಾರಿಯಾಗಿವೆ, ಏಕಿನ್ನೂ ಸಮಾನತೆಯ ಸಮಾಜ ನಿರ್ಮಾಣ ಆಗಿಲ್ಲ ಎನ್ನುವುದನ್ನು ಅವಲೋಕನ ಮಾಡಿಕೊಳ್ಳಬೇಕಿದೆ. ಸಂವಿಧಾನ ಜಾರಿ ಸಭೆಯಲ್ಲಿ ಅಂಬೇಡ್ಕರ್ ಅವರು ಆಡಿದ ಎಚ್ಚರಿಕೆಯ ಮಾತುಗಳನ್ನು ನಾವು ಮರೆಯಬಾರದು. ಪ್ರತಿಯೊಬ್ಬರಿಗೂ ಒಂದು ಓಟು, ಒಂದು ಮೌಲ್ಯ ಸಿಕ್ಕಿದೆ. ಆದರೆ ಎಲ್ಲರಿಗೂ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿಲ್ಲ. ನಾವು ವೈರುದ್ಯತೆ ಇರುವ ಸಮಾಜಕ್ಕೆ ಕಾಲಿಡುತ್ತಿದ್ದೇವೆ. ಸಾಮಾಜಿಕ, ಆರ್ಥಿಕ ಅಸಮಾನತೆ ಹೋಗಲಾಡಿಸದಿದ್ದರೆ ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿ ಆಗಲ್ಲ ಎನ್ನುವ ಎಚ್ಚರಿಕೆ ನೀಡಿದ್ದರು ಎಂದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಂವಿಧಾನ ಜಾರಿಯ 75ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಸಂವಿಧಾನ ಪೀಠಿಕೆ ವಾಚಿಸಿದರು. ಕಾನೂನು ಸಲಹೆಗಾರ ಪೊನ್ನಣ್ಣ, ಸಚಿವರಾದ ಎಚ್.ಕೆ.ಪಾಟೀಲ, ಬೈರತಿ ಸುರೇಶ್ ಇದ್ದರು.

ಕೆಪಿಸಿಸಿ ಕಚೇರಿಯ ಭಾರತ ಜೋಡೋ ಸಭಾಂಗಣದಲ್ಲಿ ನಡೆದ ಭಾರತದ ಸಂವಿಧಾನ ಅಂಗೀಕಾರ ದಿನ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು.

ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ಮಹದೇವಪ್ಪ ಅವರು ಸಮಾಜಕಲ್ಯಾಣ ಇಲಾಖೆ ಜವಾಬ್ದಾರಿ ವಹಿಸಿಕೊಂಡ ನಂತರ ಶಾಲಾ ಮಕ್ಕಳಿಗೆ ಸಂವಿಧಾನ ಪೀಠಿಕೆ ಓದಿಸುವ ಕಾರ್ಯಕ್ರಮ ತಂದಿದ್ದಾರೆ. ನಾನು ಕೆಪಿಸಿಸಿ ಅಧ್ಯಕ್ಷನಾಗಿ ಅಧಿಕಾರ ಸ್ವೀಕಾರ ಕಾರ್ಯಕ್ರಮ ಮಾಡುವಾಗ ಸಂವಿಧಾನ ಪೀಠಿಕೆ ಓದಿ, ಪ್ರತಿಜ್ಞೆ ತೆಗೆದುಕೊಂಡಿದ್ದೆ.

-ಡಿ.ಕೆ.ಶಿವಕುಮಾರ್ ಡಿಸಿಎಂ

ಮಗನಿಗೆ ಕಾನೂನು ಓದಿಸುತ್ತಿದ್ದೇನೆ

ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ವಕೀಲನಾಗಬೇಕು ಎಂದು ಆಸೆ ಇತ್ತು. ಆ ಸಮಯದಲ್ಲಿ ನನಗೆ ಪಕ್ಷದ ವತಿಯಿಂದ ಟಿಕೆಟ್ ನೀಡಲಾಗಿತ್ತು. ದೇವರಾಜ ಅರಸು ಹಾಗೂ ಗುಂಡೂರಾವ್ ಅವರ ಕಾಲದಲ್ಲಿ ವಿದ್ಯಾರ್ಥಿ ನಾಯಕತ್ವಕ್ಕೆ ಬಹಳ ಪ್ರಾಮುಖ್ಯತೆ ಇತ್ತು. ನಾನು ವಕೀಲನಾಗಲಿಲ್ಲ. ಆದರೆ ನನಗೀಗ ದಿನನಿತ್ಯ ಇಡಿ, ಆದಾಯ ತೆರಿಗೆ, ಸಿಬಿಐ ನೋಟಿಸ್ ಬರುತ್ತಿವೆ. ನನ್ನ ಕೈತುಂಬಾ ಈ ಸಂಸ್ಥೆಗಳ ನೋಟಿಸ್‌ಗಳಿವೆ. ಈ ನೋಟಿಸ್‌ಗಳನ್ನು ಓದಬೇಕು ಎಂಬ ಕಾರಣಕ್ಕೆ ನನ್ನ ಮಗನಿಗೆ ಕಾನೂನು ವ್ಯಾಸಂಗ ಮಾಡಿಸುತ್ತಿದ್ದೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಬಿಜೆಪಿಯಿಂದ ಸಮಾಜ ವಿಭಜನೆ: ಡಿಸಿಎಂ ಡಿ.ಕೆ.ಶಿವಕುಮಾರ್

ಬಿಜೆಪಿಯವರು ಕತ್ತರಿಯಂತೆ ಸಮಾಜವನ್ನು ಇಬ್ಭಾಗ ಮಾಡುತ್ತಾರೆ. ಕಾಂಗ್ರೆಸ್ ಸೂಜಿಯಂತೆ ಸಮಾಜವನ್ನು ಪರಸ್ಪರ ಬೆಸೆಯುತ್ತದೆ. ಇದು ಕಾಂಗ್ರೆಸ್ ಪಕ್ಷದ ಶಕ್ತಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

ಕೆಪಿಸಿಸಿ ಕಚೇರಿಯ ಭಾರತ ಜೋಡೋ ಸಭಾಂಗಣದಲ್ಲಿ ನಡೆದ ಭಾರತದ ಸಂವಿಧಾನ ಅಂಗೀಕಾರ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ನಾವು ಭಾರತ ಜೋಡೋ ಯಾತ್ರೆ ಮಾಡಿದ್ದು ಕೂಡ ದೇಶವನ್ನು ಒಟ್ಟಾಗಿಡುವ ಉದ್ದೇಶದಿಂದ. ಇಂದಿರಾ ಗಾಂಧಿ ಅವರು ಸಂವಿಧಾನದಲ್ಲಿ ಸಮಾಜವಾದ ಹಾಗೂ ಜಾತ್ಯಾತೀತ ತತ್ವ ಪದಗಳನ್ನು ಸೇರಿಸಿದ್ದರು. ಇದರ ವಿರುದ್ಧ ಅನೇಕರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ವಿಚಾರವಾಗಿ ಸುಪ್ರೀಂಕೋರ್ಟ್ ಸೋಮವಾರವಷ್ಟೇ ಆದೇಶ ಹೊರಡಿಸಿದ್ದು, ಈ ಪದಗಳನ್ನು ಸಂವಿಧಾನದಿಂದ ತೆಗೆಯಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಸಂವಿಧಾನಕ್ಕೆ ಅಪಾಯವಿದೆ ಎಂದು ನಾವು ಹೋರಾಟ ಮಾಡುತ್ತಿದ್ದೇವೆ. ನಮ್ಮ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಈ ವಿಚಾರವಾಗಿ ಪ್ರಬುದ್ಧವಾಗಿ ವಾದ ಮಂಡಿಸಿದ್ದಾರೆ.

ಕಬ್ಬಿಣದಲ್ಲಿ ಕತ್ತರಿಯನ್ನೂ ಮಾಡಬಹುದು, ಸೂಜಿಯನ್ನು ಮಾಡಬಹುದು. ಕತ್ತರಿ ಬಟ್ಟೆಯನ್ನು ಹರಿಯಲು ಬಳಸಿದರೆ, ಸೂಜಿಯನ್ನು ಬಟ್ಟೆ ಹೊಲಿಯಲು ಬಳಸಲಾಗುವುದು. ಕಾಂಗ್ರೆಸ್ ಪಕ್ಷ ದೇಶವನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿದೆ ಎಂದರು.

ಸ್ಕ್ಯಾನ್ ಮಾಡಿ, ಹಂಪಿ ಶಿಲೆಗಳ ಸಂಗೀತ ಕೇಳಿ

ಬಳ್ಳಾರಿ: ವಿಶ್ವಪ್ರಸಿದ್ಧ ಹಂಪಿಗೆ ಬರುವ ಪ್ರವಾಸಿಗರು ಇನ್ನು ಮುಂದೆ ಸಂಗೀತದ ಸ್ವಾದವನ್ನು ಸವಿಯಬಹುದು.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವತಿಯಿಂದ ಹಂಪಿಯ ವಿಜಯ ವಿಠಲ ದೇವಸ್ಥಾನದ ಸಂಗೀತ ಮಂಟಪದಲ್ಲಿ ಸಂಗೀತದ ಕಂಬಗಳಿಗೆ ಪ್ರಯೋಗಿಕವಾಗಿ ಕ್ಯೂಆರ್ ಕೋಡನ್ನು ಅಳವಡಿಸಲಾಗಿದ್ದು, ಪ್ರವಾಸಿಗರು ಸ್ಕ್ಯಾನ್ ಮಾಡುವುದರ ಮೂಲಕ ಸಂಗೀತವನ್ನು ಕೇಳುವ ವ್ಯವಸ್ಥೆ ಮಾಡಲಾಗಿದೆ. ಪ್ರವಾಸಿಗರ ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತೆ ಮುಂದಿನ ದಿನಗಳಲ್ಲಿ ಪ್ರತಿಯೊಂದು ಕಂಬಕ್ಕೆ ಕ್ಯೂ ಆರ್ ಕೋಡ್ ಅಳವಡಿಸುವ ಪ್ಲಾನ್ ಮಾಡಲಾಗಿದೆ. ಆರಂಭಿಕವಾಗಿ ಪ್ರವಾಸಿಗರು ಹಾಗೂ ಸ್ಥಳೀಯರ ಸಲಹೆಯ ಮೇಲೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರಿಂದ ಪ್ರವಾಸಿಗರಿಗೆ ಸಂಗೀತವನ್ನು ಕೇಳಲು ಅನುಕೂಲವಾಗುತ್ತದೆಯಲ್ಲದೇ ಪ್ರವಾಸಿಗರನ್ನು ಹೆಚ್ಚು ಆಕರ್ಷಿಸುತ್ತದೆ.

ಪ್ರೇಯಸಿಗೆ ಇರಿದ ಪ್ರಿಯಕರ

ಹಾಸನ: ಮದುವೆಗೆ ನಿರಾಕರಿಸಿದ ಪ್ರೇಯಸಿಗೆ ಯುವಕನೊಬ್ಬ ಚಾಕು ಇರಿದ ಘಟನೆ ಹಾಸನದ ಆಲೂರಿನಲ್ಲಿ ನಡೆದಿದೆ.

ಆಲೂರಿನ ಕಾರಗೋಡು ಗ್ರಾಮದ ಮೋಹಿತ್ ಹಾಗೂ ಅದೇ ಗ್ರಾಮದ ಯುವತಿ ಎರಡು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಕೆಲವು ದಿನಗಳಿಂದ ಮೋಹಿತ್‌ನಿಂದ ಯುವತಿ ದೂರವಾಗಿದ್ದಳು. ಆದರೂ ಮದುವೆಯಾಗುವಂತೆ ಪ್ರೇಯಸಿಯನ್ನು ಯುವಕ ಕಾಡುತ್ತಿದ್ದ.

ಯುವಕನ ಕಿರುಕುಳದಿಂದ ಬೇಸತ್ತಿದ್ದ ಯುವತಿ, ಈ ಬಗ್ಗೆ ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಳು. ಬಳಿಕ ಎರಡೂ ಕುಟುಂಬದಿಂದ ರಾಜಿ ಸಂಧಾನಕ್ಕೆ ಮುಂದಾಗಿದ್ದರು. ಎರಡು ಕುಟುಂಬಗಳು ಯಾರ ತಂಟೆಗೂ ಬರದಂತೆ ಮಾತುಕತೆ ನಡೆಸಿದ್ದರು. ಬಳಿಕ ಗ್ರಾಮಸ್ಥರ ಜೊತೆಗೆ ಬಂದು ನೋಟರಿ (ದಸ್ತಾವೇಜು) ಮಾಡಿಸಲು ಎರಡು ಕುಟುಂಬಸ್ಥರು ಬಂದಿದ್ದರು. ಈ ವೇಳೆ ಪಾನಮತ್ತನಾಗಿ ಬಂದಿದ್ದ ಯುವಕ ಏಕಾಏಕಿ ಯುವತಿಯ ಮೇಲೆ ಮಾರಕಾಸ್ತ್ರದಿಂದ ದಾಳಿ ನಡೆಸಿದ್ದಾನೆ. ಹಲ್ಲೆಯ ಬಳಿಕ ಪರಾರಿಯಾಗಿದ್ದಾನೆ. ದಾಳಿಯಿಂದ ಯುವತಿಯ ತಲೆ ಹಾಗೂ ಕೈಗಳಿಗೆ ತೀವ್ರ ಗಾಯಗಳಾಗಿವೆ. ಗಾಯಾಳುವಿಗೆ ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳಕ್ಕೆ ಆಲೂರು ಪೊಲೀಸರು ಭೇಟಿ ನೀಡಿದ್ದರು.

ಕಾವೇರಿದ ವಕ್ಫ್ ಕಿಚ್ಚು ಬೇಗುದಿ

← ಮೊದಲಪುಟದಿಂದ

ಆದರೆ ಅದನ್ನು ಮಾಡದೇ, ಪಕ್ಷದ ವಿರೋಧಿ ಚಟುವಟಿಕೆಯ ರೀತಿಯಲ್ಲಿ ದೂರು ನೀಡುವ ಮೂಲಕ ಪ ಕಾರ್ಯಕರ್ತರಿಗೆ, ಜನರಿಗೆ ಯಾವ ಸಂದೇಶ ರವಾನಿಸಲಿದ್ದಾರೆ ಎನ್ನುವ ಪ್ರಶ್ನೆ ಪಕ್ಷದಲ್ಲಿ ಕೇಳಿಬರುತ್ತಿದೆ.

ದೂರು ನೀಡಿದರೂ ಪ್ರಯೋಜನವಿಲ್ಲ ಇನ್ನೊಂದು ಮೂಲದ ಪ್ರಕಾರ, ಪಕ್ಷಕ್ಕೆ ಡ್ಯಾಮೇಜ್ ಮೀರಿ ವೈಯಕ್ತಿಕ ಕಾರಣಕ್ಕೆ ವಿಜಯೇಂದ್ರ ಅವರು ದೆಹಲಿ ವರಿಷ್ಠರಿಗೆ ದೂರು ನೀಡಲು ಮುಂದಾದರೂ ಪಕ್ಷದ ವರಿಷ್ಠರು ಈ ದೂರನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಎನ್ನುವ ಮಾತುಗಳಿವೆ. 'ಹಿಂದು' ಪರ ಹೋರಾಡಿಕೊಂಡೇ ಅಧಿಕಾರದ ಗದ್ದುಗೆ ಏರಿರುವ ಬಿಜೆಪಿ ಇದೀಗ ಹಿಂದು ಪರ ಹೋರಾಟ ಮಾಡುತ್ತಿರುವ ತಮ್ಮ ನಾಯಕರ ವಿರುದ್ಧ ಕ್ರಮವಹಿಸಿದರೆ ಯಾವ ಸಂದೇಶ ರವಾನೆಯಾಗಲಿದೆ ಎಂದು ಯೋಚಿಸದಿರುವಷ್ಟು ದುರ್ಬಲ ನಾಯಕರು ದೆಹಲಿಯಲ್ಲಿ ಕೂತಿಲ್ಲ. ದೂರು ನೀಡುತ್ತೇವೆ ಎನ್ನುವ ಹೇಳಿಕೆಯೇ ವಿಜಯೇಂದ್ರ ಹಾಗೂ ಅವರ ಆಪ್ತರ ರಾಜಕೀಯ ಅನನುಭವಿತನವನ್ನು ತೋರಿಸುತ್ತಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

...ಸಂವಿಧಾನ ಪೀಠಿಕೆಯ ಪ್ರತಿಕೃತಿ ನಿರ್ಮಾಣ: ಸಿಎಂ

← ಮೊದಲಪುಟದಿಂದ

ಆರ್ಥಿಕ ಅಸಮಾನತೆ, ಸಾಮಾಜಿಕ ಅಸ ಮಾನತೆ ಇರುವ ಸಮಾಜಕ್ಕೆ ನಾವು ಕಾಲಿಡುತ್ತಿದ್ದೇವೆ. ಆದ್ದರಿಂದ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವನ್ನೂ ಒದಗಿಸಿಕೊಳ್ಳಬೇಕಿದೆ. ಸಂವಿಧಾನ ಅರ್ಥ ಮಾಡಿಕೊಳ್ಳುವುದು, ಪಾಲಿಸುವುದು ಎಂದರೆ ಸಾಮಾಜಿಕ ನ್ಯಾಯ, ಸಮಾನತೆ, ಭ್ರಾತೃತ್ವವನ್ನು ಪಾಲಿಸಬೇಕು. ನಮ್ಮ ದೇಶದಲ್ಲಿ ಸಂವಿಧಾನ ವಿರೋಧಿಗಳೂ ಇದ್ದಾರೆ. ಸಂವಿಧಾನ ಜಾರಿಗೆ ಹಿಂದೂ ಮಹಾಸಭಾದ ಸಾವರ್ಕರ್, ಗೋಳ್ವಾಳ್ಕರ್ ಕೂಡ ವಿರೋಧಿಸಿದ್ದರು. ಬಿಜೆಪಿಯ ಮಾತೃಪಕ್ಷ ಆರ್‌ಎಸ್‌ಎಸ್ ಕೂಡ ನಮ್ಮ ಸಂವಿಧಾನ ಜಾರಿ ವಿರೋಧಿಸಿದ್ದರು. ಬಾಬಾಸಾಹೇಬರ ಸಂವಿಧಾನ ಜಾರಿಗೂ ಮೊದಲು ಮನುಷ್ಯ-ಮನುಷ್ಯರನ್ನು ತಾರತಮ್ಯದಿಂದ ಶೋಷಿಸುವ, ಅಸಮಾನತೆಯನ್ನು ಆಚರಿಸುವ ಮತ್ತು ಶೂದ್ರರು-ದಲಿತರು- ಮಹಿಳೆಯರಿಗೆ ಶಿಕ್ಷಣವನ್ನು ವಿರೋಧಿಸುವ ಮನುಸ್ಮೃತಿಯ ಪದ್ಧತಿ ಭಾರತದಲ್ಲಿ ಜಾರಿಯಲ್ಲಿತ್ತು. ಸಂವಿಧಾನ ವಿರೋಧಿಗಳು ಮತ್ತೆ ಮನುಸ್ಮೃತಿ ಜಾರಿಗೆ ಹುನ್ನಾರ ನಡೆಸುತ್ತಿದ್ದಾರೆ ಎಂದು ಎಚ್ಚರಿಕೆ ಕೊಟ್ಟರು.

ಯಂತ್ರ ಪಲ್ಟಿ: ಇಬ್ಬರ ಸಾವು

ದಾವಣಗೆರೆ: ರಾಗಿ ಬೇರ್ಪಡಿಸುವ ಯಂತ್ರ ಟ್ರ್ಯಾಕ್ಟರ್ ಸಮೇತ ಪಲ್ಟಿಯಾಗಿ ಇಬ್ಬರು ಕೂಲಿ ಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಭೈರನಾಯಕನಹಳ್ಳಿ ಗ್ರಾಮದ ಸಮೀಪ ಸೋಮವಾರ ರಾತ್ರಿ ಸಂಭವಿಸಿದೆ. ಬಂಗಾರಕ್ಕನ ಗುಡ್ಡದ ಕಾರ್ಮಿಕರಾದ ಮಹೇಶ್ (30) ಮತ್ತು ರಾಧಮ್ಮ (45) ಮೃತಪಟ್ಟಿದ್ದಾರೆ.

ಜೆಡಿಎಸ್‌ನಲ್ಲಿ ಸೋಲಿನ ಒಳಬೇಗುದಿ

← ಮೊದಲಪುಟದಿಂದ

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಿಂದ ಮೈಸೂರು ಚಲೋ ನಡೆಸುವ ವಿಚಾರದಲ್ಲೂ ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನಿರ್ಧಾರಕ್ಕೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೇ ವಿಧಾನಸಭೆ ಉಪ ಚುನಾವಣೆ ನಡೆಯುವ ಸಮಯದಲ್ಲೂ ಅವರು ನಾವು ಇನ್ನೆಷ್ಟು ಬಗ್ಗಬೇಕು ಎಂದಿದ್ದರು.

ಮುಸ್ಲಿಂ ಸಮುದಾಯದ ಬೆಂಬಲವಿಲ್ಲ: ಯಾವಾಗ ಜೆಡಿಎಸ್ ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಂಡಿತೋ ಆಗಲೇ ಜೆಡಿಎಸ್ ನಲ್ಲಿದ್ದ ಶೇಕಡ 90ರಷ್ಟು ಮುಸ್ಲಿಂ ನಾಯಕರು ಹಾಗೂ ಪ್ರಮುಖರು ಕಾಂಗ್ರೆಸ್‌ನತ್ತ ಮುಖ ಮಾಡಿದರು. ಇನ್ನು ಕೆಲವರು ತಟಸ್ಥ ನಿಲುವು ತಾಳಿದರು. ಅಲ್ಲದೇ ಸದಾ ಜೆಡಿಎಸ್‌ನ ಬೆಂಬಲಕ್ಕೆ ನಿಲ್ಲುತ್ತಿದ್ದ ಹಾಗೂ ಮತ ಚಲಾಯಿಸುತ್ತಿದ್ದ ಮುಸ್ಲಿಂ ಸಮುದಾಯದ ಮತದಾರರು ಸಹ ಇದೀಗ ನಿಖಿಲ್ ಕುಮಾರಸ್ವಾಮಿಗೆ ಕೈಕೊಟ್ಟಿದೆ. ಸೋತ ಮೇಲೆ ನಮಗೆ ಆ ನಿರ್ದಿಷ್ಟ ಸಮುದಾಯದ ಬೆಂಬಲ ಸಿಗಲಿಲ್ಲ ಎಂದಿದ್ದಾರೆ. ಆದರೆ, ಜೆಡಿಎಸ್‌ನಿಂದ ಸಾಲು ಸಾಲು ಪ್ರಮುಖ ಮುಸ್ಲಿಂ ನಾಯಕರು ಹೊರನಡೆದಾಗ ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳುವ ಪ್ರಯತ್ನ ಜೆಡಿಎಸ್ ಮಾಡಲಿಲ್ಲ ಎಂದು ಕೂಗು ಅವರ ಕಾರ್ಯಕರ್ತರಲ್ಲೇ ಇದೆ. ಸಿ.ಎಂ ಇಬ್ರಾಹಿಂ ಸೇರಿದಂತೆ ಹಲವು ಮುಸ್ಲಿಂ ಸಮುದಾಯದ ನಾಯಕರು ಪಕ್ಷ ತೊರೆದಿದ್ದರು. ಇದು ಲೋಕಸಭೆ ಚುನಾವಣೆಯಲ್ಲಿ ದಳಕ್ಕೆ ಅನುಭವಕ್ಕೆ ಬರದಿದ್ದರೂ ಉಪ ಚುನಾವಣೆಯಲ್ಲಿ ಅದರ ಪರಿಣಾಮ ಗೊತ್ತಾಗಿದೆ.

ಬಿಜೆಪಿ ಬಿಟ್ಟು ಬರುವಂತಿಲ್ಲ: ಮೈತ್ರಿಯಿಂದ ಜೆಡಿಎಸ್‌ಗೆ ಹಿನ್ನಡೆಯಾಗಿದೆ ಎಂದಾದರೂ ಬಿಜೆಪಿ ಬಿಟ್ಟು ಬರಲು ಸವಾಲಾಗಲಿದೆ. ಎಚ್.ಡಿ ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದು, ಡಾ.ಸಿ.ಮಂಜುನಾಥ್ ಅವರು ಬಿಜೆಪಿ ಚಿಹ್ನೆಯಡಿ ಸಂಸದರಾಗಿದ್ದಾರೆ. ಉಪಚುನಾವಣೆಯಲ್ಲಿ ಚನ್ನಪಟ್ಟಣದಿಂದ ಯೋಗೇಶ್ವರ್ ಗೆಲ್ಲುವ ಮೂಲಕ ರಾಮನಗರ ಜೆಡಿಎಸ್ ಮುಕ್ತವಾಗಿದೆ. ಇದೇ ವೇಳೆ ದಳದ ನಾಯಕರಾದ ಜಿ.ಟಿ.ದೇವೇಗೌಡ ಹಾಗೂ ಸಾ.ರಾ. ಮಹೇಶ್ ಅವರ ಮುನಿಸು ತಾರಕಕ್ಕೇರಿದೆ.

ದಳದವರ ಗುದ್ದಾಟ: ನಾನೇನಾದರೂ ತಪ್ಪು ಮಾಡಿದ್ದರೆ ಪಕ್ಷದ ವೇದಿಕೆಗೆ ಕರೆದು ಕಪಾಳಕ್ಕೆ ಹೊಡೆಯಿರಿ,ಆದರೆ ಸಾರ್ವಜನಿಕವಾಗಿ ಅವಮಾನ ಮಾಡಬೇಡಿ ಎಂದು ಮಾಜಿ ಶಾಸಕ ಸಾ.ರಾ.ಮಹೇಶ್ ಅಲವತ್ತುಕೊಂಡಿದ್ದಾರೆ. ಮೈಸೂರಿನಲ್ಲಿ ಮಾತನಾಡಿ, ರಾಜಕೀಯ ಬಿಟ್ಟು ಬಿಡಿ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರೆ ನಾಳೆಯೇ ಸಾರ್ವಜನಿಕ ಜೀವನದಿಂದ ದೂರ ಇರುತ್ತೇನೆ. ನಾನು ಏನಾದರೂ ತಪ್ಪು ಮಾಡಿದ್ದರೆ ಪಕ್ಷದ ವೇದಿಕೆಯಲ್ಲಿ ಕರೆದು ಕಪಾಳಕ್ಕೆ ಹೊಡೆಯಿರಿ. ಅವಮಾನ ಮಾಡಬೇಡಿ ಎಂದಿದ್ದಾರೆ. ನಾನು ಸುಳ್ಳು ಹೇಳುತ್ತಿಲ್ಲ, ಚನ್ನಪಟ್ಟಣ ಚುನಾವಣಾ ಪ್ರಚಾರಕ್ಕೆ ಕರೆಯಲು ಎಚ್.ಡಿ. ದೇವೇಗೌಡರೇ ಜಿಟಿಡಿ ಪಿಎ ಗೆ ಕರೆ ಮಾಡಿದ್ದರು.. ಮಾಜಿ ಪ್ರಧಾನಿಗಳ ಮೊಬೈಲ್ ನಿಂದ ಹೋಗಿರುವ ಕರೆಗಳ ವಿವರ ಕೊಡುತ್ತೇವೆ ಎಂದಿದ್ದಾರೆ. ಅಲ್ಲದೆ ನನ್ನ ಮೇಲೆ ಜಿಟಿಡಿ ಗೂಬೆ ಕೂರಿಸುವುದನ್ನು ನಿಲ್ಲಿಸಲಿ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ಕಾಂಗ್ರೆಸ್ ಪಕ್ಷ ಬಡವರ ಪಕ್ಷ. ಈ ಪಕ್ಷಕ್ಕೆ ಯಾರೇ ಬಂದರೂ ಸ್ವಾಗತ. ಜೆಡಿಎಸ್ ಕೂಡ ದೊಡ್ಡ ಪಕ್ಷ. ಬೇರೆ ಪಕ್ಷದಿಂದ ಯಾರೇ ಕಾಂಗ್ರೆಸ್ ಸೇರ್ಪಡೆಗೊಂಡರೂ ಒಳ್ಳೆಯದೇ. ನಮ್ಮ ಪಕ್ಷಕ್ಕೆ ಇತರೆ ಪಕ್ಷದ ಕಾರ್ಯಕರ್ತರು ನಾಯಕರು ಬಂದರೆ ಹೆಚ್ಚಿನ ಬಲ ಬರುತ್ತದೆ.

-ಮಧು ಬಂಗಾರಪ್ಪ ಶಿಕ್ಷಣ ಸಚಿವ

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ಪರೀಕ್ಷಾ ವಿಭಾಗ, "ಜ್ಞಾನ ಗಂಗಾ" ಕಲಬುರಗಿ–585 106, ಕರ್ನಾಟಕ, ಭಾರತ
ದೂ.: 08472–263203, ಫ್ಯಾಕ್ಸ್: 08472–263207, ಇ-ಮೇಲ್: regegug@rediffmail.com
ಸಂ.ಗುವಿಕ/ಪರೀಕ್ಷಾ/ಉಗ್ರಾಣ/166A/2024–25/905 ದಿನಾಂಕ : 21–11–2024

:: ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ) ::

1) ಕೆಲಸದ ಹೆಸರು : ಬಾರ್‌ಕೋಡ್ ಹೊಂದಿದ ಉತ್ತರ ಪತ್ರಿಕೆಗಳು, 2) ಅಂದಾಜು ಮೊತ್ತ: **ರೂ. 1,090,3000/–**, 3) ಟೆಂಡರ್ ಫಾರಂ ಪಡೆಯುವ ದಿನಾಂಕ: **21.11.2024**, 4) ಇ.ಎಂ.ಡಿ ಮೊತ್ತ: ರೂ. 3,00,000/–, 5) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **21.12.2024**, 6) ಮಾದರಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **17.12.2024**, 7) ಸಂಪರ್ಕಿಸಬೇಕಾದ ವಿಳಾಸ ಹಾಗೂ ಮೊಬೈಲ್ ಸಂಖ್ಯೆ: ಕುಲಸಚಿವರು (ಮೌಲ್ಯಮಾಪನ) ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ: **9380569141**, 8) ತಾಂತ್ರಿಕ ಬಿಡ್ ತೆಗೆಯುವ ದಿನಾಂಕ: **23.12.2024**, 9) ಹಣಕಾಸು ಬಿಡ್ ತೆಗೆಯುವ ದಿನಾಂಕ : **26.12.2024**

ಸಹಿ/– ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/650/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2024–25/ 2206,ದಿನಾಂಕ: 22.11.2024

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022–23 ನೇ ಸಾಲಿನ ಲೆಕ್ಕಶೀರ್ಷಿಕೆ 5054 ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ ಯೋಜನೆ (ಅಪೆಂಡಿಕ್ಸ್–ಇ) ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ಜಿಲ್ಲೆ ಸುರಪೂರ ಉಪ–ವಿಭಾಗದ ಒಂದು ಕಾಮಗಾರಿ ಇಂಡೆಂಟ್ ಸಂಖ್ಯೆಃ 14496ಗೆ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.400.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 2ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರಿ ಬಿಡ್ ಮೀಟಿಂಗ್ ದಿನಾಂಕ:** 30.11.2024 (11.30 ಗಂಟೆ ನಂತರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 03.12.2024 (17.30 ಗಂಟೆವರೆಗೆ) 7) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 05.12.2024 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 07.12.2024 (11.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 09.12.2024 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:**https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ: ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/307/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ
ದೂರವಾಣಿ ಸಂಖ್ಯೆ: 08225–272128/ ಫ್ಯಾಕ್ಸ್ : 272123 Email: eommtemple@gmail.com
ಸಂಖ್ಯೆ: ಶ್ರೀ ಮ.ಮ.ಕ್ಷೇ.ಅ.ಪ್ರಾ/4/ಪಿಆರ್/45/2024–25 ದಿನಾಂಕ: 25–11–2024

ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆಪಿಪಿಪಿ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ವಿವಿಧ ಸಂಸ್ಥೆಗಳಿಂದ ಕೆಪಿಪಿಪಿ–ಪ್ರಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕೆಪಿಪಿಪಿ–ಪ್ರಕ್ಯೂರ್ಮೆಂಟ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (technical qualification) ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಗೆ ಈ ಕಛೇರಿಯ ದೂರವಾಣಿ ಸಂಖ್ಯೆ 08225–272128 ರಿಂದ ಮಾಹಿತಿ ಪಡೆಯಬಹುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿಪಿ–ಪ್ರಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೊಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿ.ಯ ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ. ಸಂ.	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ)
1	ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ನಾಗಮಲೆ ಭವನ ಅತಿಥಿ ಗೃಹ ದುರಸ್ಥಿ ಹಾಗೂ ಬಣ್ಣ ಬಳಿಯುವ ಕಾಮಗಾರಿ.	156.00	3,12,000.00

ಕೆಪಿಪಿಪಿ–ಪ್ರೊಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	25–11–2024	ರ ನಂತರ
2.	ಟೆಂಡರ್ ವಿಚಾರಣೆಗಾಗಿ ಕೊನೆ ದಿನಾಂಕ ಮತ್ತು ಕಾಲ	30–11–2024	ಸಂಜೆ : 4.00 ಗಂಟೆವರೆಗೆ
3.	ಟೆಂಡರ್ ಡೌನ್ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	02–12–2024	ಸಂಜೆ : 4.00 ಗಂಟೆವರೆಗೆ
4.	ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಕಾಲ	03–12–2024	ಸಂಜೆ : 5.00 ಗಂಟೆ ನಂತರ
5.	ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಕಾಲ	04–12–2024 ಸಂಜೆ: 5.00 ಗಂಟೆ ನಂತರ ಅಥವಾ ತಾಂತ್ರಿಕ ಬಿಡ್ ಅಂತಿಮಗೊಂಡ ನಂತರ)	

ಸಹಿ/–
ಕಾರ್ಯದರ್ಶಿ,
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ
ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ
ಸಂ: ವಾಸಾಸಂಇ/ಚಾನಗರ/431/2024–25

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–17/ಎಇ–1/2024–25/2341 ದಿನಾಂಕ:– 22.11.2024

ಕೆಪಿಪಿಪಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–17/ಎಇ–1/2024–25 ದಿನಾಂಕ: 22.11.2024.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ : 4059–80–051–0–29–386 ಇಲಾಖಾ ಕಟ್ಟಡಗಳು** ಮತ್ತು **ಲೆಕ್ಕಶೀರ್ಷಿಕೆ : 8443– ಠೇವಣಿ ವಂತಿಕೆ ಅಡಿ Construction of Training Center and Guest House at UBDT Campus, Davanagere (Phase-1 & 2)** (ವರ್ಕ್ ಇಂಡೆಂಟ್ ಸಂ : 16311) ಅಂದಾಜು **ಮೊತ್ತ 500.00 ಲಕ್ಷ ಮತ್ತು ಲೆಕ್ಕಶೀರ್ಷಿಕೆ : 4059–80–051–0–29–386 ಇಲಾಖಾ ಕಟ್ಟಡಗಳಡಿ ಜಗಳೂರು ಪಟ್ಟಣದ ಲೋಕೋಪಯೋಗಿ ಇಲಾಖೆಯ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿ. (ವರ್ಕ್ ಇಂಡೆಂಟ್ ಸಂ : 15665) ಮೊತ್ತ 500.00 ಲಕ್ಷ** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ದತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 09.12.2024 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 10.12.2024 ಸಂಜೆ 4.30 ಗಂಟೆಯವರೆಗೆ ಮತ್ತು ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ 12.12.2024 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/515/ ಕೆಎಸ್‌ಎಂಸಿಎ/2024–25
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಧಾರವಾಡ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ, ಧಾರವಾಡ
ನಂ:ಕಾ.ನಿ.ಇಂ/ಗ್ರಾಕುನೀ&ನೈವಿ/ಧಾ/ಕಿ ಇಂ–1/ಇ–ಟೆಂಡರ/2024–25/1384
ದಿನಾಂಕ : 26.11.2024

ಸರ್ವಿಸ ಟೆಂಡರನ ಪ್ರಕಟಣೆ–(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ : ಕಾಮಗಾರಿಯ ಟೆಂಡರನ ಪ್ರಕಟಣೆ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಗಾಣಿಸಿದ ಕಾಮಗಾರಿಗಳ ಟೆಂಡರ ಕರೆಯಲಾಗಿದೆ.

ಕಾಮಗಾರಿಗಳ ವಿವರ ಈ ಕೆಳಗಿನಂತಿದೆ :

ಧಾರವಾಡ ಜಿಲ್ಲೆ : ಸಾಮಾನ್ಯ : Goods Indent No : RWSSD/2024-25/IND0190, IND0287, IND0195, IND0196, IND0203, IND0204, IND0205, IND0206, IND0207, IND0210, IND0211, IND0212. ಕನಿಷ್ಠ ಮೊತ್ತ **24.52** ಲಕ್ಷ, ಗರಿಷ್ಠ ಮೊತ್ತ: **98.58** ಲಕ್ಷ **ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿದೆ. (Calander of Events)**

(1). ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್ ಸೈಟನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : **27.11.2024** ರಿಂದ **17.12.2024** ಸಾಯಂಕಾಲ 04.00 ಘಂಟೆಗೆ. (2). ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ : **18.12.2024** ಸಾಯಂಕಾಲ 04.30 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್ ಸೈಟ್ **kppp.karnataka.gov.in** ನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾ.ಕು.ನೀ. & ನೈ ವಿಭಾಗ, ಧಾರವಾಡ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/650/2024–25

ಟ್ವೀಟಾ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ನಮ್ಮ ದೇಶದಲ್ಲಿ ಸಂವಿಧಾನ ವಿರೋಧಿಗಳೂ ಇದ್ದಾರೆ. ಈ ಬಗ್ಗೆ ನಮಗೆ ಎಚ್ಚರಿಕೆ ಇರಬೇಕು. ಸಂವಿಧಾನ ಜಾರಿಗೆ ಹಿಂದೂ ಮಹಾಸಭಾದ ಸಾವರ್ಕರ್, ಗೋಳ್ವಾಲ್ಕರ್ ಕೂಡ ವಿರೋಧಿಸಿದ್ದರು. ಬಿಜೆಪಿಯ ಮಾತೃಪಕ್ಷ ಆರ್.ಎಸ್.ಎಸ್.ನವರೂ ಕೂಡ ನಮ್ಮ ಸಂವಿಧಾನ ಜಾರಿಯನ್ನು ವಿರೋಧಿಸಿದ್ದರು.

ಬಸು, ಬೆಂಗಳೂರು

ದೇಶವನ್ನು ವಿಭಜನೆ ಮಾಡಿದವರು ಈ ಮಾತನ್ನು ಹೇಳ್ತಾ ಇರೋದು ನಗು ಬರ್ತಾ ಇದೆ ನಮಗೆ. 1975ರಲ್ಲಿ ಎಲ್ಲ ಸಂವಿಧಾನ ಹತ್ಯೆ ಮಾಡಿದವರು ಯಾರು ಅಂಥ ಇಡೀ ದೇಶಕ್ಕೆ ಗೊತ್ತು. ಕಾಂಗ್ರೆಸ್‌ನವರು ಡಾ.ಅಂಬೇಡ್ಕರ್‌ಗೆ ಹೇಗೆ ಅವಮಾನ ಮಾಡಿದ್ದೀರಿ ಅಂತ ಗೊತ್ತು. ಅವರನ್ನು ಚುನಾವಣೆಯಲ್ಲಿ ಸೋಲಿಸ, ತೀರಿಕೊಂಡಾಗ ಸಂಸ್ಕಾರ ಮಾಡಲು ಜಾಗ ನೀಡಿಲ್ಲ ನೀವು..!

ವಕ್ಫ್ ಭೂಕಬಳಿಕೆ ವಿರುದ್ಧ ಜನಾಂದೋಲನ ಯಾತ್ರೆ | ಸ್ವಪಕ್ಷೀಯರ ವಿರುದ್ಧವೇ ಕಿಡಿಕಾರಿದ ಶಾಸಕ

ಬಿಎಸ್‌ವೈ, ಬಿವೈವಿ ವಿರುದ್ಧ ಗುಡುಗಿದ ಯತ್ನಾಳ್

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ನಮ್ಮ ಪ್ರತಿಭಟನೆ ಹತ್ತಿಕ್ಕಲು ನಮ್ಮವರಿಂದಲೇ ಷಡ್ಯಂತ್ರ ನಡೆಯುತ್ತಿದೆ. ಆದರಿಂದ ನಮ್ಮ ಅಭಿಯಾನಕ್ಕೆ ಬಿಜೆಪಿ ಕಾರ್ಯಕರ್ತರು ಬಂದಿಲ್ಲ. ನಾವಿಲ್ಲಿ ಸಿಎಂ, ಬಿಜೆಪಿ ರಾಜ್ಯಾಧ್ಯಕ್ಷ ಆಗಲು ಬಂದಿಲ್ಲ, ವಕ್ಫ್ ವಿರುದ್ಧ ಹೋರಾಟ ನಡೆಸಲು ಆಗಮಿಸಿದ್ದೇವೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ವಿರುದ್ಧ ಕಿಡಿಕಾರಿದ್ದಾರೆ.

ಪಾಪ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ಸದಸ್ಯರನ್ನು ರಜಾಕಾರರು ಸುಟ್ಟರು, ಅವರ ಮಗ ಪ್ರಿಯಾಂಕ್ ಖರ್ಗೆ ಅವರು ಮಾತ್ರ ನಮ್ಮ ಕುಟುಂಬದ ಸದಸ್ಯರನ್ನು ರಜಾಕಾರರು ದಹನ ಮಾಡಿದ್ದಾರೆ ಹೊರತು, ಮುಸ್ಲಿಂರಲ್ಲ ಎನ್ನುತ್ತಾರೆ. ಖರ್ಗೆ ಅವರೇ, ಎಷ್ಟು ಅಂತ ಒಲೈಕೆ ರಾಜಕಾರಣ ಮಾಡ್ತೀರಾ ಬಿಟ್ಟುಬಿಡಿ.

-ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಮಂಗಳವಾರ ಕಲಬುರಗಿಗೆ ಆಗಮಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಟೀಂ ನೇತೃತ್ವದ 'ವಕ್ಫ್ ಭೂಕಬಳಿಕೆ ವಿರುದ್ಧ ಜನಾಂದೋಲನ ಯಾತ್ರೆ'ಯಲ್ಲಿ 'ವಕ್ಫ್ ಹಟಾವೋ, ದೇಶ ಬಚಾವೋ' ಎಂಬ ಘೋಷ ವಾಕ್ಯದೊಂದಿಗೆ ನಡೆದ ಪ್ರತಿಭಟನಾ ರ‍್ಯಾಲಿಯಲ್ಲಿ ಮಾತನಾಡಿ, ದೇಶದ ಆಸ್ತಿಯನ್ನು ಉಳಿಸಲು ಹೋರಾಟಕ್ಕೆ ಇಳಿದಿದ್ದೇವೆ ವಿನಃ ನಾವು ಯಾವುದೇ ಸಿಎಂ ಆಗಲು ಇಲ್ಲಿ ಬಂದಿಲ್ಲ. ಪ್ರತಿಭಟನೆ ಹತ್ತಿಕ್ಕಲು ಪ್ರಯತ್ನಿಸುತ್ತಿರುವ ಹಲವಾರು ಪ್ರಯತ್ನಗಳು ನಡೆದಿವೆ ಎಂದು ಮಾಜಿ ಸಿ.ಎಂ. ಬಿಎಸ್‌ವೈ ಮತ್ತು ವಿಜಯೇಂದ್ರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಹೊಸ ಬಿಜೆಪಿ ಪಕ್ಷ ಕಟ್ಟೋಣ: ಅವರು ಏನಾದ್ರೂ ಅಂದುಕೊಳ್ಳಲಿ, ಪತ್ರಕರ್ತರು ಏನಾದ್ರೂ ಬರೆಯಲಿ ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹಳೆಬರನ್ನು ಬಿಟ್ಟು ಇದೀಗ ಹೊಸ ಬಿಜೆಪಿ ಪಕ್ಷ ಕಟ್ಟೋಣ, ಒರಿಜಿನಲ್ ಕಾರ್ಯಕರ್ತರ ಜತೆಗೆ ನಾವಿದ್ದೇವೆ. ಬಿಜೆಪಿಯ ಕೆಲ ಶಾಸಕರು ಇದ್ದಾರೆ, ಬೆಳಗ್ಗೆ ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಎಂದು ಹೇಳುತ್ತಾರೆ. ರಾತ್ರಿ ನೋಡಿದರೆ ಈಶ್ವರ್ ಖಂಡ್ರೆ, ಖರ್ಗೆ ಅವರ ಮನೆಗಳಲ್ಲಿ ಹೋಗಿ ಕೂಡುತ್ತಾರೆ ಎಂದು ತಮ್ಮದೇ ಬಿಜೆಪಿ ಶಾಸಕರ ವಿರುದ್ಧ ಹರಿಹಾಯ್ದರು.

ಡಿ.3,4ರಂದು ಕೇಂದ್ರಕ್ಕೆ ವರದಿ ಸಲ್ಲಿಕೆ: ಪಂಡಿತ್ ಜವಾಹರಲಾಲ್ ನೆಹರು ಅವರಿಂದ ಈ ದೇಶಕ್ಕೆ ಕೊಡುಗೆಯಾಗಿ ಬಂದಿರುವ ಅಸಂವಿಧಾನಿಕ ವಕ್ಫ್ ಬೋರ್ಡ್ ಈ ದೇಶದಿಂದಲೇ ಕಿತ್ತೊಗೆಯಬೇಕಾಗಿದೆ. ಇದಕ್ಕಾಗಿ ನಾವೆಲ್ಲರೂ ಸಂಘಟಿತರಾಗಿ ಇದರ ವಿರುದ್ಧ ಉಗ್ರ ಸ್ವರೂಪದ ಹೋರಾಟ ಮಾಡಬೇಕು. ವಕ್ಫ್ ಕಾಯ್ದೆ ತಿದ್ದುಪಡಿಯ ಅಗತ್ಯವಿದೆ. ಈ ಕೆಲಸ ಪ್ರಧಾನಿ ಮೋದಿ ಮಾಡುತ್ತಿದ್ದಾರೆ. ಡಿಸೆಂಬರ್ 3, 4ರಂದು ರಾಜ್ಯದ ವಕ್ಫ್ ಕುರಿತಾಗಿ ಸಮಗ್ರ ವರದಿ ಕೇಂದ್ರಕ್ಕೆ ಸಲ್ಲಿಸಲಿದ್ದೇವೆ ಎಂದರು. ಈ ಸಂದರ್ಭದಲ್ಲಿ ಮಾಶಾಳ ಶ್ರೀಗಳು, ಕಡಗಂಚಿ ಶ್ರೀಗಳು, ಮಕ್ತಂಪುರ ಶ್ರೀಗಳು ಸೇರಿದಂತೆ ಹಲವು ಶ್ರೀಗಳು ಜತೆಗಿದ್ದರು. ಪ್ರತಿಭಟನೆಯಲ್ಲಿ ಕೇಂದ್ರ ಮಾಜಿ ಸಚಿವ ಜಿ.ಎಂ ಸಿದ್ದೇಶ್ವರ, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಶಾಸಕರಾದ ರಮೇಶ್ ಜಾರಕಿಹೊಳಿ, ಬಿ.ಪಿ ಹರೀಶ್, ಎನ್.ಆರ್ ಸಂತೋಷ, ರಾಜಕುಮಾರ್ ಪಾಟೀಲ್ ತೇಲ್ಕೂರ್ ಭಾಗವಹಿಸಿದ್ದರು.

ವಕ್ಫ್ ಭೂಕಬಳಿಕೆ ವಿರುದ್ಧ ಜನಾಂದೋಲನ ಯಾತ್ರೆಯಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿದರು.

ಈ ದೇಶದಲ್ಲಿ ಸಂವಿಧಾನ ಉಳಿಸುವ ಕೆಲಸ ನಮ್ಮ ಪ್ರಧಾನಿ ಮೋದಿ ಮಾಡುತ್ತಿದ್ದಾರೆ. ಅದೇ ಸಂವಿಧಾನದ ದುರುಪಯೋಗವನ್ನು ಕಾಂಗ್ರೆಸ್ ಪಕ್ಷ ಮಾಡುತಿದ್ದು, ವಕ್ಫ್ ಬೋರ್ಡ್ ರದ್ದು ಮಾಡುವವರಿಗೂ ನಮ್ಮ ಹೋರಾಟ ನಡೆಯಲಿದೆ.

- ರಮೇಶ್ ಜಾರಕಿಹೊಳಿ, ಶಾಸಕ

ರಾಜ್ಯದಲ್ಲಿ ರೈತರ ಜಮೀನು, ಮಠಾಧೀಶರ ಆಸ್ತಿ, ಸರಕಾರಿ ಕಚೇರಿ, ಅಷ್ಟೇ ಅಲ್ಲದೇ, ಬೆಂಗಳೂರಿನ ವಿಧಾನಸೌಧ ಸಹ ವಕ್ಫ್ ಆಸ್ತಿ ಎಂದು ಹೇಳುತ್ತಿದೆ. ವಕ್ಫ್ ಹೆಸರಲ್ಲಿ ಮುಸ್ಲಿಂ ನಾಯಕರು ಆಸ್ತಿ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಬೀದರ್ ನಿಂದ ಚಾಮರಾಜನಗರ ನಗರದ ವರೆಗೂ ಹೋರಾಟ ನಡೆದಿವೆ. ಈಗ ಇದರ ವಿರುದ್ಧ ಯತ್ನಾಳ್ ನೇತೃತ್ವದ ಬಿಜೆಪಿ ಹೋರಾಟ ಮಾಡುತ್ತಿದೆ. ಕಲಂ 11 ರಿಂದ ವಕ್ಫ್ ಹೆಸರು ತೆಗೆಸುವುದೇ ನಮ್ಮ ಉದ್ದೇಶವಾಗಿದೆ.

-ಅರವಿಂದ್ ಲಿಂಬಾವಳಿ, ಮಾಜಿ ಸಚಿವ

ಹಿಂದೂಗಳು ಜಾಗೃತರಾಗಿ

ಮುಸ್ಲಿಂರು ಮನೆ ಸುಟ್ಟರು ಹಿಂದೂ ಮುಸ್ಲಿಂ ಬಾಯಿ ಭಾಯಿ ಅಂತ ಹೇಳುತ್ತಾರೆ. ಜಾಗೃತರಾಗಿ ಈಗ ಜಾಗೃತಿ ಆಗದಿದ್ದರೆ ಮುಂದೆ ಒಂದು ದಿನ ಆಪತ್ತು ಕಟ್ಟಿಟ್ಟಬುತ್ತಿ. ಮುಂದೆ ಹೋರಾಟ ಬಾಗಲಕೋಟೆಯಲ್ಲಿ ನಡೆಯಲಿದೆ. ಡಿ. 3 ಅಥವಾ 4ರಂದು ದೆಹಲಿಗೆ ಹೋಗಿ ಕೇಂದ್ರ ಕಮಿಟಿಗೆ ವಕ್ಫ್ ಬೋರ್ಡ್ ಕಬಳಿಸಿರುವ ಆಸ್ತಿಗಳ ಮಾಹಿತಿ ನೀಡಲಿದ್ದೇವೆ. ಅಸಂವಿಧಾನಿಕವಾದ ವಕ್ಫ್ ಕಾಯ್ದೆ ರದ್ದಾಗಬೇಕು ಎಂದು ಮನವಿ ಮಾಡಲಿದ್ದೇವೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ವಿಶ್ವವಾಣಿ ಕ್ಲಬ್ ಹೌಸ್



ಕಾರ್ನರ್
27.11.2024
ಸಂಜೆ: 06.55 ರಿಂದ 08.15 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ನಾಗರತ್ನ ಸಾಲಗಾಮೆ

ವಿಷಯ
ಮುಂಡಿಗೆಗಳು

vishwavani.news

ಖ್ಯಾತ ತಮಿಳು ನಟ ಸೂರ್ಯ ಮತ್ತು ಪತ್ನಿ ಜ್ಯೋತಿಕಾ ಕೊಲ್ಲೂರಿಗೆ ಭೇಟಿ ನೀಡಿ ಮೂಕಾಂಬಿಕಾ ದೇಗುಲದಲ್ಲಿ ವಿಶೇಷ ಚಂಡಿಕಾಯಾಗದಲ್ಲಿ ಭಾಗಿಯಾಗಿ, ದೇವರ ದರ್ಶನ ಪಡೆದರು.

ರಾಜ್ಯ ಸರಕಾರದ ಪೊಳ್ಳು ಭರವಸೆಗಳ ಬಗ್ಗೆ ನಂಬಬೇಡಿ: ಬಿಎಸ್‌ವೈ

ಬಿಜೆಪಿಯಲ್ಲಿ ಒಡಕು ಇರುವುದು ನಿಜ

ದಾವಣಗೆರೆ: ಬಿಜೆಪಿಯಲ್ಲಿ ಒಡಕು ಇರುವುದು ನಿಜ, ಸರಿಪಡಿಸಿ ಮುಂದಿನ ದಿನಗಳಲ್ಲಿ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರಕಾರ ಮಾಡ್ತೇವೆ ಎಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ದಾವಣಗೆರೆಗೆ ಬರುತ್ತೇನೆ. ಯಾರು ಮಾಜಿ ಶಾಸಕರಿದ್ದೀರಿ, ಅವರೆಲ್ಲ ಗೆದ್ದು ಮುಂದಿನ ಬಾರಿ ಬಿಜೆಪಿ ಸರಕಾರ ಅಧಿಕಾರಕ್ಕೆ ತರೋಣ ಎಂದು ಹೇಳಿದ್ದೇನೆ. ರಾಜ್ಯದಲ್ಲಿ ವಾತಾವರಣ ಚೆನ್ನಾಗಿದೆ. ರಾಜ್ಯ ಸುತ್ತಿ ಪಕ್ಷವನ್ನು ಬಲಪಡಿಸುವ ಕೆಲಸ ಮಾಡಬೇಕಾಗಿದೆ. ಈ ರಾಜ್ಯದ ಜನ ನಮ್ಮೊಂದಿಗೆ ಗಟ್ಟಿಯಾಗಿ ನಿಂತುಕೊಳ್ಳಬೇಕು. ಈ ಸರಕಾರದ ಪೊಳ್ಳು ಭರವಸೆಗಳನ್ನು ನಂಬದೇ, ಮೋದಿ ಅವರ ಬಿಜೆಪಿ ಪಕ್ಷದೊಂದಿಗೆ ಪ್ರತಿಯೊಬ್ಬರು ಕೈ ಬಲಪಡಿಸಬೇಕಾಗಿದೆ ಎಂದು ಜನರಲ್ಲಿ ಮನವಿ ಮಾಡಿದರು. ಭಿನ್ನಮತದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯಲ್ಲಿ ಒಡಕು ಇರುವುದು ನಿಜ, ಇದು ಕೇಂದ್ರದ ನಾಯಕರ ಗಮನಕ್ಕೂ ಬಂದಿದೆ. ಕೆಲವೇ ದಿನಗಳಲ್ಲಿ ಸರಿ ಹೋಗಲಿದೆ. ಒಟ್ಟಾಗಿ ಪಕ್ಷ ಕಟ್ಟುವ ಕೆಲಸ ಮಾಡ್ತೇವೆ. ಯಾರು ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡು ಈ ರೀತಿ ಕೆಲಸಗಳನ್ನು ಮಾಡುತ್ತಿದ್ದಾರೆ, ಅವರಲ್ಲಿ ವಿನಂತಿ ಮಾಡುವೆ. ಬನ್ನಿ ಚರ್ಚೆ ಮಾಡೋಣ. ಎಲ್ಲವನ್ನು ಸರಿಪಡಿಸೋಣ. ಏನಾದರೂ ಕೊರತೆಗಳಿದ್ದರೆ ಅವುಗಳನ್ನು ಸರಿಪಡಿಸಿಕೊಂಡು ಪಕ್ಷವನ್ನು ಬಲಪಡಿಸೋಣ ಎಂದು ಹೇಳಿದರು.

ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ತರಲು ಪ್ರಾಮಾಣಿಕ ಪ್ರಯತ್ನ

ಬಿಜೆಪಿ - ಜೆಡಿಎಸ್ ಎರಡು ಪಕ್ಷದವರು ಮುಂದಿನ ದಿನಗಳಲ್ಲಿ ಒಂದಾಗಿ ಹೋಗುತ್ತೇವೆ. ಒಟ್ಟಾಗಿ ಬಿಜೆಪಿ - ಜೆಡಿಎಸ್ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡ್ತೇವೆ. ಎಚ್. ಡಿ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರು ಇದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇಬ್ಬರು ಒಗ್ಗಟ್ಟಾಗಿ ಹೋಗುವುದರಿಂದ ಅಧಿಕಾರಕ್ಕೆ ಬರುವುದು ದೊಡ್ಡ ಮಾತಲ್ಲ, ಕಾಂಗ್ರೆಸ್‌ನವರು ಜೆಡಿಎಸ್ ಶಾಸಕರನ್ನು ಸೆಳೆಯುವ ಪ್ರಯತ್ನ ಫಲ ನೀಡುವುದಿಲ್ಲ, ಕೆಲವರು ಉದ್ದೇಶಪೂರ್ವಕವಾಗಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬಳ್ಳಾರಿ**

ಸಮಸ್ಯೆಯೇನು..?

- ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಪಟ್ಟಣದ 17ನೇ ವಾರ್ಡ್‌ನಲ್ಲಿ ಸ್ವಚ್ಛತೆ ಇಲ್ಲದಿರುವುದು.
- **ಇಲಾಖೆ:** ಪುರಸಭೆ
- **ಪರಿಹಾರ:** ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಪಟ್ಟಣದ 17ನೇ ವಾರ್ಡ್‌ನ ಆಶ್ರಯ ಕಾಲೋನಿಯಲ್ಲಿ ಬರುವ ಸರಕಾರಿ ಶಾಲೆಯ ಹತ್ತಿರ ಅಸ್ವಚ್ಛತೆಯ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಆ ಸ್ಥಳದಲ್ಲಿ ಇದ್ದ ತ್ಯಾಜ್ಯವಸ್ತುಗಳನ್ನು ವಿಲೇವಾರಿ ಮಾಡಲಾಗಿದೆ. ಸ್ವಚ್ಛತೆ ಕಾಪಾಡಿಕೊಳ್ಳಲು ಸುತ್ತಮುತ್ತಲಿನ ಸಾರ್ವಜನಿಕರಿಗೆ ಸೂಚಿಸಲಾಗಿದೆ.

ಗ್ಯಾರಂಟಿ ಯೋಜನೆಗಳು ನಿಲ್ಲಿಸದಿದ್ರೆ ಅನುದಾನ ಬರುವುದಿಲ್ಲ

2 ಗ್ಯಾರಂಟಿ ನಿಲ್ಲಿಸಲು ಮನವಿ

ಬಳ್ಳಾರಿ: ಎರಡು ಗ್ಯಾರಂಟಿಗಳನ್ನು ರದ್ದು ಮಾಡುವುದರಿಂದ ಅನುದಾನ ಸರಿಯಾಗುತ್ತೆ ಎಂದು ಕಾಂಗ್ರೆಸ್ ಶಾಸಕ ಎಚ್.ಆರ್. ಗವಿಯಪ್ಪ ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದಾರೆ. ಭೂಮಿಪೂಜೆ ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ಗ್ಯಾರಂಟಿಗಳಿಂದ ಆಶ್ರಯ ಮನೆ ಗಳು ಬರ್ತಿಲ್ಲ, ಬಸ್‌ನಲ್ಲಿ ಓಡಾಡೋದು ಸೇರಿ ದಂತೆ ಇನ್ನೆರಡು ಗ್ಯಾರಂಟಿಗಳು ಕಡಿಮೆ ಮಾಡೋಕೆ ಸಿಎಂಗೆ ಹೇಳ್ತೀವಿ. ಒಂದೆರಡು ಗ್ಯಾರಂಟಿಗಳು ತೆಗೆಯಿರಿ ಅಂತಾ ಸಿಎಂ ಸಿದ್ದರಾಮಯ್ಯ ಅವರಿಗೆ ಹೇಳ್ತೀವಿ. ಅವರೇನು ತೀರ್ಮಾನ ಮಾಡ್ತಾರೆ ನೋಡೋಣ ಎಂದು ಹೇಳಿಕೆ ಕೊಟ್ಟಿದ್ದಾರೆ.

ಗ್ಯಾರಂಟಿ ಯೋಜನೆ ರದ್ದು ಮಾಡುವುದಿಲ್ಲ

ಯಾದಗಿರಿ: ಗ್ಯಾರಂಟಿ ಯೋಜನೆ ರದ್ದು ಮಾಡುವ ಪ್ರಶ್ನೆಯೇ ಇಲ್ಲ. ನಾವು ಯಾವತ್ತಿಗೂ ರದ್ದು ಮಾಡುವತಂಹ ಕೆಲಸ ಮಾಡಲ್ಲ. ನುಡಿದಂತೆ ನಡೆದಿದ್ದೇವೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಗ್ಯಾರಂಟಿ ಯೋಜನೆಗಳ ಬಗ್ಗೆ ಕಾಂಗ್ರೆಸ್ ಶಾಸಕ ಗವಿಯಪ್ಪ ಅಪಸ್ವರ ವಿಚಾರವಾಗಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಜನರ ನಂಬಿಕೆಯನ್ನು ಮೊದಲಿಂದಲೂ ಉಳಿಸಿಕೊಂಡು ಬಂದಿದೆ. ಗ್ಯಾರಂಟಿ ರದ್ದು ಮಾಡುವ ವಿಚಾರ ಶಾಸಕರು ಹೇಳಬಹುದು ಆದರೆ, ಅಂತಿಮವಾಗಿ ಸರಕಾರ ನಿರ್ಧಾರ ಮಾಡುತ್ತದೆ . ನಮ್ಮ ಸಿಎಂ, ಅಧ್ಯಕ್ಷರು, ರಾಷ್ಟ್ರಾಧ್ಯಕ್ಷರು ಗ್ಯಾರಂಟಿ ರದ್ದು ಪ್ರಶ್ನೆಯೇ ಉದ್ಭವವಾಗಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಹಿಂದೆ ಸರಿದರೆ ತಪ್ಪಿತಸ್ಥರ ಸ್ಥಾನದಲ್ಲಿ ನಿಂತಾಗುತ್ತದೆ. ಹಾಗಾಗಿ ನಾವು ಯಾವತ್ತಿಗೂ ಅಂತಹ ಕೆಲಸ ಮಾಡಲ್ಲ ಎಂದರು.

ವಿಪಕ್ಷಗಳ ವಿರುದ್ಧ ಸಚಿವ ತಂಗಡಗಿ ಕಿಡಿ ಉಪ ಚುನಾವಣೆಯಲ್ಲಿ ತಕ್ಕ ಉತ್ತರ

ಬೆಳಗಾವಿ: ಮುಡಾ ಪ್ರಕರಣ ರಾಜಕೀಯ ಪ್ರೇರಿತವಾಗಿ ವಿಪಕ್ಷಗಳು ಆರೋಪ ಮಾಡುತ್ತಿವೆ. ಕಾಂಗ್ರೆಸ್ ಸರಕಾರದ ಅಭಿವೃದ್ಧಿ ಯೋಜನೆಗಳನ್ನು ಸಹಿಸಿಕೊಳ್ಳಲಾಗದೆ ಷಡ್ಯಂತ್ರ ನಡೆಸುತ್ತಿದ್ದು ನಾವು ರಾಜಕೀಯವಾಗಿ ಪ್ರತ್ಯುತ್ತರ ನೀಡುತ್ತೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವ ಬಿಜೆಪಿ ಹಾಗೂ ಜೆಡಿಎಸ್‌ಗೆ ಉಪ ಚುನಾವಣೆಯಲ್ಲಿ ಜನ ತಕ್ಕ ಉತ್ತರ ನೀಡಿದ್ದಾರೆ. ನಮ್ಮ ವಿರುದ್ಧ ಮಾಡಿರುವ ಆರೋಪಗಳಿಗೆ ಜನರೇ ಸೋಲಿನ ರುಚಿ ತೋರಿಸಿದ್ದಾರೆ. ಅವರು ಯಾವುದೇ ಪ್ರಕರಣ ದಾಖಲಿಸಲಿ, ರಾಜಕೀಯವಾಗಿಯೇ ಉತ್ತರ ನೀಡುತ್ತೇವೆ ಎಂದರು. ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ವಿಪಕ್ಷಗಳು ಉತ್ತರ ಕರ್ನಾಟಕ ಭಾಗದ ಸಮಸ್ಯೆ ಕುರಿತು ಚರ್ಚೆ ನಡೆಸಲಿ. ಕೇವಲ ಜಾತಿ, ಧರ್ಮ, ಮಸೀದಿ, ಮಂದಿರ ಕುರಿತು ಮಾತನಾಡುವ ಇವರು ಜನರ ಸಮಸ್ಯೆ ಕುರಿತು ಚರ್ಚೆ ನಡೆಸಲಿ ಎಂದರು.

ಮ್ಯೂಸಿಯಂ ಅಭಿವೃದ್ಧಿ

ಸಂಗೊಳ್ಳಿ ರಾಯಣ್ಣ ಅವರ ಪೂರ್ಣ ಪ್ರಮಾಣದ ಪರಿಚಯಕ್ಕೆ ಮ್ಯೂಸಿಯಂ ನಿರ್ಮಾಣ ಮಾಡಲಾಗುತ್ತಿದೆ. ಸಂಗೊಳ್ಳಿ ರಾಯಣ್ಣ ಅಧ್ಯಯನ ಕೇಂದ್ರ, ಗ್ರಂಥಾಲಯ ಸೇರಿದಂತೆ ಸಾಕಷ್ಟು ಅಭಿವೃದ್ದಿಗೆ ಯೋಜನೆ ರೂಪಿಸಲಾಗಿದೆ. ಡಿ.9 ರಂದು ಅಧಿವೇಶನ ಪ್ರಾರಂಭವಾಗಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಡಿಸೆಂಬರ್ ಅಂತ್ಯದೊಳಗೆ ಮ್ಯೂಸಿಯಂ ಉದ್ಘಾಟನೆ ಮಾಡಲಾಗುವುದು ಎಂದು ಸಚಿವ ತಂಗಡಗಿ ಹೇಳಿದರು.

ಜೆಡಿಎಸ್‌ನಿಂದ ಯಾರೂ ಕಾಂಗ್ರೆಸ್‌ಗೆ ಹೋಗಲ್ಲ

ಚಿಕ್ಕಬಳ್ಳಾಪುರ: 18 ಮಂದಿ ಜೆಡಿಎಸ್ ಶಾಸಕರ ಪೈಕಿ ಯಾರೊಬ್ಬರೂ ಕೂಡ ಕಾಂಗ್ರೆಸ್ ಸೇರುವುದಿಲ್ಲ ಎಂದು ಶಾಸಕ ರವಿಕುಮಾರ್ ಸ್ಪಷ್ಟಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 18 ಶಾಸಕರ ಪೈಕಿ ಯಾರೂ ಕೂಡ ಕಾಂಗ್ರೆಸ್‌ಗೆ ಹೋಗುವುದಿಲ್ಲ, ಪಕ್ಷದ ವಿರುದ್ಧವಾಗಿ ನಡೆದುಕೊಳ್ಳುವವರಿಲ್ಲ ಎಂದು ಸ್ಪಷ್ಟಪಡಿಸಿದರು. ಚನ್ನಪಟ್ಟಣದಲ್ಲಿ ಸಿಪಿ ಯೋಗೇಶ್ವರ್ ಕುತಂತ್ರದಿಂದ ಗೆಲುವು ಸಾಧಿಸಿದ್ದಾರೆ. ಎರಡು ಸಮುದಾಯ ಕಾಂಗ್ರೆಸ್ ಪರ ಇದ್ದ ಕಾರಣ ಕಾಂಗ್ರೆಸ್‌ಗೆ ಗೆಲುವಾಗಿದೆ. ಯೋಗೇಶ್ವರ್ ಯಾವ ಯಾವ ಸಮಯದಲ್ಲಿ ಎಲ್ಲಿ ಇದ್ದವರು, ಯಾವ ಯಾವ ಪಕ್ಷದಿಂದ ಪಕ್ಷಾಂತರ ಮಾಡಿ ಮಂತ್ರಿ ಆದರು ಅನ್ನೋದು ಗೊತ್ತಿದೆ. ಯೋಗೇಶ್ವರ್ ಹೇಳುವ ಹಾಗೆ ಜೆಡಿಎಸ್ ಅವನತಿ ಸಾಧ್ಯ ಇಲ್ಲ ಎಂದು ಕಿಡಿಕಾರಿದರು. ಇದು ದೇವೇಗೌಡರು ಕಟ್ಟಿರುವ ಜೆಡಿಎಸ್. ಲಕ್ಷಾಂತರ ಸ್ವಾಭಿಮಾನಿ ಮುಖಂಡರು, ಕಾರ್ಯಕರ್ತರು ಇರುವ ಪಕ್ಷ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಲಾಕಪ್‌ಡೆತ್ ಕೇಸ್ ಕೇರಳ ಸಿಎಂ ಅಂಗಳಕ್ಕೆ

ಉಡುಪಿ: ಬ್ರಹ್ಮಾವರ ಠಾಣೆಯ ಪೊಲೀಸರ ವಶದಲ್ಲಿದ್ದ ವೇಳೆ ಕೇರಳದ ಕೊಲ್ಲಂನ ಕೊಟ್ಟಾರಕರ ನಿವಾಸಿ ಬಿಜು ಯೋಹನ್ನಾನ್ (42) ಎಂಬುವವರು ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿ ಅವರ ಕುಟುಂಬದವರು ಕೇರಳ ಮುಖ್ಯಮಂತ್ರಿ ಮತ್ತು ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಲು ಸಿದ್ಧತೆ ನಡೆಸಿದ್ದಾರೆ. ಅಣ್ಣನ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕೇರಳ ಮುಖ್ಯಮಂತ್ರಿಗೆ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಲು ಸಿದ್ಧತೆ ನಡೆಸಿದ್ದೇವೆ. ಮರಣೋತ್ತರ ಪರೀಕ್ಷೆ ಮತ್ತು ವಿಧಿ ವಿಜ್ಞಾನ ಪರೀಕ್ಷೆಯ ವರದಿಗಳು ಇನ್ನೂ ನಮ್ಮ ಕೈಸೇರಿಲ್ಲ. ಅದು ಸಿಕ್ಕಿದ ಕೂಡಲೇ ದೂರು ನೀಡುತ್ತೇವೆ ಎಂದು ಬಿಜು ಅವರ ತಮ್ಮ ಬಿನು ಯೋಹನ್ನಾನ್ ತಿಳಿಸಿದರು. ಅಣ್ಣ ಶೌಚಾಲಯದಲ್ಲಿ ಕುಸಿದು ಬಿದ್ದು ಮೃತಪಟ್ಟಿರುವುದಾಗಿ ಪೊಲೀಸರು ನಮಗೆ ತಿಳಿಸಿದ್ದರು. ನಾವು ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುಮತಿ ಪಡೆದು ಮೃತದೇಹವನ್ನು ನೋಡಿದ್ದೆವು. ಮೊಣಕಾಲು ಮತ್ತು ತೊಡೆಯಲ್ಲಿ ಗಾಯದ ಗುರುತುಗಳಿದ್ದವು ಇದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ' ಎಂದರು.

ವಿರಾಮ
ಪ್ರತಿ ಭಾನುವಾರ

ಸಿಸೇರಿಯನ್ ದುರಂತ ಮೃತರ ಸಂಖ್ಯೆ 4ಕ್ಕೆ ಏರಿಕೆ

ಬಳ್ಳಾರಿ: ಜಿಲ್ಲಾಸ್ಪತ್ರೆಯಲ್ಲಿ ಸಿಸೇರಿಯನ್ ಮಾಡಿಸಿಕೊಂಡ ಬಳಿಕ ಮೂವರು ಬಾಣಂತಿಯರ ಸಾವು ಪ್ರಕರಣ ಮಾಸುವ ಮುನ್ನ ಇದೀಗ ಮತ್ತೊಬ್ಬ ಬಾಣಂತಿ ಮೃತಪಟ್ಟಿದ್ದಾರೆ. ಹೊಸಪೇಟೆ ಮೂಲದ ಮುಸ್ಕಾನ್ (22) ಸಾವನ್ನಪ್ಪಿದ್ದಾರೆ. ಈ ಮೂಲಕ 15 ದಿನಗಳ ಅಂತರದಲ್ಲಿ ಬಳ್ಳಾರಿಯಲ್ಲಿ ಬಾಣಂತಿಯರ ಸಾವಿನ ಸಂಖ್ಯೆ 4ಕ್ಕೆ ಏರಿಕೆಯಾಗಿದೆ. ಸೋಮವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ಮುಸ್ಕಾನ್ ಮೃತಪಟ್ಟಿದ್ದಾರೆ. ನ.10 ರಂದು ಮುಸ್ಕಾನ್ ಜಿಲ್ಲಾಸ್ಪತ್ರೆ ಯಲ್ಲಿ ಸಿಸೇರಿಯನ್ ಮಾಡಿಸಿಕೊಂಡಿದ್ದರು. ಸಿಸೇರಿಯನ್ ಬಳಿಕ ಮುಸ್ಕಾನ್ ಆರೋಗ್ಯದಲ್ಲಿ ಏಕಾಏಕಿ ಏರುಪೇರಾಗಿತ್ತು. ಬಳಿಕ 11 ರಂದು ಬಿಮ್ಸ್ (BIMS) ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಿಮ್ಸ್ ನಲ್ಲಿ ಒಂದು ದಿನ ಇದ್ದು ಚಿಕಿತ್ಸೆ ಪಡೆದಿದ್ದ ಮುಸ್ಕಾನ್, ಕಿಡ್ನಿ ಸಮಸ್ಯೆ ಹಿನ್ನೆಲೆಯಲ್ಲಿ ಡಯಾಲಿಸಿಸ್ ಮಾಡಿಸಲು ಕುಟುಂಬಸ್ಥರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಸತತ 15 ದಿನ ಚಿಕಿತ್ಸೆ ಪಡೆದರೂ ಮುಸ್ಕಾನ್ ಬದುಕಲಿಲ್ಲ. ಈ ಮೊದಲು ಲಲಿತಮ್ಮ, ನಂದಿನಿ, ರೋಜಾ ಸಾವನ್ನಪ್ಪಿದ್ದರು. ಇದೀಗ ಮತ್ತೊಬ್ಬ ಬಾಣಂತಿ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಮಂಗನ ಕಾಯಿಲೆಗೆ ಲಸಿಕೆ ಸಿದ್ಧ

ಸಾಗರ: ಸಿಎಸ್‌ಆರ್ ಅನುದಾನದಡಿ ಮುಂದಿನ ನವೆಂಬರ್ (2025) ವೇಳೆಗೆ ಮಂಗನ ಕಾಯಿಲೆ (ಕೆಎಫ್‌ಡಿ)ಗೆ ಲಸಿಕೆ (ವ್ಯಾಕ್ಸಿನ್) ಪ್ರಯೋಗ ಆಗುವ ಸಾಧ್ಯತೆಯಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಶ್ವಾಸ ವ್ಯಕ್ತಪಡಿಸಿದರು. ತಾಲೂಕಿನ ಮಂಗನ ಕಾಯಿಲೆ ಪೀಡಿತ ಅರಳಗೋಡು ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ ನಡೆದ ಸಮಾಲೋಚನಾ ಸಭೆಯಲ್ಲಿ ಮಾತನಾಡಿ, ಸಾಗರ, ಹೊಸನಗರ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳ ಭಾಗದಲ್ಲಿ ಕಾಯಿಲೆಯು ತೀವ್ರವಾಗಿ ಕಾಣಿಸುತ್ತಿದ್ದು, ಈ ಕಾಯಿಲೆಯಿಂದ ಯಾವುದೇ ವ್ಯಕ್ತಿ ಸಾಯ ಬಾರದು ಎಂಬ ಉದ್ದೇಶದಿಂದ ಐಸಿಎಂಆರ್ (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) ಜತೆ ಈಗಾಗಲೇ ಚರ್ಚೆ ನಡೆಸಿದ್ದು, ಹೈದರಾಬಾದಿನ ಸಂಸ್ಥೆಯೊಂದಿಗೆ ಮಾತುಕತೆ ನಡೆದಿದೆ ಎಂದರು.

ಕಲಬುರಗಿ ಕಾರಾಗೃಹದಲ್ಲಿ ಕೈದಿಗಳ ಪ್ರತಿಭಟನೆ

ಕಲಬುರಗಿ: ಇತ್ತೀಚಿಗೆ ಇಲ್ಲಿನ ಕಲಬುರಗಿ ಕೇಂದ್ರ ಕಾರಾಗೃಹವು ಒಂದಿಲ್ಲೊಂದು ವಿಚಾರದಲ್ಲಿ ರಾಜ್ಯದಲ್ಲಿ ಸುದ್ದಿಯಾಗುತ್ತಿದ್ದು, ಈಗ ಕೈದಿಗಳಿಗೆ ಕಳಪೆ ಗುಣಮಟ್ಟದ ಆಹಾರ ನೀಡಿದಲ್ಲದೇ, ಜೈಲು ಅಧೀಕ್ಷಕಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಕೈದಿಗಳು ಪ್ರತಿಭಟನೆ ನಡೆಸಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಕೈದಿಗಳು ಕಾರಾಗೃಹದ ವ್ಯವಸ್ಥೆ ಆಕ್ರೋಶ ವ್ಯಕ್ತಪಡಿಸಿ, ಬೆಳಗಿನ ಉಪಹಾರ ಸೇವಿಸದೆ ಪ್ರತಿಭಟನೆ ನಡೆಸಿ, ಕಾರಾಗೃಹ ಆಡಳಿತ ವಿರುದ್ಧ ಸಿಡಿದೆದ್ದಿದ್ದಾರೆ ಎಂದು ವರದಿಯಾಗಿದೆ. ಕೂಡಲೇ, ಸೆಂಟ್ರಲ್ ಜೈಲಿಗೆ ಕಾರಾಗೃಹ ಎಡಿಜಿಪಿ, ಜಿಲ್ಲಾಧಿಕಾರಿ, ನ್ಯಾಯಾಧೀಶರು ಆಗಮಿಸಿ ಸಮಸ್ಯೆ ಆಲಿಸಬೇಕು ಪಟ್ಟು ಹಿಡಿದು ಉಪವಾಸ ಕುಳಿತು ಪ್ರತಿಭಟನೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಕಾರಾಗೃಹದ ಮುಖ್ಯ ಅಧೀಕ್ಷಕಿ ಡಾ.ಅನಿತಾ ಮತ್ತು ಪಿಎ ಶ್ರೀಕಾಂತ್ ರಂಜೇರಿ ಅವರನ್ನು ಕೂಡಲೇ ವರ್ಗಾಯಿಸಬೇಕು ಎಂದು ಜಿಲ್ಲಾ ನ್ಯಾಯಾಧೀಶರಿಗೆ, ಹಲವು ಕೈದಿಗಳು ಸಹಿ ಹಾಕಿ ಬರೆದಿರುವ ಪತ್ರ, ಪ್ರತಿಭಟಿಸಿ ನಡೆಸಿದ್ದಾರೆ ಎನ್ನಲಾದ ಫೋಟೊ, ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಕೈದಿಗಳಿಗೆ ಕಿರುಕುಳ ಆರೋಪ: ಜೈಲಿನಲ್ಲಿ ಎಲ್ಲಾ ಕೈದಿಗಳಿಗೆ ಕಳಪೆ ಗುಣಮಟ್ಟದ ಆಹಾರ ಪೂರೈಕೆ ಮಾಡುತ್ತಿದ್ದಾರೆ. ಇಲ್ಲಿನ ಕೆಲವೊಂದು ಸಮಸ್ಯೆಗಳನ್ನು ಮುಖ್ಯ ಅಧೀಕ್ಷಕಿ ಬಳಿ ಹೇಳಲು ಹೋದರೆ, ಅವರು ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಪ್ರತಿಯೊಂದು ಸಮಸ್ಯೆಗಳಿಗೂ ಅವರ ಪಿ.ಎ.ಶ್ರೀಕಾಂತ ಅವರಿಂದ ಹಣ ಬೇಡಿಕೆ ಇಡುತ್ತಾರೆ. ಹಣ ಕೊಡದೆ ಹೋದರೆ ಬೇರೆ ಜೈಲಿಗೆ ಶಿಫ್ಟ್ ಮಾಡುತ್ತೇನೆ ಎಂದು ಬೆದರಿಕೆ ಹಾಕುತ್ತಾರೆ. ಲೈಂಗಿಕ ಆರೋಪ ಹೊರಿಸಿ ಎಫ್‌ಐಆರ್ ದಾಖಲಿಸಿ ಮತ್ತೊಂದು ಜೈಲಿಗೆ ವರ್ಗಾಯಿಸುತ್ತೇನೆ ಎಂದು ಧಮ್ಕಿ ಹಾಕುತ್ತಿದ್ದಾರೆ ಎಂದು ಪತ್ರದಲ್ಲಿ ಕೈದಿಗಳು ಉಲ್ಲೇಖಿಸಿದ್ದಾರೆ.

ಮಸ್ಕತ್‌ನಲ್ಲಿ ರಾಜ್ಯೋತ್ಸವ 29ಕ್ಕೆ



ಬೆಂಗಳೂರು: ಮಸ್ಕತ್‌ನ ಕನ್ನಡ ಸಂಘದ ವತಿಯಿಂದ ನ.29ರಂದು ಕನ್ನಡ ಉತ್ಸವ 2024 ಅನ್ನು ಹಮ್ಮಿಕೊಳ್ಳಲಾಗಿದೆ.

69ನೇ ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಮಸ್ಕತ್‌ನ ವಾದಿ ಕಬೀರ್‌ನಲ್ಲಿರುವ ಮಜನ್ ಹೈಟ್ಸ್‌ನಲ್ಲಿ ಕನ್ನಡ ಉತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಇವರೊಂದಿಗೆ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮನು ಬಳಿಗಾರ್, ಕಾರ್ಗಿಲ್ ಸಮರ ನಾಯಕ ಕ್ಯಾ. ನವೀನ್ ನಾಗಪ್ಪ ಭಾಗವಹಿಸಲಿದ್ದಾರೆ.

ಈ ವೇಳೆ ನೃತ್ಯಾಂಜಲಿ ಕಲಾ ನಿಕೇತನದ ವಿದುಷಿ ಡಾ. ಶೈಲಜಾ ಬಿ.ವಿ. ಹಾಗೂ ಮೆಗಾ ಮ್ಯಾಜಿಕ್ ಸ್ಟಾರ್ ಕುದ್ರೋಳಿ ಗಣೇಶ್ ಅವರಿಂದ 'ವಿಸ್ಮಯ ಜಾದೂ' ಕಾರ್ಯಕ್ರಮ ನೆರವೇರಲಿದೆ. ಕಾರ್ಯಕ್ರಮ ಬೆ.10 ಗಂಟೆಗೆ ಆರಂಭವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಧಿಕಾರಿಗಳಿಗೆ ನೇಣಿನ ಭಾಗ್ಯ, ಮುಳುಗುವ ಬೆಂಗಳೂರು ಸೃಷ್ಟಿ | ಸರಕಾರದ ವಿರುದ್ಧ ಆರ್.ಅಶೋಕ ಕಿಡಿ

ವಕ್ಫ್ ಭೂ ಕಬಳಿಕೆ, ರೇಷನ್ ಕಾರ್ಡ್ ರದ್ದು ಸದನದಲ್ಲಿ ಹೋರಾಟ

ಬೆಂಗಳೂರು: ಬೆಳಗಾವಿ ಚಳಿಗಾಲದ ಅಧಿ ವೇಶನದಲ್ಲಿ ರಾಜ್ಯ ಸರಕಾರದ ಅನ್ಯಾಯ ಗಳ ವಿರುದ್ಧ ತೀವ್ರ ಹೋರಾಟ ಮಾಡಲಾಗುವುದು. ಎಲ್ಲ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಶ್ನಿಸಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರದಿಂದ ಈ ಬಾರಿ ಎರಡು ವಾರ ಮಾತ್ರ ಅಧಿವೇಶನ ನಡೆಸಲಾಗುತ್ತಿದೆ. ಇನ್ನೂ ಹೆಚ್ಚು ದಿನ ಅಧಿವೇಶನ ನಡೆಸಲು ಕೇಳಲಾಗುವುದು. ವಕ್ಫ್ ಮಂಡಳಿಯಿಂದಾಗುತ್ತಿರುವ ಭೂ ಕಬಳಿಕೆ ಜ್ವಲಂತ ಸಮಸ್ಯೆಯಾಗಿದೆ. ಬಡವರ ರೇಷನ್ ಕಾರ್ಡ್ ರದ್ದು ಮಾಡಿ ಗ್ಯಾರಂಟಿಗಾಗಿ ಹಣ ಉಳಿಸಲಾಗುತ್ತಿದೆ. ಈ ಸಮಸ್ಯೆಯ ವಿರುದ್ಧ ಅಧಿವೇಶನದಲ್ಲಿ ಹೋರಾಟ ಮಾಡಲಾಗುವುದು. ಅಬಕಾರಿ ಇಲಾಖೆಯ ಹಗರಣ, ಬೆಳೆನಾಶಕ್ಕೆ ಪರಿಹಾರ ಮೊದಲಾದ ಸಮಸ್ಯೆಯ ವಿರುದ್ಧವೂ ಹೋರಾಟ ಮಾಡಲಾಗುವುದು ಎಂದರು.

ಇದೊಂದು ರೀತಿ ಗುರುವಾರದ ಸರಕಾರ. ಕೇವಲ ಒಂದು ದಿನ ಮಾತ್ರ ಇಲ್ಲಿ ಸಚಿವರು, ಅಧಿಕಾರಿಗಳು ಸಭೆ ಮಾಡುತ್ತಾರೆ. ಉತ್ತರ ಕರ್ನಾಟಕದ ಜಿಲ್ಲೆಗಳ ಸಮಸ್ಯೆ ಬಗ್ಗೆ ಚರ್ಚಿಸಲು ನಾನು ಸಭೆ ನಡೆಸಲಿದ್ದೇನೆ. ಈ ಹಿಂದೆ ಕಲ್ಯಾಣ ಕರ್ನಾಟಕ ಕುರಿತು ಸರಕಾರದಿಂದ ಸಭೆ ನಡೆದಿದೆ. ಆ ಬಳಿಕ ಯಾವುದೇ ಸುದ್ದಿ ಇಲ್ಲ. ಬ್ರ್ಯಾಂಡ್ ಬೆಂಗಳೂರು ಎಂದು ಹೇಳಿ, ಮಳೆ ಬಂದು ಮುಳುಗುವ ಬೆಂಗಳೂರು ಸೃಷ್ಟಿಯಾಗಿದೆ. ಮಳೆಯಿಂದಾಗಿ ರಸ್ತೆ ಗುಂಡಿ ಉಂಟಾಗಿ ವಾಹನ ಚಾಲಕರಿಗೆ ಬೆನ್ನು ನೋವು ಉಂಟಾಗಿದೆ. ಜಯನಗರ ಶಾಸಕರು ಸೇರಿದಂತೆ ಅನೇಕ ಶಾಸಕರಿಗೆ ಅನುದಾನ ಕಡಿತವಾಗಿದೆ. ಹೀಗೆ ಮೊದಲಾದ ವಿಷಯಗಳ ಬಗ್ಗೆ ಪ್ರಶ್ನಿಸಲಾಗುವುದು ಎಂದು ತಿಳಿಸಿದರು. ರಾಜ್ಯದಲ್ಲಿ ಅಧಿಕಾರಿಗಳಿಗೆ ನೇಣಿನ ಭಾಗ್ಯ ನೀಡಲಾಗಿದೆ. ಅಧಿಕಾರಿಗಳು ಒಂದೋ ವರ್ಗಾವಣೆಯಾಗಬೇಕು ಅಥವಾ ನೇಣು ಹಾಕಿಕೊಳ್ಳಬೇಕು ಎಂಬ ಸ್ಥಿತಿ ಇದೆ ಎಂದರು.

ರಾಜ್ಯದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಹೋಗಿದ್ದು, ಸಿಎಂ ಸಿದ್ದರಾಮಯ್ಯನವರಿಂದ ಸರಕಾರ ಪಾಪರ್ ಆಗಿದೆ. ಒಂದೂವರೆ ವರ್ಷದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ನಡೆದಿಲ್ಲ. ವಿರೋಧ ಪಕ್ಷದಲ್ಲಿ ಕಾಂಗ್ರೆಸ್ ಇದ್ದಾಗ ಕೋವಿಡ್ ಹಗರಣ ಇರುವ ಬಗ್ಗೆ ಮಾತನಾಡಲಿಲ್ಲ. ಈಗ ಮಾತ್ರ ಆ ಬಗ್ಗೆ ಮಾತನಾಡುತ್ತಿದೆ. ನಮ್ಮ ಅವಧಿ ಹಾಗೂ ಈಗಿನ 16 ತಿಂಗಳ ಅವಧಿಯ ಆಡಳಿತದ ಎಲ್ಲವನ್ನೂ ಸಿಬಿಐಗೆ ವಹಿಸಲಿ. ನಾವು ತನಿಖೆಗೆ ತಯಾರಿದ್ದೇವೆ.

-ಆರ್.ಅಶೋಕ,
ಪ್ರತಿಪಕ್ಷ ನಾಯಕ

ವಿಶ್ವವಾಣಿ

ಸಂಪಾದಕೀಯ

ಮೊದಲ ದಿನವೇ ಮುಂದೂಡಿಕೆ!

ಲೋಕಸಭೆಯಲ್ಲಿ ವಿವಿಧ ವಿಷಯಗಳ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ಕೋಲಾಹಲವೆಬ್ಬಿಸಿದ ಹಿನ್ನೆಲೆಯಲ್ಲಿ, ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರವು ನಿಜಾರ್ಥದಲ್ಲಿ 'ಶೂನ್ಯ ಸಂಪಾದನೆ' ಹಣೆಪಟ್ಟಿಯನ್ನು ಲಗತ್ತಿಸಿಕೊಳ್ಳು ವಂತಾಯಿತು. ಉತ್ತರ ಪ್ರದೇಶದ ಸಂಭಲ್‌ನಲ್ಲಿ ನಡೆದ ಹಿಂಸಾಚಾರವನ್ನು ಖಂಡಿಸಿ ವಿಪಕ್ಷ ಸದಸ್ಯರು ಘೋಷಣೆ ಕೂಗಿದ್ದು ಸಾಲದೆಂಬಂತೆ, ಉದ್ಯಮಿ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರು ವುದರ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿ ಹುಯಿಲೆಬ್ಬಿಸಿದ್ದಕ್ಕೆ ಅಧಿವೇಶನವು ಬುಧವಾರಕ್ಕೆ ಮುಂದೂಡಲ್ಪಟ್ಟಿದ್ದು ಇದಕ್ಕೆ ಕಾರಣ. ಸರಕಾರಕ್ಕೆ ಎದುರಾಗಿ ಸಮರ್ಥ ವಿಪಕ್ಷ ಇರಬೇಕಾದ್ದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಅಗತ್ಯಗಳಲ್ಲೊಂದು. ಆದರೆ, ಇಂಥ ಸಜ್ಜಿಕೆಯೇ ಮಗ್ಗುಲು ಮುಳ್ಳಿನಂತೆ ಚುಚ್ಚಿದರೆ ಯಾರನ್ನು ದೂರುವುದು? ಚಳಿಗಾಲದ ಅಧಿ ವೇಶನವು ಸಾಕಷ್ಟು ದಿನಗಳವರೆಗೆ ನಡೆಯುವಂಥದ್ದಾಗಿರುವುದರಿಂದ, ತರುವಾಯದ ಯಾವುದಾದರೊಂದು ದಿನದಲ್ಲಿ ಪ್ರಸ್ತಾವಿತ ವಿಷಯದ ಚರ್ಚೆಗೆ ವಿಪಕ್ಷಗಳು ಆಗ್ರಹಿಸಬಹುದಾಗಿತ್ತು; ಆದರೆ 'ಒತ್ತಡಹೇರುವ ತಂತ್ರ'ವೇ ಪ್ರಧಾನವಾದಾಗ ಇಂಥ ಎಲ್ಲ ಆಶಯಗಳೂ ಮೂಲೆಗುಂಪಾಗಿ ಬಿಡುವುದು ವಿಷಾದನೀಯ. ಶಾಸನಸಭೆಗಳ ಒಂದೊಂದು ದಿನದ ಕಲಾಪಕ್ಕೂ ವೆಚ್ಚವಾಗುವ ಮೊತ್ತ ಗಣನೀಯ ಪ್ರಮಾಣದಲ್ಲಿರುತ್ತದೆ. ಅದು ಪ್ರಜೆಗಳು ಭರಿಸಿದ ತೆರಿಗೆ ದುಡ್ಡಿನಿಂದ ವಿನಿ ಯೋಗವಾಗುವಂಥದ್ದು. ಅನಪೇಕ್ಷಿತ ಕಾರಣಗಾಗಿ ಒಂದು ದಿನದ ಕಲಾಪ ಹಾಳಾದರೆ ಅಥವಾ ಮುಂದೂಡಲ್ಪಟ್ಟರೆ, ಅದು ಹಣ, ಶ್ರಮ ಮತ್ತು ಸಮಯ ವ್ಯರ್ಥವಾಗುವುದಕ್ಕೆ ಹೇತು ವಾಗುತ್ತದೆ. ಜನಪ್ರತಿನಿಧಿಗಳು ಎನಿಸಿಕೊಂಡವರಿಗೆ ಇದನ್ನು ಹೊಸದಾಗಿ ಮನವರಿಕೆ ಮಾಡಿಕೊಡಬೇಕಾದ ಅಗತ್ಯವಿಲ್ಲ; ಇಷ್ಟಾಗಿಯೂ ಅನಗತ್ಯವಾಗಿ ಹುಯಿಲೆಬ್ಬಿಸುವ ಹೆಜ್ಜೆಯನ್ನು ಇಟ್ಟಿದ್ದೇಕೆ ಎಂಬುದನ್ನು ಅವರೇ ಸ್ಪಷ್ಟೀಕರಿಸಬೇಕು. ವಿಪಕ್ಷಗಳ ಸದಸ್ಯರ ಈ ವರ್ತನೆಯನ್ನು ಕಂಡ ಪ್ರಧಾನಿ ಮೋದಿಯವರು, 'ಪ್ರಜಾಪ್ರಭುತ್ವವನ್ನು ಗೌರವಿಸದ, ಜನರ ಆಶೋತ್ತರ ಗಳ ಮಹತ್ವವನ್ನು ಅರಿತಿಲ್ಲದ ಇವರಿಗೆ ಜನಸೇವೆಯ ವಿಷಯದಲ್ಲಿ ಯಾವುದೇ ಜವಾಬ್ದಾರಿಯಿಲ್ಲ' ಎಂದಿರುವುದು ಸರಿಯಾಗೇ ಇದೆ!

ಸೊಂಪಾದಕೀಯ

ಸಿಗ್ನಲ್ಲೋಂಘನಕ್ಕೆ ಕಡಿವಾಣ

ದೊಡ್ಡ ಸಿಟಿಗಳ ಸಮಸ್ಯೆ ಎಂದ ತಕ್ಷಣ ಮೊಟ್ಟ ಮೊದಲು ಎಲ್ಲರಿಗೂ ನೆನಪಾಗೋದು ಟ್ರಾಫಿಕ್ ಸಮಸ್ಯೆ. ಇದು ದೇಶದ ಎಲ್ಲಾ ಮಹಾನಗರಗಳ ಗೋಳು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಈಗ ಟ್ರಾಫಿಕ್ ಸಮಸ್ಯೆ ಚಿರಪರಿಚಿತ. ಇದನ್ನು ಬಗೆಹರಿಸಲು ಸರಕಾರ ಮತ್ತು ಪೊಲೀಸ್ ಇಲಾಖೆ ಎಷ್ಟೇ ಹೊಸ ಹೊಸ ನೀತಿಗಳನ್ನು ಅನುಸರಿಸಿದರೂ ರಸ್ತೆಗಳಲ್ಲಿ ವಾಹನಗಳ ಓಡಾಟ ಸುಗಮ ಆಗಿಲ್ಲ. ಬೆಂಗಳೂರಿನಂಥ ದೊಡ್ಡ ನಗರಗಳಲ್ಲಂತೂ ಇಲ್ಲಿಂದ ಫ್ಲೈಟ್‌ನಲ್ಲಿ ಮುಂಬೈ, ಚೆನ್ನೈಗೆ ಹೊರಟವರು ಅಲ್ಲಿಗೆ ಹೋಗಿ ಮುಟ್ಟಿದರೂ, ಅವರನ್ನು ಏರ್‌ಪೋರ್ಟ್‌ಗೆ ತಲುಪಿಸಿ ಬಂದವರು ಬೆಂಗಳೂರಿನಲ್ಲಿ ಇನ್ನೂ ಮನೆ ಸೇರಿರೋದಿಲ್ಲ. ಇಂಥ ಕುಖ್ಯಾತ ಟ್ರಾಫಿಕ್ ಸಮಸ್ಯೆಗೆ ಪೊಲೀಸ್ ಇಲಾಖೆ ಇನ್ನೊಂದು ಹೊಸ ತಂತ್ರಜ್ಞಾನ ಅಳವಡಿಸುತ್ತಿದೆ. ಅದು ಡ್ರೋನ್ ಕಂಟ್ರೋಲ್. ಹೌದು, ಬೆಂಗಳೂರು ಮಹಾನಗರದಲ್ಲಿ ಈಗ ಒಟ್ಟು ಎಂಟು ಸಿಗ್ನಲ್‌ಗಳಲ್ಲಿ ಈ ಡ್ರೋನ್‌ಗಳು ಬೆಂಗಳೂರಿನ ಟ್ರಾಫಿಕ್ ಮೇಲೆ ತಮ್ಮ ಹದ್ದಿನ ಕಣ್ಣಿಡಲಿವೆ. ಇವು ದೂರದವರೆಗೂ ಇರೋ ವಾಹನ ದಟ್ಟಣೆಯನ್ನು ನೋಡಿ ಸಿಗ್ನಲ್‌ಗಳಲ್ಲಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತವೆ ಅನ್ನೋದು ಪೊಲೀಸರ ಭರವಸೆ. ಸಿಗ್ನಲ್‌ಗಳ ಪಕ್ಕದ ಮೈದಾನ ಅಥವಾ ಬಯಲು ಪ್ರದೇಶಗಳಲ್ಲಿ ನಿಂತು ಪೊಲೀಸ್ ಪೇದೆಗಳು ಈ ಡ್ರೋನ್ ಹಾರಿಸುತ್ತಾರಂತೆ. ಅವರಿಂದ ಮಾಹಿತಿ ಪಡೆದು ಸಿಗ್ನಲ್‌ನಲ್ಲಿ ಇರೋ ಪೊಲೀಸರು ಸಂಚಾರ ವ್ಯವಸ್ಥೆಯನ್ನು ಕಂಟ್ರೋಲ್ ಮಾಡ್ತಾರೆ ಅನ್ನೋದು ಈ ಯೋಜನೆಯ ವಿವರ. ಈ ಡ್ರೋನ್ ಯೋಜನೆಯಿಂದ ಟ್ರಾಫಿಕ್ ಎಷ್ಟರ ಮಟ್ಟಿಗೆ ಕಂಟ್ರೋಲ್ ಆಗುತ್ತೋ ಗೊತ್ತಿಲ್ಲ. ಆದರೆ, ಇದನ್ನು ಟ್ರಾಫಿಕ್ ಕಂಟ್ರೋಲ್‌ಗಿಂತ ದಂಡ ವಸೂಲಿಗಾಗಿಯೇ ಮಾಡಲಾಗಿದೆ ಅನ್ನೋದು ಬೆಂಗಳೂರಿನ ಜನರ ಗುಮಾನಿ. ಯಾಕಂದ್ರೆ, ಪೊಲೀಸರು ಎಷ್ಟೇ ಅಡಗು ಕಾರ್ಯಾಚರಣೆ ಮಾಡಿದರೂ, ಅವರ ಹದ್ದಿನ ಕಣ್ಣು ತಪ್ಪಿಸಿಕೊಂಡು ಸಂಚಾರ ನಿಯಮ ಉಲ್ಲಂಘನೆ ಮಾಡುವವರು ಉಂಟು. ಇಂಥವರನ್ನು ಮಟ್ಟ ಹಾಕಲು ಈ ಡ್ರೋನ್‌ಗಳನ್ನು ಬಳಸಲಾಗುತ್ತಿದೆ ಅನ್ನೋದು ಬಹುತೇಕರ ಅನಿಸಿಕೆ.

ಸಂಪಾದಕರ ಸದ್ಯಶೋಧನೆ

ಜಪಾನ್ ಮತ್ತು ಬುಲೆಟ್ ಟ್ರೇನ್

ಜಪಾನಿಗೆ ಹೋಗುವ ಮುನ್ನ ಅಲ್ಲಿನ ಬುಲೆಟ್ ಟ್ರೇನಿನ (ಶಿಂಕನ್ಸೆನ್) ಬಗ್ಗೆ ನಾನು ಸಾಕಷ್ಟು ಓದಿದ್ದರಿಂದ, ಕೇಳಿದ್ದರಿಂದ ಸಹಜವಾಗಿ ಅದರ ಬಗ್ಗೆ ತೀವ್ರ ಆಸಕ್ತಿಯಿತ್ತು. ಅಂದು ನಾವು ಕ್ಯೋಟೋದಿಂದ ಜಪಾನ್ ರಾಜಧಾನಿ ಟೋಕಿಯೋಕ್ಕೆ ಹೊರಟಿದ್ದೆವು. ಬುಲೆಟ್ ಟ್ರೇನು ಬೆಳಗ್ಗೆ ಹತ್ತು ಗಂಟೆ ಒಂದು ನಿಮಿಷಕ್ಕೆ ಬರುವುದೆಂದು ಟಿಕೆಟ್ ಮೇಲೆ ಬರೆದಿತ್ತು. ನಾವು ಸುಮಾರು 20 ನಿಮಿಷ ಮುಂಚಿತವಾಗಿಯೇ ಆಗಮಿಸಿದ್ದೆವು. 10 ಗಂಟೆ ಆಗುವುದನ್ನೇ ಕಾಯುತ್ತಿದ್ದೆ. ಟ್ರೇನು ಬರುವ ದಾರಿಯನ್ನು ಕುತೂಹಲದಿಂದ ಗಮನಿಸುತ್ತಿದ್ದೆ. ನಾವು ಏರಬೇಕಾದ ಬೋಗಿ ಮತ್ತು ಕುಳಿತುಕೊಳ್ಳಬೇಕಾದ ಆಸನ ಟಿಕೆಟ್ ಮೇಲೆ ನಮೂದಾಗಿತ್ತು. ಯಾವ ಸಂಖ್ಯೆಯ ಬೋಗಿ ಎಲ್ಲಿ ನಿಲ್ಲುತ್ತದೆ ಎಂಬ ಬಗ್ಗೆ ಗೊಂದಲವಿರಲಿಲ್ಲ. 10 ಗಂಟೆಯಾಗುತ್ತಿದ್ದಂತೆ, ನನ್ನ ಮುಂದಿನ ಎಣಿಕೆಗಳು ಸೆಕೆಂಡುಗಳಲ್ಲಿ ಆರಂಭವಾದವು. 10 ಗಂಟೆ ಮೇಲೆ ಒಂದು ನಿಮಿಷವಾಗಲು ಇನ್ನೂ 5 ಸೆಕೆಂಡುಗಳಿರುವಾಗ, ಟ್ರೇನು ಬಂದೇ ಬಿಟ್ಟಿತು. ಅದು ನಿಲ್ದಾಣದಲ್ಲಿ ಬಂದು ನಿಂತು ಉಸಿರು ಬಿಟ್ಟಾಗ ಸರಿಯಾಗಿ ಹತ್ತು ಗಂಟೆ ಒಂದು ನಿಮಿಷವಾಗಿತ್ತು. ಇಷ್ಟು ಕರಾರುವಾಕ್ಕಾಗಿ ಸಮಯ ಪಾಲಿಸಲು ಆ 'ಕಾಲ'ನಿಗೆ ಮಾತ್ರ ಸಾಧ್ಯವೇನೋ? ಬುಲೆಟ್ ಟ್ರೇನ್ ಕೆಲವೊಮ್ಮೆ ಬೇರೆ ಬೇರೆ ಕಾರಣಗಳಿಂದ ತಡವಾಗಿ ಆಗಮಿಸುವುದುಂಟು. ಆದರೆ ಇಲ್ಲಿಯ ತನಕ ಅವುಗಳ ವಾರ್ಷಿಕ ಸರಾಸರಿ ವಿಳಂಬ ಒಂದು ನಿಮಿಷಕ್ಕಿಂತ ಕಡಿಮೆ (ನಿಖರವಾಗಿ ಹೇಳುವುದಾದರೆ, 20 ಸೆಕೆಂಡು. ಬುಲೆಟ್ ಟ್ರೇನ್ ಹೊರತುಪಡಿಸಿ ಉಳಿದ ಟ್ರೇನುಗಳ ಸರಾಸರಿ ವಿಳಂಬ 50 ಸೆಕೆಂಡು. ಒಟ್ಟಾರೆ ವಿಳಂಬ ಅವಧಿ ಒಂದು ನಿಮಿಷಕ್ಕಿಂತ ಕಮ್ಮಿ) ಅವಧಿ ಎಂಬುದು ಗಮನಾರ್ಹ. ವರ್ಷದಿಂದ ವರ್ಷಕ್ಕೆ ಈ ವಿಳಂಬ ಅವಧಿ ಕಮ್ಮಿ ಆಗುತ್ತಿದೆ. ಇದಕ್ಕೆ ಬುಲೆಟ್ ಟ್ರೇನ್‌ನಲ್ಲಿ ಅಳವಡಿಸಿರುವ ಆಧುನಿಕ ತಂತ್ರಜ್ಞಾನವೊಂದೇ ಅಲ್ಲ, ಜಪಾನಿಯರ ಜೀವನ ವಿಧಾನ, ಸಮಯಪಾಲನೆಗೆ ನೀಡುವ ಮಹತ್ವವೂ ಕಾರಣ. ಜಪಾನಿಯರ ಸಂಸ್ಕೃತಿಯಲ್ಲಿ ಮೆರಿಟ್‌ಗೆ ಎಲ್ಲಿಲ್ಲದ ಪ್ರಾಮುಖ್ಯ. ಮೆರಿಟ್ ಮುಂದೆ ಉಳಿದ ಗುಣಗಳೆಲ್ಲವೂ ಗೌಣ. ಪ್ರತಿಯೊಬ್ಬನೂ ವ್ಯವಸ್ಥೆಗೆ ಉತ್ತರದಾಯಿ ಮತ್ತು ಸಾಂಘಿಕವಾಗಿ ವ್ಯವಸ್ಥೆಗೆ ಅಥವಾ ದೇಶಕ್ಕೆ ಹೊಣೆಗಾರ. ಹೀಗಾಗಿ ತಪ್ಪನ್ನು ಬೇರೆಯವರ ಮೇಲೆ ಹೊರಿಸುವ ಪರಿಪಾಠ ಅವರಲ್ಲಿಲ್ಲ. ಸುವ್ಯವಸ್ಥೆ ಮತ್ತು ಶಿಸ್ತು ಜಪಾನಿಯರ ಸಂಸ್ಕೃತಿಯ ಭಾಗವಾಗಿದೆ. ಅವರು ಆಗಾಗ ಭೂಕಂಪಗಳಿಗೆ ಗುರಿಯಾಗುವ, ಜನನಿಬಿಡ ಪ್ರದೇಶಗಳಲ್ಲಿ ವಾಸಿಸಿದರೂ, ತಮ್ಮ ರಕ್ತಗುಣವಾದ ದಕ್ಷತೆಯನ್ನು ಮರೆಯುವುದಿಲ್ಲ. ಬುಲೆಟ್ ಟ್ರೇನ್ ವ್ಯವಸ್ಥೆಯಲ್ಲಿ ಎದ್ದು ಕಾಣುವ ಸಂಗತಿಗಳೆಂದರೆ, ಸಮಯಪಾಲನೆ, ದಕ್ಷತೆ, ಸುರಕ್ಷತೆ ಮತ್ತು ವಿಶ್ವಾಸಾರ್ಹತೆ. ಬುಲೆಟ್ ಟ್ರೇನ್ ವ್ಯವಸ್ಥೆ ಹೆಚ್ಚು ತಂತ್ರಜ್ಞಾನವನ್ನೇ ಆಧರಿಸಿದ್ದರೂ, ಅದನ್ನು ನಿರ್ವಹಿಸಲು ಮನುಷ್ಯರೇ ಬೇಕು ತಾನೇ? ಕಟ್ಟುನಿಟ್ಟಾದ, ಶಿಸ್ತಿನ ಸಿಬ್ಬಂದಿಯ ಪಾತ್ರವೂ ದೊಡ್ಡದು. ಎಲ್ಲ ಹೈ-ಸ್ಪೀಡ್ ರೈಲು ಚಾಲಕರು ನಿಗದಿತ ಆಗಮನದ ಸಮಯದಿಂದ 5 ಸೆಕೆಂಡುಗಳಲ್ಲಿ ತಮ್ಮ ಗಮ್ಯಸ್ಥಾನ ತಲುಪಲು ಮತ್ತು ನಿಗದಿತ ನಿಲುಗಡೆ ಸ್ಥಾನದಿಂದ ಒಂದು ಮೀಟರ್ ಒಳಗೆ ರೈಲನ್ನು ನಿಲ್ಲಿಸಲು ಸಮರ್ಥರಾಗಿದ್ದಾರೆ. ಈ ಚಾಲಕರು ಅಂಥ ನಿಖರತೆಯಿಂದ ಓಡಿಸುವ ರೈಲುಗಳು 2ರಿಂದ 12 ಬೋಗಿಗಳನ್ನು ಹೊಂದಿರುತ್ತವೆ. ನಾವು ಏರಿದ ನಿಲ್ದಾಣದಲ್ಲಿ ಬುಲೆಟ್ ಟ್ರೇನು 3 ನಿಮಿಷ ನಿಂತಿರಬಹುದು. ಟ್ರೇನಿನಲ್ಲಿ ಆಸೀನರಾಗಿ 10 ನಿಮಿಷಕ್ಕೆ ಟಿಕೆಟ್ ಕಲೆಕ್ಟರ್ ಬಂದು ಟಿಕೆಟ್ ಪರಿಶೀಲಿಸಿದ. ಟ್ರೇನಿನಲ್ಲಿ ವೈಫೈ ಉಚಿತ. ಯಾರೂ ಹೆಚ್ಚಾಗಿ ಮಾತಾಡುವುದಿಲ್ಲ, ಪರಸ್ಪರರ ಏಕಾಂತವನ್ನು ಭಂಗಗೊಳಿಸುವುದಿಲ್ಲ, ಮೊಬೈಲಿನಲ್ಲಿ ಏರಿದ ಧ್ವನಿಯಲ್ಲಿ ಮಾತಾಡುವುದಿಲ್ಲ, ಮನೆಯಿಂದ ಕಟ್ಟಿಕೊಂಡು ತಂದ ತಿಂಡಿ ಪೊಟ್ಟಣಗಳನ್ನು ಬೋಗಿಯಲ್ಲಿ ಹರಡಿಕೊಂಡು ತಿನ್ನುವುದಿಲ್ಲ. ಬುಲೆಟ್ ಟ್ರೇನ್ ಗಂಟೆಗೆ 300 ಕಿ.ಮೀ. ವೇಗದಲ್ಲಿ ಗಾಳಿಯನ್ನು ಸೀಳಿಕೊಂಡು ಮುನ್ನುಗ್ಗುತ್ತಿದ್ದರೆ, ಅದರ ಸದ್ದು ಒಳಗೆ ಕುಳಿತವರಿಗೆ ಕೇಳಿಸುವುದಿಲ್ಲ, ಎಲ್ಲೋ ದೂರದಲ್ಲಿ ಗಾಳಿ ಬೀಸಿದ ಸಪ್ಪಳ. ಬೋಗಿಯೊಳಗೆ ತರೇಹವಾರಿ ಪದಾರ್ಥಗಳನ್ನು ಮಾರುವವರ ಕಿರಿಕಿರಿಯಿಲ್ಲ. ಅಕ್ಕ-ಪಕ್ಕದ ಊರುಗಳು ಮನಸ್ಸಿನಲ್ಲಿ ದಾಖಲಾಗದಷ್ಟು ವೇಗದಲ್ಲಿ ಬುಲೆಟ್ ಟ್ರೇನ್ ವೇಗವಾಗಿ ಚಲಿಸುತ್ತಿರುತ್ತದೆ. ಬುಲೆಟ್ ಟ್ರೇನನ್ನು ಬಿಟ್ಟು ಜಪಾನನ್ನು ಊಹಿಸಲು ಸಾಧ್ಯವಿಲ್ಲ. ಅಕ್ಷರಮಟ್ಟಿಗೆ ಅದು ಅಲ್ಲಿನ ಜನಜೀವನ ಮತ್ತು ಜನಮಾನಸದೊಂದಿಗೆ ಬೆರೆತುಕೊಂಡಿದೆ, ಬೆಸೆದುಕೊಂಡಿದೆ.

ಎರಡು ಅಲಗಿನ ಖಡ್ಗ ಫೀನಾಲ್!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಆಧುನಿಕ ಶಸ್ತ್ರವೈದ್ಯಕೀಯವು ಇದು ಯಶಸ್ವಿಯಾಗುತ್ತಿರಲು ಮುಖ್ಯ ಕಾರಣಗಳೆಂದರೆ ಅರಿವಳಿಕೆಯ ತಂತ್ರಜ್ಞಾನದಲ್ಲಿ ನಡೆದ ಸುಧಾರಣೆಗಳು, ನಂಜುರೋಧಕ ವಿಜ್ಞಾನದಲ್ಲಿ ಆಗಿರುವ ಪ್ರಗತಿ ಹಾಗೂ ಅತ್ಯುತ್ತಮ ಪ್ರತಿಜೈವಿಕ ಔಷಧಿಗಳು. ನಂಜುರೋಧಕ ವಿಜ್ಞಾನವು ಆರಂಭವಾದ ಬಗೆ ಕುತೂಹಲಕರವಾಗಿದೆ. ಅನಾದಿ ಕಾಲದಿಂದಲೂ, ಮನುಷ್ಯನಿಗೆ ರೋಗಗಳು ಬರಲು ದೈವ ಅಥವಾ ದೆವ್ವಗಳ ಪ್ರಕೋಪವೇ ಕಾರಣ ಎನ್ನುವ ನಂಬಿಕೆ ಬಲವಾಗಿತ್ತು. ಇಂಥ ಸ್ಥಿತಿಯಲ್ಲಿ 'ನಮ್ಮ ಬರಿಗಣ್ಣಿಗೆ ಕಾಣದ ಅದೃಶ್ಯಲೋಕದ ಅಗೋಚರ ಜೀವಿಗಳು ಇವೆ' ಎನ್ನುವುದನ್ನು ಮೊದಲ ಬಾರಿಗೆ ಲ್ಯೂವೆನ್‌ಹಾಕ್ ತನ್ನ ಸೂಕ್ಷ್ಮದರ್ಶಕದ ಮೂಲಕ ತೋರಿಸಿಕೊಟ್ಟ. ಒಂದೊಂದು ಸೋಂಕುರೋಗಕ್ಕೆ ಒಂದೊಂದು ಸೂಕ್ಷ್ಮಜೀವಿ ಕಾರಣವಾಗಿದೆ ಎನ್ನುವುದನ್ನು ಲೂಯಿ ಪ್ಯಾಶ್ಚರ್ ಮತ್ತು ರಾಬರ್ಟ್ ಕಾಚ್ ಇಬ್ಬರೂ ನಿರೂಪಿಸಿದರು. ಈ ನಡುವೆ, ಗಾಯಗಳು ಏಕೆ ಕೊಳೆಯುತ್ತವೆ ಎನ್ನುವುದರ ಬಗ್ಗೆ ಜೋಸೆಫ್ ಲಿಸ್ಟರ್ ತುಂಬಾ ಯೋಚಿಸುತ್ತಿದ್ದ. ಈ ಘಟ್ಟದಲ್ಲಿ ಎರಡು ವಿದ್ಯಮಾನಗಳು ಲಿಸ್ಟರನ ಗಮನಕ್ಕೆ ಬಂದವು. ಮೊದಲನೆಯದು ಇಂಗ್ಲೆಂಡಿನ 'ಕಾರ್ಲಿಸೆಲ್' ನಗರದಲ್ಲಿ, ಕಟ್ಟಿಕೊಂಡು ದುರ್ವಾಸನೆ ಬೀರುತ್ತಿದ್ದ ಚರಂಡಿಗಳನ್ನು ಶುದ್ಧೀಕರಿಸಲು ಕಾರ್ಬಾಲಿಕ್ ಆಸಿಡ್ ಬಳಸುತ್ತಿದ್ದರು. ಈ ಆಸಿಡ್ ಕಟ್ಟಿಕೊಂಡಿದ್ದ ಚರಂಡಿಯನ್ನು ಮುಕ್ತಗೊಳಿಸಿದ್ದಲ್ಲದೆ, ದುರ್ವಾಸನೆಯನ್ನೂ ನಿವಾರಿಸಿತು. ಎರಡನೆಯದು, ರೋಗಜನಕ ಸೂಕ್ಷ್ಮಜೀವಿಗಳನ್ನು ಲೂಯಿ ಪ್ಯಾಶ್ಚರ್ ಪ್ರಯೋಗದಲ್ಲಿ ಬಳಸಿದ ಮೇಲೆ, ಬ್ಯಾಕ್ಟೀರಿಯಗಳಿದ್ದ ಗಾಜಿನ ತಟ್ಟೆಯನ್ನು ಶಾಖಕ್ಕೆ ಒಡ್ಡುತ್ತಿದ್ದ, ಕುದಿಸುತ್ತಿದ್ದ ಇಲ್ಲವೇ ಮದ್ಯಸಾರದಿಂದ ನಾಶ ಮಾಡಿ ಸ್ವಚ್ಛಗೊಳಿಸುತ್ತಿದ್ದ. ಇವೆರಡನ್ನೂ ಗಮನಿಸಿದ ಲಿಸ್ಟರ್, "ಬ್ಯಾಕ್ಟೀರಿಯಗಳನ್ನು ಕೃತಕ ವಿಧಾನಗಳಿಂದ ಕೊಲ್ಲಲು ಸಾಧ್ಯ ಎನ್ನುವುದಾದರೆ, ಗಾಯಗಳನ್ನು ಕೊಳೆಯಿಸಿ ದುರ್ನಾತ ಬೀರುವ ಬ್ಯಾಕ್ಟೀರಿಯಗಳನ್ನೂ ಕೊಲ್ಲಲು ಸಾಧ್ಯವಾಗುತ್ತದೆಯಲ್ಲವೇ..." ಎಂದು ತರ್ಕಿಸಿದ. ಬ್ಯಾಕ್ಟೀರಿಯಗಳನ್ನು ಕೊಲ್ಲಬಲ್ಲ ಹಲವು ರಾಸಾಯನಿಕಗಳನ್ನು ಪ್ರಯೋಗಿಸಿದ. ಅಂಥ ಉಪಯೋಗವೇನೂ ಆಗಲಿಲ್ಲ. ಕೊನೆಗೆ ಆಗಸ್ಟ್ 12, 1865ರಂದು 11 ವರ್ಷದ ಹುಡುಗನೊಬ್ಬ ಅಪಘಾತಕ್ಕೆ ತುತ್ತಾಗಿದ್ದ. ಅವನ ಕಣಕಾಲಿನಲ್ಲಿದ್ದ 'ಟಿಬಿಯ' ಎಂಬ ಮೂಳೆ ಮುರಿದಿತ್ತು. ಮುರಿದ ಚೂರು, ಸ್ನಾಯು ಮತ್ತು ಚರ್ಮವನ್ನು ಭೇದಿಸಿಕೊಂಡು ಹೊರಗೆ ಬಂದಿತ್ತು. ಅಂದಿನ ದಿನಗಳಲ್ಲಿ ಸಾಮಾನ್ಯವಾಗಿ ಇಂಥ ಸ್ಥಿತಿಯಲ್ಲಿ ಕಾಲನ್ನು ಛೇದಿಸುತ್ತಿದ್ದರು. ಆದರೆ ಆ ಹುಡುಗನಿಗೆ ಕೇವಲ 11 ವರ್ಷಗಳಾಗಿದ್ದರಿಂದ, ಲಿಸ್ಟರ್ ಒಂದು ದಿಟ್ಟ ಪ್ರಯೋಗ ಮಾಡಲು ನಿರ್ಧರಿಸಿದ. ಹೊರಗೆ ಬಂದಿದ್ದ ಮೂಳೆಯನ್ನು ಒಳಗೆ ತಳ್ಳಿ ಸ್ವಸ್ಥಾನದಲ್ಲಿ ಕೂರಿಸಿದ. ಕಾಲು ಅಲುಗದಂತೆ ದಬ್ಬೆಗಳಿಂದ ಬಿಗಿದ. ಪ್ರಬಲ ಕಾರ್ಬಾಲಿಕ್ ಆಮ್ಲದಲ್ಲಿ ಹತ್ತಿ ಬಟ್ಟೆಯನ್ನು ಅದ್ದಿ ಅದನ್ನು ಗಾಯದ ಮೇಲಿಟ್ಟ. ತವರದ ಹಾಳೆಯಿಂದ ಪಟ್ಟಿ ಕಟ್ಟಿದ. 4 ದಿನ ಬಿಟ್ಟು ಪಟ್ಟಿಯನ್ನು ಬಿಚ್ಚಿದಾಗ ಯಾವುದೇ ಸೋಂಕಿನ ಲಕ್ಷಣಗಳಿರಲಿಲ್ಲ! ಕಾಲು ಆರೋಗ್ಯಕರವಾಗಿಯೇ ಇತ್ತು. ಪ್ರಬಲ ಕಾರ್ಬಾಲಿಕ್ ಆಮ್ಲವನ್ನು ಬಳಸಿದ್ದ ಕಾರಣ, ಕೆಲವೆಡೆ ಸುಟ್ಟ ಗುರುತುಗಳಿದ್ದವು. ಹಾಗಾಗಿ ಈಗ ದುರ್ಬಲ ಕಾರ್ಬಾಲಿಕ್ ಆಮ್ಲದಿಂದ ಗಾಯವನ್ನು ಸ್ವಚ್ಛಗೊಳಿಸಿ ಪಟ್ಟಿ ಕಟ್ಟಿದ. ಗಾಯವನ್ನು ಹೀಗೆ ನಿಯತವಾಗಿ ಸ್ವಚ್ಛಗೊಳಿಸುವುದನ್ನು ಮುಂದುವರಿಸಿದ. 6 ವಾರಗಳಲ್ಲಿ ಹುಡುಗ ಎದ್ದು ನಿಂತು ಸ್ವತಂತ್ರವಾಗಿ ನಡೆದ. ವೈದ್ಯಕೀಯ ಇತಿಹಾಸದಲ್ಲಿ ಮೊದಲ ಬಾರಿಗೆ 'ಪವಾಡ' ನಡೆದಿತ್ತು. ಕಾರ್ಬಾಲಿಕ್ ಆಮ್ಲವು ನಂಜುರೋಧಕ ವಿಜ್ಞಾನದ ಹೆಬ್ಬಾಗಿಲನ್ನೇ ತೆರೆಯಿತು.

ಕಾರ್ಬಾಲಿಕ್ ಆಸಿಡ್, ಫೀನೋಲಿಕ್ ಆಸಿಡ್, ಬೆಂಜೆನಾಲ್ ಎಂಬ ಹೆಸರುಗಳಿರುವ ಈ ರಾಸಾಯನಿಕವು 'ಫೀನಾಲ್' ಎಂಬ ಹೆಸರಿನಲ್ಲಿ ಹೆಚ್ಚು ಪ್ರಸಿದ್ಧವಾಗಿದೆ. ಕಚ್ಚಾ ಫೀನಾಲನ್ನು ಮೊದಲ ಬಾರಿಗೆ ಜರ್ಮನಿಯ ರಸಾಯನ ವಿಜ್ಞಾನಿ ಫ್ರೀಡ್ಲೀಬ್ ಫರ್ಡಿನಂಡ್ ರುಂಗೆ 1834ರಲ್ಲಿ ತಾರೆಣ್ಣೆ ಅಥವಾ ಡಾಂಬರಿನಿಂದ ಪ್ರತ್ಯೇಕಿಸಿದ. ರುಂಗೆ ಇದನ್ನು 'ಕೋಲ್-ಆಯಿಲ್-ಆಸಿಡ್' ಎನ್ನುವ ಅರ್ಥದಲ್ಲಿ 'ಕಾರ್ಬಾಲಿಕ್ ಆಸಿಡ್' ಎಂದು ಕರೆದ. ಕಾರ್ಬಾಲಿಕ್ ಆಸಿಡ್ ಎನ್ನುವ ರಾಸಾಯನಿಕಕ್ಕೆ ಫೀನಾಲ್ ಎಂದು ಚಾರ್ಲ್ಸ್ ಗೆರ್ಹಾರ್ಡ್ಟ್ ನಾಮಕರಣ ಮಾಡಿದ.

ಫೀನಾಲ್, ಎರಡಲುಗಿನ ಖಡ್ಗ. ಇದರ ಆವಿಯು ಕಣ್ಣು, ಮೂಗು, ಬಾಯಿ, ವಾಯುನಾಳ ಹಾಗೂ ಚರ್ಮವನ್ನು ಕೆರಳಿಸಬಲ್ಲದು, ಸುಡಬಲ್ಲದು. ಪದೇ ಪದೆ ಚರ್ಮದ ಸಂಪರ್ಕಕ್ಕೆ ಬಂದರೆ ಚರ್ಮದ ಉರಿಯೂತಕ್ಕೆ ಕಾರಣವಾಗಿ, ಮುಂದೆ ಅದು ಕ್ಯಾನ್ಸರ್ ಬೆಳೆಯಲು ಅವಕಾಶವನ್ನು ಮಾಡಿಕೊಡಬಹುದು. ಇದು ಮೂತ್ರಪಿಂಡ ಹಾಗೂ ಯಕೃತ್ತಿನ ಕೆಲಸ ಕಾರ್ಯಗಳನ್ನು ಏರುಪೇರು ಮಾಡುತ್ತದೆ. ಹೃದಯ ಮತ್ತು ಮಿದುಳಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೃದಯ ಮಿಡಿತ ಏರುಪೇರಾಗಿ, ಸೆಳವು ಕಂಡುಬಂದು, ವ್ಯಕ್ತಿ ಕೋಮಾಕ್ಕೆ ಒಳಗಾಗಬಹುದು. ಕೋಮಾದಲ್ಲಿಯೇ ಸಾವು ಸಂಭವಿಸಬಹುದು. ಫೀನಾಲ್, ಸೂಕ್ಷ್ಮಜೀವಿಗಳನ್ನು ಕೊಲ್ಲುವ ಹಾಗೆ, ಮನುಷ್ಯರನ್ನೂ ಕೊಲ್ಲಬಲ್ಲದು ಎನ್ನುವ ವಿಚಾರ ಕಾಲಕ್ರಮೇಣ ತಿಳಿಯಿತು. ಜರ್ಮನ್ನರು ದ್ವಿತೀಯ ಮಹಾಯುದ್ಧದಲ್ಲಿ ಇದನ್ನು ಪರಿಪೂರ್ಣವಾಗಿ ದುರುಪಯೋಗಪಡಿಸಿಕೊಂಡರು. 1939ರ 'ಆಕ್ಷಿಯಾನ್-ಟಿ4' ಸಾಮೂಹಿಕ ಕೊಲೆಗೆ ಕುಖ್ಯಾತವಾದ ಘಟನೆ. ಇಲ್ಲಿ ಜರ್ಮನ್ನರು ಹತ್ತತ್ತಿರ 3 ಲಕ್ಷ ಯೆಹೂದಿಗಳನ್ನು ಫೀನಾಲ್ ಇಂಜೆಕ್ಷನ್ ನೀಡಿ ಕೊಂದರು. ಇದು ಮನುಕುಲದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವಾಗಿ ಉಳಿದಿದೆ.



ಜೋಸೆಫ್ ಲಿಸ್ಟರ್

ಈಗ ವಿಜ್ಞಾನ ಸಾಕಷ್ಟು ಮುಂದುವರಿದಿದೆ. ಜೀವವನ್ನು ತೆಗೆಯುವ ನಾಗರಹಾವಿನ ವಿಷವನ್ನು ಸೂಕ್ತ ವಿಧಾನದಲ್ಲಿ ಬಳಸಿದರೆ, ಅದು ಹೃದಯಾಘಾತಕ್ಕೆ ತುತ್ತಾಗಿರುವವರ ಜೀವವನ್ನು ಉಳಿಸಬಲ್ಲದು ಎಂಬುದು ನಮಗೆ ತಿಳಿದಿದೆ. ಹಾಗಾಗಿ, ಜೀವ ತೆಗೆವ ಫೀನಾಲನ್ನು ಹಲವು ರೀತಿಯ ಅನಾರೋಗ್ಯಗಳಿಗೆ ಸಮರ್ಪಕ ಔಷಧವಾಗಿ ಬಳಸುವುದು ಸಾಧ್ಯವಾಗಿದೆ. ಪಾರ್ಕಿನ್ಸನ್ ಕಾಯಿಲೆ, ಸೆರೆಬ್ರಲ್ ಪಾಲ್ಸಿ, ಮಿದುಳಿಗೆ ಆಗುವ ತೀವ್ರ ಸ್ವರೂಪದ ಪೆಟ್ಟುಗಳಲ್ಲಿ ಮಿದುಳು- ಬೆನ್ನುಹುರಿ-ನರಗಳು-ಸ್ನಾಯುಗಳ ನಡುವಿನ ಸಂಪರ್ಕ ಹಿತ-ಮಿತ ಪ್ರಮಾಣದಲ್ಲಿರದೆ ಅಧಿಕವಾಗಿದ್ದು ಸ್ನಾಯು ಬಿಗುಪಿಗೆ (ಸ್ಪಾಸ್ಟಿಸಿಟಿ) ಕಾರಣವಾಗುತ್ತದೆ. ಆ ಸ್ನಾಯುವನ್ನು ಚಲಿಸುವುದೂ ದುಸ್ತರವಾಗುತ್ತದೆ. ಇಂಥ ಸಂದರ್ಭದಲ್ಲಿ ಮಿತಪ್ರಮಾಣದ ಫೀನಾಲ್ ಇಂಜೆಕ್ಷನ್ ನೀಡಿ ಬಿಗುಪನ್ನು ತಗ್ಗಿಸಬಹುದು. ಆಗ ಆ ಸ್ನಾಯುವಿನ ಬಳಕೆ ಸುಲಭವಾಗುತ್ತದೆ. ಇದೇ ಮಾದರಿಯಲ್ಲಿ 'ಬಾಟ್ಯುಲಿನಮ್ ಟಾಕ್ಸಿನ್-ಎ' ಎಂಬ ವಿಷವಸ್ತುವನ್ನೂ ಔಷಧವಾಗಿ ಬಳಸಬಹುದು.

ಕಾರ್ಖಾನೆಗಳ ಕಾರ್ಮಿಕರು ಬಿಗಿ ಬೂಟುಗಳನ್ನು ದಿನಕ್ಕೆ 8-12 ಗಂಟೆಗಳವರೆಗೆ ನಿರಂತರವಾಗಿ ಬಳಸುವುದು ಅನಿವಾರ್ಯವಾಗುತ್ತದೆ. ಅದು ಸ್ವಲ್ಪ ಬಿಗಿಯಾಗಿದ್ದರೆ ಪಾದದ ಹಲವು ಸಮಸ್ಯೆಗಳಿಗೆ ಕಾರಣವಾಗಬಹುದು. ಅವುಗಳಲ್ಲಿ ಹೆಬ್ಬೆರಳ ಉಗುರಿನ ಒಳಬೆಳವಣಿಗೆಯೂ (ಇನ್‌ಗ್ರೋಯಿಂಗ್ ಆಫ್ ಟೊ ನೇಲ್) ಒಂದು. ಇದಕ್ಕೆ ಶಸ್ತ್ರಚಿಕಿತ್ಸೆಯೊಂದೇ ಮಾರ್ಗ. ಆದರೆ 3-4 ಸಲ ಶಸ್ತ್ರಚಿಕಿತ್ಸೆ ಮಾಡಿಸಿದರೂ, ಮತ್ತೆ ಮತ್ತೆ ವಕ್ರವಾಗಿಯೇ ಬೆಳೆಯುತ್ತದೆ. ಇಂಥವರಿಗೆ ಉಗುರು ಮತ್ತೆ ಬೆಳೆಯದಂತೆ ಮಾಡಿದರೆ ಅವರ ಬದುಕು ಸಹನೀಯವಾಗುತ್ತದೆ. ಅದಕ್ಕಾಗಿ ಫೀನಾಲ್ ಇಂಜೆಕ್ಷನ್ನನ್ನು ಉಗುರಿನ ಕಣ್ಣಿಗೆ ನೀಡಲಾಗುತ್ತದೆ, ಆಗ ಉಗುರಿನ ಬೆಳವಣಿಗೆ ನಿಲ್ಲುತ್ತದೆ. ಇದುವೇ 'ಮ್ಯಾಟ್ರಿಕ್ಸೆಕ್ಟಮಿ'. ಇತ್ತೀಚಿನ ದಿನಗಳಲ್ಲಿ 'ಸೋಡಿಯಂ ಹೈಡ್ರಾಕ್ಸೈಡ್' ಇಂಜೆಕ್ಷನ್ನನ್ನು ನೀಡುವ ಪದ್ಧತಿಯಿದೆ.

ಲಸಿಕೆಯ ಸಂರಕ್ಷಕವಾಗಿ ಫೀನಾಲನ್ನು ಉಪಯೋಗಿಸಬಹುದು. ಉದಾಹರಣೆಗೆ ನ್ಯುಮೋನಿಯ ಮತ್ತು ಮಿದುಳುರಿಯೂತವನ್ನು ತಡೆಗಟ್ಟುವ 'ನ್ಯೂಮೋವ್ಯಾಕ್ಸ್-23' ಲಸಿಕೆಯಲ್ಲಿ ಫೀನಾಲ್ ಇರುತ್ತದೆ. ಇದು ಲಸಿಕೆಯ ದ್ರವದಲ್ಲಿ ಯಾವುದೇ ಬ್ಯಾಕ್ಟೀರಿಯ ಬೆಳೆಯದಂತೆ ರಕ್ಷಿಸುತ್ತದೆ. ಹೀಗೆಯೇ ಟೈಫಾಯ್ಡ್ ಜ್ವರವನ್ನು ತಡೆಗಟ್ಟುವ 'ಟೈಫಿಮ್-ವಿ' ಲಸಿಕೆ, ಸಿಡುಬನ್ನು ತಡೆಗಟ್ಟುವ 'ACAM 2000 ಲಸಿಕೆ' ಮತ್ತು ಪೋಲಿಯೊ ಲಸಿಕೆಯಲ್ಲೂ ಫೀನಾಲನ್ನು ಸಂರಕ್ಷಕವಾಗಿ ಬಳಸಬಹುದು.

ಗಂಟಲು ನೋವು ಅಥವಾ 'ಸೋರ್ ಥ್ರೋಟ್' ಸಾಕಷ್ಟು ಕಿರಿಕಿರಿಯನ್ನುಂಟುಮಾಡಬಲ್ಲದು. ಅನ್ನ, ನೀರನ್ನು ನುಂಗುವುದಿರಲಿ, ಎಂಜಲನ್ನು ನುಂಗುವುದೂ ಕಷ್ಟವಾಗಬಹುದು. ಇಂಥ ಸಂದರ್ಭದಲ್ಲಿ ಫೀನಾಲ್ ಇರುವ ಸ್ಪ್ರೇಯನ್ನು ಬಳಸಬಹುದು. ಫೀನಾಲ್ ಗಂಟಲ ನೋವನ್ನು ಗುಣಪಡಿಸುವುದಿಲ್ಲ, ಆದರೆ ಉಗ್ರಸ್ವರೂಪದ ನೋವನ್ನು ಶಮನಮಾಡುತ್ತದೆ. ಇಂಥ ಸ್ಪ್ರೇಗಳಲ್ಲಿ ಶೇ.1.4ರಷ್ಟು ಫೀನಾಲ್ ಇರುತ್ತದೆ. ಹಿತ-ಮಿತ ಫೀನಾಲನ್ನು ನಿಗದಿತ ಅಲ್ಪಕಾಲಾವಧಿಯಲ್ಲಿ ಬಳಸಿದರೆ ಯಾವುದೇ ದೊಡ್ಡ ಸಮಸ್ಯೆಯಾಗುವುದಿಲ್ಲ, ಆದರೆ ಫೀನಾಲಿನ ಸ್ವಯಂ ವೈದ್ಯಕೀಯವು ನಿಷಿದ್ಧ. 3 ವರ್ಷಕ್ಕಿಂತ ಚಿಕ್ಕ ವಯಸ್ಸಿನ ಮಕ್ಕಳಿಗೆ ಫೀನಾಲ್‌ಯುಕ್ತ ಸ್ಪ್ರೇ ಬಳಸಬಾರದು. ಗಂಟಲು ನೋವಿನ ಜತೆಗೆ ಜ್ವರ, ಮೈಕೈ ನೋವು, ವಾಕರಿಕೆ ಅಥವಾ ವಾಂತಿಯಿದ್ದರೆ ಫೀನಾಲ್ ಸ್ಪ್ರೇಯನ್ನು ಬಳಸಬಾರದು. ವೈದ್ಯರನ್ನು ನೋಡಬೇಕು. ಸೋಂಕಿನ ಲಕ್ಷಣವಿದ್ದರೆ ಅವರು ಪ್ರತಿಜೈವಿಕ ಔಷಧಗಳನ್ನು ನೀಡಬಹುದು.

ಕೆಲ ಹೆಣ್ಣುಮಕ್ಕಳ ಸೌಂದರ್ಯಪ್ರಜ್ಞೆ ಅಗತ್ಯಕ್ಕಿಂತ ಹೆಚ್ಚಿರುತ್ತದೆ. ಮುಖದಲ್ಲಿ ಹಳೆಯ ಚರ್ಮದ ಲಕ್ಷಣಗಳು ಕಾಣಬಾರದು, ಚರ್ಮ ಹೊಸದಾಗಿದ್ದು ನಳನಳಿಸುತ್ತಿರಬೇಕು. ಅದಕ್ಕೆ ಅವರು ರಾಸಾಯನಿಕ ಚರ್ಮಸುಲಿತವನ್ನು ಮಾಡಿಸಿಕೊಳ್ಳುವರು. ಈರುಳ್ಳಿ ಸಿಪ್ಪೆಯನ್ನು ತೆಗೆಯುವಂತೆ, ಹಳೆಯ ಚರ್ಮವನ್ನು ಸುಲಿಯಲು ಫೀನಾಲ್‌ಯುಕ್ತ 'ಟ್ರೈಕ್ಲೋರೋ ಅಸಿಟಿಕ್ ಆಸಿಡ್' ಬಳಸುವರು. ಇಂಥ ಚರ್ಮಸುಲಿತಕ್ಕೆ ಅಮೆರಿಕದ 'ಎಫ್‌ಡಿಎ'ನ ಅನುಮತಿಯಿದೆ. ಹಾಗೆಯೇ ಹಲವು ರೀತಿಯ ಆಹಾರ ಪದಾರ್ಥಗಳು ಹಾಗೂ ಸೌಂದರ್ಯವರ್ಧಕ ಸಾಮಗ್ರಿಗಳು ಹಾಳಾಗದಂತೆ ರಕ್ಷಿಸಲು ಫೀನಾಲ್‌ಯುಕ್ತ 'ಬ್ಯುಟೈಲೇಟೆಡ್ ಹೈಡ್ರಾಕ್ಸಿ ಟಾಲಿನ್' (ಬಿಎಚ್‌ಟಿ) ಎಂಬ ರಾಸಾಯನಿಕವನ್ನು ಬಳಸುವುದುಂಟು. ಆದರೆ ಕೆಲವು ಅಮೆರಿಕನ್ನರು ಈ ಅತ್ಯಲ್ಪ ಪ್ರಮಾಣದ ಫೀನಾಲ್ ಸಹ ಅನಗತ್ಯ ಎಂದು ಭಾವಿಸಿ, ಫೀನಾಲ್‌ಯುಕ್ತ ವಸ್ತುಗಳನ್ನು ಕೊಳ್ಳದಂತೆ ಎಚ್ಚರವಹಿಸುವರು.

ಕೆಲ ಸಂದರ್ಭಗಳಲ್ಲಿ ಮನುಷ್ಯನ ಜೀವಕೋಶದಲ್ಲಿರುವ ಡಿಎನ್‌ಎ, ಆರ್‌ಎನ್‌ಎ ಮತ್ತು ಪ್ರೊಟೀನುಗಳನ್ನು ಪ್ರತ್ಯೇಕಿಸಬೇಕಾಗುತ್ತದೆ. ಇದಕ್ಕಾಗಿ 'ಫೀನಾಲ್, ಕ್ಲೋರೋಫಾರಂ ಹಾಗೂ ಟ್ರೈಕ್ಲೋರೋಮೀಥೇನ್'ಗಳನ್ನು ಬಳಸುವುದುಂಟು. ಹಾಗಾಗಿ ಈ ಅಧ್ಯಯನಗಳು ನ್ಯಾಯಾಲಯದಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ಸೂಕ್ತ ತೀರ್ಪನ್ನು ನೀಡಲು ನೆರವಾಗುತ್ತವೆ.

ಕಾರ್ಬಾಲಿಕ್ ಸೋಪ್ ಪ್ರಸಿದ್ಧ. ವೈದ್ಯ ವಿದ್ಯಾರ್ಥಿಗಳಾಗಿದ್ದಾಗ ಶವವಿಚ್ಛೇದನ ಮಾಡಿದ ನಂತರ ಕಾರ್ಬಾಲಿಕ್ ಸೋಪಿನಲ್ಲಿ ಕೈಗಳನ್ನು ತೊಳೆದುಕೊಳ್ಳುತ್ತಿದ್ದೆವು. 'ರೆಡ್ ಕ್ರಾಸ್' ಮತ್ತು 'ಡಾಕ್ಟರ್ಸ್ ವಿಥೌಟ್ ಬಾರ್ಡರ್ಸ್' ಮುಂತಾದ ಸಂಸ್ಥೆಗಳು ಬಡದೇಶಗಳಿಗೆ ನೆರವು ನೀಡುವಾಗ ಕಾರ್ಬಾಲಿಕ್ ಸೋಪನ್ನೂ ನೀಡುತ್ತವೆ. ಇದು ಉತ್ತಮ ಕ್ರಿಮಿನಾಶಕ ಎನ್ನುವುದನ್ನು ನಾವು ನೆನಪಿನಲ್ಲಿಡಬೇಕು.

ಹಣ್ಣು, ತರಕಾರಿ ಮತ್ತು ಒಣಬೀಜಗಳಲ್ಲಿರುವ ಫೀನಾಲ್‌ಯುಕ್ತ ಪ್ರತಿ-ಉತ್ಕರ್ಷಕಗಳು (ಆಂಟಿ-ಆಕ್ಸಿಡೆಂಟ್) ಕ್ಯಾನ್ಸರನ್ನೂ ಒಳಗೊಂಡಂತೆ ಜೀವನಶೈಲಿಯ ರೋಗಗಳನ್ನು ತಡೆಗಟ್ಟಬಲ್ಲವು. ಅವು ಹೀಗಿವೆ:

ರೆಸ್ವೆರಟ್ರಾಲ್- ದ್ರಾಕ್ಷಿ, ಕೆಂಪು ದ್ರಾಕ್ಷಾರಸ, ಶೇಂಗಾ (ಹೃದಯ ಸಂರಕ್ಷಕ); ಕ್ವೆರ್ಸಿಟಿನ್- ಈರುಳ್ಳಿ, ಸೇಬು, ಬೆರ್ರಿ (ರೋಗರಕ್ಷಣಾ ಸಾಮರ್ಥ್ಯ ವರ್ಧಕ); ಕರ್ಕ್ಯುಮಿನ್- ಅರಿಶಿನ (ಉರಿಯೂತ ರೋಧಕ, ಕ್ಯಾನ್ಸರ್ ನಿಗ್ರಾಹಕ); ಸ್ಯಾಲಿಸಿಲಿಕ್ ಆಸಿಡ್- ವಿಲ್ಲೋ ಮರದ ತೊಗಟೆ (ಜ್ವರಹಾರಕ, ಉರಿಯೂತ ರೋಧಕ); ಕ್ಯಾಟೆಚಿನ್- ಗ್ರೀನ್ ಟೀ, ಕೋಕೋ (ರಕ್ತನಾಳಗಳ ಆರೋಗ್ಯ ಸಂರಕ್ಷಕ); ಗ್ಯಾಲಿಕ್ ಆಸಿಡ್- ಚಹಾ, ಸುಮಾಕ್, ಗಾಲ್ನಟ್ (ಪ್ರತಿಜೈವಿಕ ಗುಣ); ಎಲಾಜಿಕ್ ಆಸಿಡ್- ದಾಳಿಂಬೆ, ಸ್ಟ್ರಾಬೆರ್ರಿ (ಕ್ಯಾನ್ಸರ್ ರೋಧಕ); ಫೆರ್ಯುಲಿಕ್ ಆಸಿಡ್... ಫೈಮಾಲ್- ಫೈಮ್ (ಪ್ರತಿಜೈವಿಕ ಗುಣ); ಲ್ಯೂಟೋಲಿನ್- ಸೆಲೆರಿ, ಪಾರ್ಸ್ಲೆ (ಕ್ಯಾನ್ಸರ್ ರೋಧಕ); ಟ್ಯಾನಿಕ್ ಆಸಿಡ್- ಚಹಾ, ವೈನ್, ಬೀಜಗಳು (ಪ್ರತಿ ಉತ್ಕರ್ಷಕ).

ಫೀನಾಲ್ ಎರಡಲಗಿನ ಖಡ್ಗ! ಹದವರಿತು ಬಳಸಿದರೆ ಜೀವವನ್ನು ಉಳಿಸುತ್ತದೆ. ಮಿತಿಮೀರಿದರೆ ಜೀವವನ್ನು ತೆಗೆಯುತ್ತದೆ. ಹಾಗಾಗಿ ವಿವೇಚನೆಯೊಡನೆ ಈ ರಾಸಾಯನಿಕಗಳನ್ನು ಬಳಸೋಣ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಯಾಕೆ ಹೀಗೆ? ಗೊತ್ತಿಲ್ಲ...

ನಾನು ಬಿಜೆಪಿಯೆಡೆಗೆ ಒಲವಿರುವವ. ಯಾಕೆ? ಅದು ಗೊತ್ತಿಲ್ಲ. ರಾಜ್ಯದಲ್ಲೂ, ಕೇಂದ್ರದಲ್ಲೂ ಬಿಜೆಪಿ ಬಂದುಬಿಡಬೇಕು ಎಂಬ ಆಶಯ ನಮಗಿತ್ತು. ಅಂತೆಯೇ ಅದು ನೆರವೇರಿದ್ದೂ ಆಯಿತು. ಹಾಗಂತ ನಮ್ಮ ರಾಜ್ಯದ ಉದ್ಧಾರವಾಗಿಬಿಟ್ಟಿತೇ? ಏನೂ ಇಲ್ಲ. ಸರಿ, ಈಗ್ಗೆ ಕೆಲ ವರ್ಷಗಳಿಂದ ಕರ್ನಾಟಕದಲ್ಲಿ ಕಾಂಗ್ರೆಸ್ಸಿದೆ, ಹಗರಣಗಳು ಸಾಕಷ್ಟಿವೆ. ಈ ಹಿಂದೆ ಬಿಜೆಪಿ ಇತ್ತು, ಆಗಲೂ 'ಕಿಕ್‌ಬ್ಯಾಕ್' ಪ್ರಕರಣ, ಕೋವಿಡ್ ಕಾಲದ ವೈದ್ಯಕೀಯ ಹಗರಣ ಎಲ್ಲವೂ ಇದ್ದವು. ಆದರೂ ನಾವು ಬಿಜೆಪಿ ಪಕ್ಷ, ಯಾಕೆ? ಅದು ಗೊತ್ತಿಲ್ಲ. ಅಲ್ಲಿಗೂ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 'ಗ್ಯಾರಂಟಿ' ಯೋಜನೆಯ ಆಮಿಷ ತೋರಿಸಿತು. ತಥಾಕಥಿತ ಬಿಜೆಪಿ ಅಭಿಮಾನಿಗಳಾದ ನಾವು ವಿರೋಧಿಸಿದೆವು. ಯಾಕೆ? ಗೊತ್ತಿಲ್ಲ, 'ಕರ್ನಾಟಕದಲ್ಲಿ ಕಾಂಗ್ರೆಸ್ ಸಾಲದ ಹೊರೆಮಾಡಿದೆ' ಅಂದರು ಪ್ರತಿಪಕ್ಷದವರು, ಆದರೆ ನಮಗೆ ಏನೂ ಆಗಿಲ್ಲ, ಆದರೂ ನಾವು ಬಿಜೆಪಿಯವರು. ಸರಿ, ನಮ್ಮಂಥ ಬಿಜೆಪಿ ಚಿಂತನೆಯವರು 'ಗ್ಯಾರಂಟಿ' ಯೋಜನೆಯನ್ನು ಸಂಪೂರ್ಣ ವಿರೋಧಿಸಿದೆವು. ಯಾಕೆ? ಗೊತ್ತಿಲ್ಲ. ಯಾರೇ ಬಂದರೂ 'ರಾಜ್ಯವನ್ನು ಉದ್ಧಾರ ಮಾಡುವವರು' ಅಂತ ತಿಳಿದುದೇ ಮೂರ್ಖತನ. ಇತ್ತೀಚಿನ ಉಪಚುನಾವಣೆ ವೇಳೆ ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ, ಸಂಡೂರಿನಲ್ಲಿ ಬಂಗಾರು ಹನುಮಂತು, ಶಿಗ್ಗಾವಿಯಲ್ಲಿ ಭರತ್ ಬೊಮ್ಮಾಯಿ ಆರಿಸಿ ಬರಲಿ ಅಂತ ನಾವು ಬಿಜೆಪಿ ಚಿಂತನೆಯವರು ಆಶಿಸಿದೆವು. ಒಂದೊಮ್ಮೆ ಅವರು ಆರಿಸಿ ಬಂದಿದ್ದರೆ ಅದೇನು ಕಡಿದು ಕಟ್ಟೆಹಾಕುತ್ತಿದ್ದರೋ ತಿಳಿಯದು. ಆದರೂ ನಾವು ಬಿಜೆಪಿ ಪರ. ಈಗ ಮೂರೂ ಕಡೆ ಕಾಂಗ್ರೆಸ್‌ನವರು ಆರಿಸಿ ಬಂದಿದ್ದಾರೆ. ನಮ್ಮಂಥವರಿಗೆ ಯಾರು ಬಂದರೂ ಒಂದೇ. ಏಕೆಂದರೆ ನಮ್ಮ ಓಣಿಗೆ ರಸ್ತೆಯಿಲ್ಲ, ಸರಿಯಾಗಿ ನೀರು ಬರುತ್ತಿಲ್ಲ, ಕರೆಂಟ್ ಸರಿಯಿರುವುದಿಲ್ಲ, ಆದರೂ ನಾವು ಬಿಜೆಪಿ. 'ಹುಚ್ಚುಮುಂಡೆ ಮದುವೆಯಲ್ಲಿ ಉಂಡವನೇ ಜಾಣ' ಎಂಬ ಗಾದೆಮಾತಿದೆ. ರಾಜಕೀಯ ಅದೆಷ್ಟು ಕೊಳಕಾಗಿದೆಯೆಂದರೆ, ಇಲ್ಲೂ ಅವಕಾಶ ಸಿಕ್ಕಾಗ ಉಂಡವನೇ ಜಾಣ. ಆದರೂ ನಾವು ಬಿಜೆಪಿ. ಯಾಕೆ? ಗೊತ್ತಿಲ್ಲ, ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿ ಯಾರು ಅಂತ ನೋಡದೆಯೇ ನಾವು ಬಿಜೆಪಿಗೆ ಮತ ಒತ್ತುತ್ತೇವೆ. ಯಾಕೆ? ಗೊತ್ತಿಲ್ಲ.

ಇನ್ನು, "ಈ ರಾಜಕೀಯ ನಮ್ಮಂಥವರಿಗೆ ಹೇಳಿಮಾಡಿಸಿದ್ದಲ್ಲ, ಏಕೆಂದರೆ ನಾನು ಮತ್ತು ನನ್ನಂಥ ಕೆಲವರು ಯಾರ ವಿರುದ್ಧವೂ ಪ್ರಚಾರದಲ್ಲಿ ಭಾಗವಹಿಸುವುದಿಲ್ಲ, ಯಾರ ಪರವೂ ಅಲ್ಲ" ಅನ್ನುವಾಗಲೂ ನಾವು ಬಿಜೆಪಿ. ಈಗ ಕರ್ನಾಟಕದಲ್ಲಿ ಆರಿಸಿಬಂದ ಮೂವರೂ ಕಾಂಗಿಗಳು ಹೋಗಲೆಂದರೆ, ಈ ಭರತ್ ಬೊಮ್ಮಾಯಿ, ಬಂಗಾರು ಹನುಮಂತು, ನಿಖಿಲ್ ಕುಮಾರಸ್ವಾಮಿ ಅವರೇ ಆರಿಸಿ ಬಂದಿದ್ದರೂ ರಾಜ್ಯದ ಯಾವ ಅಭಿವೃದ್ಧಿಯೂ ಆಗಲಾರದು. ಅಷ್ಟು ಗಬ್ಬೆದ್ದು ಹೋಗಿದೆ ನಮ್ಮ ರಾಜಕೀಯ ಹಾಗೂ ಒಟ್ಟಾರೆ ವ್ಯವಸ್ಥೆ.

ಈಗ ಹೇಳಿ, ಯಾರು ಆರಿಸಿ ಬಂದರೂ ನಮಗೇನು ಪ್ರಯೋಜನ ಅಂತ ಯೋಚಿಸಿದರೆ ಶೂನ್ಯ ಅಂತ ಅನ್ನಿಸದಾ? ನಾವು, ನಮ್ಮಂಥ ಕೆಲವರು ಜೀವಿತಾವಧಿಯಲ್ಲೇ ಇಲ್ಲಿಯ ಚುನಾಯಿತ ಪ್ರತಿನಿಧಿಗಳಲ್ಲಿ ಹೀಗೊಂದು ಸಹಾಯ ಬೇಕೆಂದು ಕೇಳಿದ್ದೇವಾ? ಇಲ್ಲ, ಆದರೂ ನಾವು ಬಿಜೆಪಿ.... ಇದು ನಗೆಪಾಟಲು ಅಲ್ಲವಾ?!

- ನಿತ್ಯಾನಂದ ಹೆಗಡೆ, ಮೂರೂರು

ವ್ಯವಸ್ಥೆ ಬಲಗೊಳ್ಳಲಿ

ಡೊನಾಲ್ಡ್ ಟ್ರಂಪ್ ಎರಡನೆಯ ಬಾರಿಗೆ ಅಮೆರಿಕದ ಅಧ್ಯಕ್ಷರಾದ ಬಳಿಕ ಭಾರತದ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಿಗೆ ಅನುಕೂಲಗಳಾದೀತೋ ಇಲ್ಲವೋ? ನಮ್ಮ ಯುವಜನರ 'ಎಚ್ 1 ಬಿ' ವೀಸಾದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಾರೋ? ಎಂಬೆಲ್ಲ ಪ್ರಶ್ನೆಗಳು/ ಆತಂಕಗಳು ಹಲವರಲ್ಲಿರಬಹುದು. ನಾವು 'ಆತ್ಮನಿರ್ಭರ', 'ಮೇಕ್ ಇನ್ ಇಂಡಿಯಾ' ಅಂತೆಲ್ಲ ನಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತೆಯೇ ಪ್ರತಿಯೊಂದು ದೇಶದವರೂ ತಂತಮ್ಮ ಸಂಸ್ಥೆಗಳ/ನಾಗರಿಕರ ಪರವಾಗಿ ಇರುವುದು ಸಹಜವಲ್ಲವೇ? ಈ ಸಮಸ್ಯೆಯನ್ನು ನೀಗುವುದಕ್ಕೆ ಇರುವ ಉಪಾಯವೆಂದರೆ- ಸಮತಟ್ಟಾದ ರಸ್ತೆ, ಶುದ್ಧನೀರು, ಹಸಿರು ಕವಚ, ಸುಸಜ್ಜಿತ ಆಸ್ಪತ್ರೆ ಮುಂತಾದ ಮೂಲಸೌಕರ್ಯಗಳನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ಮೂಲಕ ನಮ್ಮ ಎಲ್ಲ ಸಾರ್ವಜನಿಕ ವ್ಯವಸ್ಥೆಗಳನ್ನು ಸುಧಾರಿಸುವುದು, ದೇಶೀಯ ತಾಂತ್ರಿಕ ನೈಪುಣ್ಯಕ್ಕೆ ಮತ್ತು ಸಂಶೋಧನೆಗಳಿಗೆ ಮತ್ತಷ್ಟು ಉತ್ತೇಜನ ನೀಡುವ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉಪಕ್ರಮಗಳಿಗೆ ಕೈಹಾಕುವುದು. ನಮ್ಮಲ್ಲಿ ಪ್ರತಿಭಾನ್ವಿತ ಮಾನವ ಸಂಪನ್ಮೂಲಕ್ಕೇನೂ ಕೊರತೆಯಿಲ್ಲವಾದ್ದರಿಂದ, ಹೊಸ ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ನಮ್ಮ ಯುವಜನರು ನಮ್ಮಲ್ಲೇ ಉಳಿದುಕೊಳ್ಳುತ್ತಾರೆ. ಆಗ ಸಹಜವಾಗಿಯೇ ನಮ್ಮ ದೇಶವು ಪ್ರಗತಿ ಪಥದಲ್ಲಿ ಇನ್ನಷ್ಟು ಮುಂದೆ ಸಾಗುತ್ತದೆ, ಯುವಜನರ ಆತಂಕವೂ ನೀಗುತ್ತದೆ.

- ಬಿ.ಎನ್.ಭರತ್, ಬೆಂಗಳೂರು

ಆಟದಲ್ಲಿ ಧೀಮಂತ, ದಾನದಲ್ಲಿ ಶ್ರೀಮಂತ ಈ ನಡಾಲ್!

ಶುಭವಿದಾಯ

ರವೀ ಸಜಂಗದ್ದೆ
vveditoped@gmail.com

ಬಟ್ಟು 22 ಬಾರಿ ಗ್ರ್ಯಾಂಡ್ ಸ್ಲ್ಯಾಮ್ ಸಿಂಗಲ್ಸ್ ಚಾಂಪಿಯನ್ ಆಗಿ ಟ್ರೋಫಿಗೆ ಮುತ್ತಿಕ್ಕಿದ್ದ 38ರ ಹರೆಯದ ಸ್ಪೇನ್‌ನ ರಾಫೇಲ್ ನಡಾಲ್ ತಮ್ಮ ವೃತ್ತಿಪರ ಟೆನಿಸ್ ಬದುಕಿಗೆ ಇತ್ತೀಚೆಗೆ ವಿದಾಯ ಹೇಳಿದರು. ಅಲ್ಲಿಗೆ ಟೆನಿಸ್ ಲೋಕದ ವರ್ಣರಂಜಿತ, ಅಭೂತಪೂರ್ವ ಆಟಗಾರನೊಬ್ಬನ 'ಅಂಕಣ ಸಾಂಗತ್ಯ' ಕೊನೆಗೊಂಡಂತಾಯಿತು.

ಇತ್ತೀಚೆಗೆ ಸ್ಪೇನ್‌ನಲ್ಲಿ ನಡೆದ ಡೇವಿಸ್ ಕಪ್ ಪಂದ್ಯಾವಳಿಯಲ್ಲಿ ಪರಾಭವಗೊಂಡ ಬಳಿಕ ನಡಾಲ್ ನಿವೃತ್ತಿ ಘೋಷಿಸಿದರು. ಟೆನಿಸ್ ಅಂಕಣದ ಸುತ್ತ ನೆರೆದಿದ್ದ 10 ಸಾವಿರಕ್ಕೂ ಹೆಚ್ಚು ಕ್ರೀಡಾಭಿಮಾನಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, "ಮನಶ್ಶಾಂತಿ ಮತ್ತು ಒಂದಷ್ಟು ಸಾಧನೆಗಳ ನೆನಪುಗಳೊಂದಿಗೆ ಶಸ್ತ್ರತ್ಯಾಗ ಮಾಡುತ್ತಿರುವೆ. ಬಿರುದುಗಳು, ಸಾಧನೆಯ ಅಂಕಿ-ಅಂಶಗಳು, ಮುತ್ತಿಕ್ಕಿದ ಟ್ರೋಫಿಗಳು ನನ್ನ ವೃತ್ತಿಬದುಕಿನಲ್ಲಿ ಸಾಕಷ್ಟಿವೆ. ಕಂಡಿದ್ದ ಕನಸನ್ನು ಸಾಕಾರಗೊಳಿಸಿಕೊಂಡ ಸಂತಸ ನನ್ನಲ್ಲಿ ಕೆನೆಗಟ್ಟಿದೆ. ಇಷ್ಟು ವರ್ಷ ದೇಶಕ್ಕಾಗಿ ಆಡಿರುವ ಖುಷಿಯಿದೆ. ಒಂದು ಪರಂಪರೆಯ ಭಾಗವಾಗಿರುವ ನೆಮ್ಮದಿ ನನ್ನಲ್ಲಿದೆ. ನನಗೆ ಟೆನಿಸ್ ಆಡಿ ದಣಿವಾಗಿಲ್ಲ, ಆದರೆ ಇನ್ನಷ್ಟು ಆಡಲು ದೇಹ ಸಹಕರಿಸುತ್ತಿಲ್ಲ. ಇಷ್ಟು ದೀರ್ಘಕಾಲ ಆಡುವೆ ಎಂದು ಅಂದುಕೊಂಡಿರಲೇ ಇಲ್ಲ. ಸದಾ ನನ್ನ ಬೆನ್ನಿಗೆ ನಿಂತ ಅಭಿಮಾನಿಗಳಿಗೆ, ಸಹಕರಿಸಿ ಪ್ರೋತ್ಸಾಹಿಸಿ ಪ್ರೀತಿ ತೋರಿದ ಎಲ್ಲರಿಗೆ ನಾನು ಚಿರಋಣಿ" ಎನ್ನುವಷ್ಟರ ಹೊತ್ತಿಗೆ ಅವರ ಕಣ್ಣಾಲಿಗಳು ತುಂಬಿಬಂದಿದ್ದವು. ಅಲ್ಲಿ ನೆರೆದಿದ್ದವರು ಮಾತ್ರವಲ್ಲದೆ, ವಿಶ್ವಾದ್ಯಂತ ಆ ಪ್ರಸಾರವನ್ನು ವೀಕ್ಷಿಸುತ್ತಿದ್ದ ಲಕ್ಷಾಂತರ ಜನರ ಹೃದಯಗಳೂ ಭಾರವಾಗಿದ್ದವು. ಆ ನೀರವ ಮೌನದಲ್ಲಿ ನೋವಡಗಿತ್ತು!

ವಿಶ್ವ ಟೆನಿಸ್ ಇತಿಹಾಸದಲ್ಲಿ ಗರಿಷ್ಠ ಗ್ರ್ಯಾಂಡ್ ಸ್ಲ್ಯಾಮ್‌ಗಳನ್ನು (24) ತಮ್ಮದಾಗಿಸಿಕೊಂಡಿರುವ ಶ್ರೇಯ ಸರ್ಬಿಯಾ ದೇಶದ ನೊವಾಕ್ ಜೊಕೊವಿಕ್ ಅವರಿಗೆ ಸಲ್ಲುತ್ತದೆ. ಈ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿ (22) ರಾಫೇಲ್ ನಡಾಲ್. 3ನೇ ಸ್ಥಾನದಲ್ಲಿ (20) ಸ್ವಿಸ್ ದೇಶದ ರೋಜರ್ ಫೆಡರರ್ ಇದ್ದು, ಈ ತ್ರಿಮೂರ್ತಿಗಳನ್ನು ಟೆನಿಸ್ ಲೋಕ ಮರೆಯಲಾಗದು. ಇಬ್ಬರು ಅಸಾಮಾನ್ಯ ಆಟಗಾರರು ಪೈಪೋಟಿಗೆ ಬಿದ್ದು ಮೊದಲ ಸ್ಥಾನ ಗಿಟ್ಟಿಸಲು, ಮತ್ತದನ್ನು ಕಾಪಾಡಿಕೊಂಡು ಬರಲು ನಿರಂತರ ಶ್ರಮಿಸುವುದು ಟೆನಿಸ್ ಲೋಕದಲ್ಲಿ ಸಾಮಾನ್ಯವಾಗಿ ಕಾಣಬರುವ ಚಿತ್ರಣ. ಈ ಮೂವರು ತ್ರಿಕೋನ ಪೈಪೋಟಿಯ ಮೂಲಕ ಶ್ರೇಷ್ಠ ಪ್ರದರ್ಶನಗಳನ್ನು ಅಭಿಮಾನಿಗಳಿಗೆ ಉಣಬಡಿಸಿದರೆನ್ನಬೇಕು. ಇವರ ಪೈಕಿ ಫೆಡರರ್ 2 ವರ್ಷಗಳ ಹಿಂದೆ ತೆರೆಮರೆಗೆ ಸರಿದರೆ, ನಡಾಲ್ ಕಳೆದ ವಾರವಷ್ಟೇ ಟೆನಿಸ್ ರ್ಯಾಕೆಟ್ ಅನ್ನು ಕೆಳಗಿಟ್ಟಿದ್ದಾರೆ. ಅಲ್ಲಿಗೆ ಟೆನಿಸ್ ಲೋಕದಲ್ಲಿ ಮತ್ತೊಂದು ಮನ್ವಂತರದ ಸಮಾಪ್ತಿ.

ನಡಾಲ್ ನಿವೃತ್ತಿಯ ವಿಚಾರವಾಗಿ ಅವರ ಸಮಕಾಲೀನ ಆಟಗಾರ ಜೊಕೊವಿಕ್ ಮಾತನಾಡುತ್ತಾ, "ನಿಮ್ಮ ದೃಢತೆ, ಹೋರಾಟದ ಮನೋಭಾವ, ಅಂಕಣಕ್ಕೆ ಇಳಿಯುವಾಗ ತೋರುವ ಶಕ್ತಿ-ಸಾಮರ್ಥ್ಯ ಇವು ತಲೆಮಾರುಗಳಿಗೆ ಸ್ಫೂರ್ತಿಯ ವಿಷಯ. ನಿಮ್ಮ ಪ್ರತಿಸ್ಪರ್ಧಿ ಎಂದು ಕರೆಸಿಕೊಳ್ಳಲು ನನಗೆ ಹೆಮ್ಮೆ. ನಿವೃತ್ತ ಜೀವನ ಉತ್ಕೃಷ್ಟವಾಗಿರಲಿ" ಎಂದು ಹಾರೈಸಿದರೆ, ಮತ್ತೋರ್ವ ಟೆನಿಸ್ ದಂತಕಥೆ ಫೆಡರರ್, "ನಂಬಲಸಾಧ್ಯವಾದ ನಿಮ್ಮ ವೃತ್ತಿಜೀವನಕ್ಕೆ ಹೃತ್ಪೂರ್ವಕ ಅಭಿನಂದನೆಗಳು; ನಿಮಗೆದುರಾಗಿ ಆಡುವುದೇ ಒಂದು ವಿಶೇಷವಾಗಿತ್ತು. ಅಂಥ ಹಲವಾರು ಸ್ಮರಣೀಯ ಕ್ಷಣಗಳು ನನ್ನ ಸ್ಮೃತಿಪಟಲದಲ್ಲಿ ಹಸಿರಾಗಿರಲಿವೆ" ಎಂದಿದ್ದಾರೆ. ಇದು ಅಗ್ರಮಾನ್ಯ ಕ್ರೀಡಾಪಟುಗಳ ಹಿರಿಮೆ, ಹೃದಯವೈಶಾಲ್ಯ ಮತ್ತು ಕ್ರೀಡಾಸ್ಫೂರ್ತಿಗೆ ದ್ಯೋತಕ.

1986ರ ಜೂನ್ 3ರಂದು ಸ್ಪೇನ್‌ನ ಮ್ಯಾನಕೋರ್‌ನಲ್ಲಿ ಜನಿಸಿದ ನಡಾಲ್, 3 ವರ್ಷದವರಿರುವಾಗಲೇ ಟೆನಿಸ್‌ನೆಡೆಗೆ ಆಕರ್ಷಿತರಾಗಿ, 8 ವರ್ಷದವರಿರುವಾಗ ಸ್ಪೇನ್‌ನಲ್ಲಿ ನಡೆದ 12ರ ಹರೆಯದ ಕೆಳಗಿನವರ ಚಾಂಪಿಯನ್‌ಷಿಪ್ ಗೆದ್ದು ಎಲ್ಲರ ಹುಬ್ಬೇರುವಂತೆ ಮಾಡಿದರು. 14ನೇ ವಯಸ್ಸಿಗೆ, ಅಂದರೆ 2001ರಲ್ಲಿ ಜೂನಿಯರ್ ವಿಭಾಗದಲ್ಲಿ ವೃತ್ತಿಪರ ಟೆನಿಸ್‌ಗೆ ಪದಾರ್ಪಣೆ ಮಾಡಿ, ಒಂದಿಡೀ ವೃತ್ತಿಜೀವನದಲ್ಲಿ 22 ಗ್ರ್ಯಾಂಡ್ ಸ್ಲ್ಯಾಮ್, 92 ಎಟಿಪಿ ಪ್ರಶಸ್ತಿಗಳನ್ನು ಗೆದ್ದರು, 'ಆವೆಮಣ್ಣಿನ ಅಂಕಣದ ರಾಜ' ಎಂದು ಖ್ಯಾತರಾದರು. 2009 ಮತ್ತು 2022ರಲ್ಲಿ ಆಸ್ಟ್ರೇಲಿಯಾ ಓಪನ್, 14 ಬಾರಿ ಫ್ರೆಂಚ್ ಓಪನ್, 2008 ಮತ್ತು 2010ರಲ್ಲಿ ವಿಂಬಲ್ಡನ್, 2010, 2013, 2017 ಮತ್ತು 2019ರಲ್ಲಿ ಯುಎಸ್ ಓಪನ್ ಜಯಿಸಿದ್ದು, 2008ರ ಒಲಿಂಪಿಕ್ಸ್‌ನಲ್ಲಿ ಸಿಂಗಲ್ಸ್ ವಿಭಾಗದಲ್ಲಿ ಮತ್ತು 2016ರ ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ವಿಭಾಗದಲ್ಲಿ ಚಿನ್ನದ ಪದಕ, 2004, 2009, 2011 ಮತ್ತು 2019ರಲ್ಲಿ ಡೇವಿಸ್ ಕಪ್ ಗೆದ್ದಿದ್ದು... ಅಬ್ಬಾ, ನಡಾಲ್ ಸಾಧನೆಯದ್ದೇ ಒಂದು ಗಮ್ಮತ್ತು! ಆವೆಮಣ್ಣಿನ ಅಂಕಣದಲ್ಲಿ ಸತತವಾಗಿ 81 ಪಂದ್ಯಗಳನ್ನು ನಡಾಲ್ ಗೆದ್ದಿರುವುದು, ಓಪನ್ ಟೆನಿಸ್ ಯುಗದಲ್ಲಿ ಸಾರ್ವಕಾಲಿಕ ದಾಖಲೆ. ಬರೋಬ್ಬರಿ 1463 ದಿನಗಳ ಕಾಲ ವಿಶ್ವ ಎಟಿಪಿ ರ್ಯಾಂಕಿಂಗ್‌ನಲ್ಲಿ ಅಗ್ರಶ್ರೇಣಿಯ ಆಟಗಾರನಾಗಿ ಮೆರೆದವರು, ವೃತ್ತಿಜೀವನದಲ್ಲಿ ಒಟ್ಟು 1080 ಪಂದ್ಯಗಳನ್ನು ಗೆದ್ದು 227 ಪಂದ್ಯಗಳನ್ನು ಸೋತವರು ಈ ನಡಾಲ್.

ವಿಶ್ವದ ಟೆನಿಸ್ ಆಟಗಾರರ ಪಟ್ಟಿಯಲ್ಲಿ 6ನೇ ಶ್ರೀಮಂತ ತಾರೆ ಎನಿಸಿಕೊಂಡಿರುವ ನಡಾಲ್, ಗೆಲುವಿನ ಬಹುಮಾನವಾಗಿ 135 ಮಿಲಿಯನ್ ಡಾಲರ್ (ಸುಮಾರು 1,140 ಕೋಟಿ ರುಪಾಯಿ) ಹಣ ಗಳಿಸಿರುವುದಲ್ಲದೆ, ವಿವಿಧ ಕಂಪನಿಗಳ ರಾಯಭಾರಿಯಾಗುವ ಮೂಲಕ ಸುಮಾರು 23 ಮಿಲಿಯನ್ ಡಾಲರ್ (ಸುಮಾರು 194 ಕೋಟಿ ರುಪಾಯಿ) ಹಣವನ್ನು ದಕ್ಕಿಸಿಕೊಂಡಿದ್ದಾರೆ, ರಿಯಲ್ ಎಸ್ಟೇಟ್ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿದ್ದಾರೆ. ಪ್ರಸಕ್ತ ವರ್ಷ ಅವರ ಮೌಲ್ಯ 225 ಮಿಲಿಯನ್ ಡಾಲರ್- ಅಂದರೆ ಸುಮಾರು 1,900 ಕೋಟಿ ರುಪಾಯಿಗಳು! 2008ರಲ್ಲಿ ತಾವು ಸ್ಥಾಪಿಸಿದ 'ರಾಫೇಲ್ ನಡಾಲ್ ಫೌಂಡೇಷನ್' ಮೂಲಕ ಸ್ಪೇನ್ ಮತ್ತು ಭಾರತದ 10,000ಕ್ಕೂ ಹೆಚ್ಚಿನ ಬಡ, ಅವಕಾಶವಂಚಿತ ಮಕ್ಕಳ ಶಿಕ್ಷಣ ಮತ್ತು ಕ್ರೀಡಾಸಕ್ತಿ ಪೂರೈಸಲು ನೆರವಾಗುತ್ತ, ತಮ್ಮ ಹೃದಯ ಶ್ರೀಮಂತಿಕೆಯಿಂದಲೂ ಹೆಸರಾಗಿದ್ದಾರೆ. ವಿವಿಧ ಸಮಾಜಮುಖಿ ಕಾರ್ಯಕ್ರಮಗಳಿಗೆ ಈ ಫೌಂಡೇಷನ್ ಕಳೆದ ವರ್ಷ ವ್ಯಯಿಸಿದ ಹಣ 75 ಕೋಟಿ ರುಪಾಯಿಗಳು. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎನ್ನುವಂತೆ ಸಮಾಜದಿಂದ ಗಳಿಸಿದ್ದನ್ನು ಸಮಾಜದ ಅಶಕ್ತರಿಗೆ, ಅವಕಾಶ ವಂಚಿತರಿಗೆ ಹಂಚುತ್ತಿರುವ ನಡಾಲ್ ನಿಜಾರ್ಥದಲ್ಲಿ ಜನಾನುರಾಗಿ, ಜನರ ಹೃದಯಸಾಮ್ರಾಟ! ಸುದೀರ್ಘ 22 ವರ್ಷಗಳವರೆಗಿನ ನಡಾಲ್‌ರ ಟೆನಿಸ್ ವೃತ್ತಿಜೀವನವು ಹತಾಶೆ, ನೋವು, ಅನೇಕ ಏಳು- ಬೀಳುಗಳಿಂದ ಕೂಡಿತ್ತು ಎಂಬುದೂ ಕಟುಸತ್ಯವೇ. ಆಗೀಗ ಎದುರಾದ ಗಾಯದ ಸಮಸ್ಯೆಯಿಂದಾಗಿ ಅವರು ಹಲವಾರು ಪ್ರತಿಷ್ಠಿತ ಟೂರ್ನಿಗಳಿಂದ ಹೊರಗುಳಿಯಬೇಕಾಯಿತು. 2018ರಲ್ಲಾದ ಮಣಿಗಂಟಿನ ಗಾಯದ ಸಮಸ್ಯೆಯಿಂದಾಗಿ ಆಡಲಾಗಲಿಲ್ಲ, 2021ರಲ್ಲಾದ ಕಾಲಿನ ಗಾಯ ಅವರನ್ನು ಹೈರಾಣಾಗಿಸಿತ್ತು. 2023ರ ಆಸ್ಟ್ರೇಲಿಯಾ ಓಪನ್ ಸಮಯದಲ್ಲಿ ಬೆನ್ನಿನ ಕೆಳಭಾಗದ ನೋವಿಗೆ ತುತ್ತಾದರು, ಆ ವರ್ಷ ತಮ್ಮ ಅಚ್ಚುಮೆಚ್ಚಿನ ಫ್ರೆಂಚ್ ಓಪನ್ ಟೂರ್ನಿಯಲ್ಲೂ ಆಡಲಾಗಲಿಲ್ಲ. ನಂತರ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಗಾಯದ ಸಮಸ್ಯೆಯಿಂದಾಗಿ ಕಳೆದ 3 ತಿಂಗಳಿಂದ ಸ್ಪರ್ಧಾತ್ಮಕ ಪಂದ್ಯಗಳಿಂದ ದೂರವುಳಿದಿದ್ದ ನಡಾಲ್‌ಗೆ ಗೌರವಾರ್ಥವಾಗಿ ಸ್ಪೇನ್‌ನ ಡೇವಿಸ್ ಕಪ್ ತಂಡದಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಅಷ್ಟೆಲ್ಲಾ ಗಾಯ-ಅನಾರೋಗ್ಯ-ಅಡೆತಡೆಯ ನಡುವೆಯೂ ಪುಟಿದೆದ್ದು ಸರ್ವಶ್ರೇಷ್ಠ ಪ್ರದರ್ಶನ ನೀಡಿದ ಕಾರಣಕ್ಕೆ ನಡಾಲ್ ವಿಶಿಷ್ಟರಾಗಿ-ವಿಭಿನ್ನರಾಗಿ ನಿಲ್ಲುತ್ತಾರೆ. ಛಲಬಿಡದ ತ್ರಿವಿಕ್ರಮನಂತೆ ಅಂಕಣದಲ್ಲಿ ಎದುರಾಳಿಯನ್ನು ಸದೆಬಡಿವ ಅವರ ವೈಖರಿಯು ಸಾಧನೆಗೆ ಹಪಹಪಿಸುವ ಉದಯೋನ್ಮುಖ ಆಟಗಾರರಿಗೆ ಮಾದರಿ. ನಡಾಲ್‌ರ ಚುರುಕು ಆಟವನ್ನು ಟೆನಿಸ್ ಅಂಕಣ ಮತ್ತು ಕ್ರೀಡಾಭಿಮಾನಿಗಳು ಮಿಸ್ ಮಾಡಿಕೊಳ್ಳುವುದಂತೂ ಖರೆ! ಸಾರ್ಥಕ ನಿವೃತ್ತ ಜೀವನ ನಡಾಲ್‌ರಿಗೆ ಒದಗಲಿ ಎಂದು ಹಾರೈಸೋಣ.

(ಲೇಖಕರು ಸಾಫ್ಟ್‌ವೇರ್ ಉದ್ಯೋಗಿ)

ಭಟ್ಟರ್ ಸ್ಕಾಚ್

● ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಹಿಂದಿನ ಯುಗದಲ್ಲಿ ಕೋಪ ಬಂದರೆ ಶಾಪ ಕೊಡುತ್ತಿದ್ದರಂತೆ, ಈ ಯುಗದಲ್ಲಿ?
- ಈಗಲೂ ಶಾಪ ಕೊಡ್ತಾರೆ, ಆದರೆ ವರ್ಕ್ ಆಗಲ್ಲ!

● ಎಲ್.ವಿ.ಸತೀಶ, ಮೈಸೂರು
ಭಟ್ರೇ, ಸಂಬಂಧಗಳ ನಡುವೆ ಬೆಂಕಿ ಹಚ್ಚುವವರನ್ನು ಏನಂತ ಕರೆಯಬಹುದು?
- ಲೈಟರ್!

● ಮಹಾನಂದ ಪಾಟೀಲ, (ಇಮೇಲ್ ಮೂಲಕ)
ಭಟ್ರೇ, ಸಚಿವ ಮಧು ಬಂಗಾರಪ್ಪರ ಕನ್ನಡ ಸುಧಾರಿಸುವುದು ಯಾವಾಗ?
- ಈ ಪ್ರಶ್ನೆಗೆ ಉತ್ತರ ಆ ಕನ್ನಡಾಂಬೆಗೂ ಗೊತ್ತಿರಲಿಕ್ಕಿಲ್ಲ!

● ರಮೇಶ ಗೌಡ, ಮಳವಳ್ಳಿ
ಭಟ್ರೇ, ನಿಖಿಲ್ ಕುಮಾರಸ್ವಾಮಿ ಮುಂದಿನ ಹೆಜ್ಜೆ ಏನು?
- ಯಾವ ಹೆಜ್ಜೆಯನ್ನೂ ಇಡದಿರುವುದು!

● ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, ಈ ಸಲದ ಪುರುಷ ದಿನಾಚರಣೆ ವಿಶೇಷ ಏನು ಅಂತ ಹೇಳಬಹುದಾ?
- ಈ ಸಲದ ಪುರುಷ ದಿನಾಚರಣೆ ಶೌಚಾಲಯದ ದಿನವೇ ಬಂದಿದ್ದು!

● ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ಅಪ್ಪ-ಅಮ್ಮನಿಲ್ಲದ ಬಡವರ ಮಕ್ಕಳೂ ರೂಲ್ ಮಾಡ ಬೇಕು ಅಂತ ಪ್ರದೀಪ್ ಈಶ್ವರ್ ಹೇಳಿದ್ದಾರಲ್ಲ?
- ತನ್ನನ್ನೂ ಮಂತ್ರಿ ಮಾಡಿ ಅಂತ ಸೂಚ್ಯವಾಗಿ ಹೇಳಿದ್ದಾರಷ್ಟೇ!

● ವೀರೇಶ ಬಡಿಗೇರ, ಕೆಂಗೇರಿ
ಭಟ್ರೇ, ಬಿಡಿಎ ಮಾನ್ಯತೆ ಪಡೆದ ನಿವೇಶನ ಅಂತ ಜಾಹೀರಾತು ಕೊಡ್ತಾರಲ್ಲ?
- ಹೂಂ.. ಇನ್ನು ಮುಂದೆ 'ಇದು ವಕ್ಫ್ ಬೋರ್ಡ್ ಆಸ್ತಿ ಅಲ್ಲ' ಅಂತ ಜಾಹೀರಾತು ನೀಡಿದರಾಯಿತು!

ಮನಸ್ಸಿನ ಬಡತನಕ್ಕೆ ಪಡಿತರ ಉಂಟೇ?

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಈ ವಿಚಾರ ನಿಮಗೆ ಗೊತ್ತೇ ?
ಏಳು ಕೋಟಿ ಕನ್ನಡಿಗರಲ್ಲಿ ಶೇ.65ಕ್ಕಿಂತ ಹೆಚ್ಚು ಮಂದಿ ಒಪ್ಪೊತ್ತು ಊಟಕ್ಕೆ ಪರದಾಡುತ್ತಿದ್ದಾರೆ ! ಇಷ್ಟೂ ಮಂದಿಯ ಕುಟುಂಬದ ತಿಂಗಳ ಆದಾಯ 10 ಸಾವಿರ ದಾಟಿಲ್ಲ. ವಾರ್ಷಿಕ ಆದಾಯ 1.20 ಲಕ್ಷಕ್ಕಿಂತ ಕಡಿಮೆ ಇರುವ ಕಾರಣ ದಿಂದಲೇ ಇವರು ಬಿಪಿಎಲ್ ಕಾರ್ಡ್‌ಗೆ ಅರ್ಹತೆ ಪಡೆದಿದ್ದಾರೆ. ಅಂದರೆ ಇವರು ಸರಕಾರಿ ಅನ್ನದ ಋಣದಲ್ಲಿದ್ದಾರೆ. ಇದನ್ನು ಸಾಬೀತು ಮಾಡಲು ನಮ್ಮ ಸರಕಾರದ ಬಳಿ ದಾಖಲೆಗಳಿವೆ !

ಆರ್ಥಿಕವಾಗಿ ಸಂಕಷ್ಟದಲ್ಲಿರುವವರ ವೈದ್ಯಕೀಯ ವೆಚ್ಚ ಭರಿಸಲು ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ನೆರವು ನೀಡುವ ಕ್ರಮವಿದೆ. ಆದರೆ ಇದಕ್ಕಿರುವ ಷರತ್ತು ಎಂದರೆ ಸಹಾಯ ಯಾಚಿಸುವ ಕುಟುಂಬಗಳ ವಾರ್ಷಿಕ ಆದಾಯ 30 ಸಾವಿರ ರು. ದಾಟುವಂತಿಲ್ಲ. ಅಂದರೆ ಈ ಕುಟಂಬದ ದಿನಗಳಿಕೆ 83 ರು. ಒಳಗಿರಬೇಕು. ಸಿಎಂ ಸಹಿ ಬಿದ್ದು ಪರಿಹಾರಕ್ಕೆ ಆದೇಶ ನೀಡಿದ ಹೊರತಾಗಿಯೂ, ಕುಟುಂಬದ ವಾರ್ಷಿಕ ಆದಾಯ 30 ಸಾವಿರ ರು. ಒಳಗಿದೆ ಎಂದು ತಹಶೀಲ್ದಾರ್ ಆದಾಯ ಪ್ರಮಾಣ ಪತ್ರ ನೀಡದ ಹೊರತಾಗಿ ಹಣಕಾಸು ಇಲಾಖೆ ಪರಿಹಾರ ಧನ ಮಂಜೂರು ಮಾಡುವುದಿಲ್ಲ! ಅಂದರೆ ಸರಕಾರದ ಪ್ರಕಾರ ದಿನಕ್ಕೆ ಕೇವಲ 83 ರು. ಸಂಪಾದಿಸಿದರೂ ನಾಲ್ವರು ಸದಸ್ಯರ ಕುಟುಂಬವೊಂದು ಈ ಸಮಾಜದಲ್ಲಿ ಬದುಕಲು ಸಾಧ್ಯವಿದೆ.

ಇನ್ನೊಂದು ವಿಷಯ ನಿಮಗೆ ಗೊತ್ತಾ?
ತಮಿಳುನಾಡು ಬಳಿಕ ಕರ್ನಾಟಕ ದೇಶದ ಎರಡನೇ ಅತಿ ಶ್ರೀಮಂತ ರಾಜ್ಯ. 2022-23ರ ಸಾಲಿನಲ್ಲಿ ಕನ್ನಡಿಗರ ಸರಾಸರಿ ತಲಾ ಆದಾಯ 3.31 ಲಕ್ಷ ರು.ಗಳು. ಈಗ ಇದು ಇನ್ನಷ್ಟೂ ಹೆಚ್ಚಾಗಿರಬಹುದು. ಮುಂಬೈ (92) ಮತ್ತು ದೆಹಲಿ (68) ಬಳಿಕ ಅತಿ ಹೆಚ್ಚು ಶತಕೋಟಿಪತಿಗಳಿರುವುದು ಕೂಡ ನಮ್ಮ ಬೆಂಗಳೂರಿನಲ್ಲಿ (27)! ಈ ಹೇಳಿಕೆಗೂ ಅಧಿಕೃತ ದಾಖಲೆಗಳಿವೆ. ಸರಕಾರಿ ಸಂಸ್ಥೆಗಳೇ ಕೊಟ್ಟಿರುವ ಮಾಹಿತಿ ಇದು ! ಈಗ ಇವುಗಳಲ್ಲಿ ಯಾವುದು ಸತ್ಯ, ಯಾವುದು ಸುಳ್ಳು ?.

ವಿಶ್ವ ಸಂಸ್ಥೆ ಬಡತನ ಸೂಚ್ಯಂಕದ ಇತ್ತೀಚಿಗಿನ ವರದಿ ಪ್ರಕಾರ ಭಾರತದಲ್ಲಿ ಕಡುಬಡವರ ಸಂಖ್ಯೆ ಈಗ ಕೇವಲ 3.44 ಕೋಟಿ. ಮುಂದಿನ ಕೆಲವೇ ವರ್ಷಗಳಲ್ಲಿ ಭಾರತ ಮಧ್ಯಮ ವರ್ಗದ ಜನರನ್ನು ಹೊಂದಿದ ದೇಶವಾಗಲಿದೆ. ನಮ್ಮ ನೀತಿ ಆಯೋಗದ ವರದಿ ಪ್ರಕಾರ ದೇಶದ ಕಡು ಬಡವರ ಸಂಖ್ಯೆ 7.5 ಕೋಟಿಗಿಂತ ಕಡಿಮೆ ಇದೆ. ಹಾಗಿದ್ದರೆ ನಾನಾ ರಾಜ್ಯಗಳಲ್ಲಿ ಬಿಪಿಎಲ್ ಹೆಸರಿನಲ್ಲಿ ಪಡಿತರ ಪಡೆಯುತ್ತಿರುವವರು ಯಾರು ? ವಿಶ್ವಸಂಸ್ಥೆಯ ವರದಿ ಉತ್ಪ್ರೇಕ್ಷೆ ಇರಬಹುದು. ಆದರೆ ನಮ್ಮ ಬಡವರ ಸಂಖ್ಯೆಯೂ ಇಷ್ಟೊಂದಿಲ್ಲ ಎನ್ನುವುದು ಸ್ಪಷ್ಟ.

ದೈನೇಸಿತನ ಬಿಚ್ಚಿಟ್ಟ ಪಡಿತರ ಚೀಟಿ

ಪಡಿತರ ಚೀಟಿಯ ಅವಾಂತರಗಳನ್ನು ಬಿಚ್ಚಿಡುತ್ತಾ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ. ಎಚ್. ಮುನಿಯಪ್ಪ ನೀಡಿರುವ ಮಾಹಿತಿಗಳು ನಮ್ಮ 'ಕಡುಬಡತನ'ವನ್ನು ಮಾತ್ರವಲ್ಲ, ಮಾನಸಿಕ ದೈನೇಸಿತನವನ್ನೂ ತೆರೆದಿಟ್ಟಿವೆ. ರಾಜ್ಯದಲ್ಲಿ ಅಂತ್ಯೋದಯ, ಬಿಪಿಎಲ್, ಎಪಿಎಲ್ ಕಾರ್ಡುಗಳು ಸೇರಿ ಸುಮಾರು 1,25,74,521 ಪಡಿತರ ಚೀಟಿಗಳಿವೆ. ಈ ಕಾರ್ಡುಗಳಲ್ಲಿ ಸುಮಾರು 4,35,33,099 ಕುಟುಂಬ ಸದಸ್ಯರಿದ್ದಾರೆ. ಅಂದರೆ ರಾಜ್ಯದ ಜನಸಂಖ್ಯೆಯ ಶೇ.65ಕ್ಕಿಂತ ಹೆಚ್ಚು ಜನರ ಹೆಸರು ಈ ಕಾರ್ಡುಗಳಲ್ಲಿವೆ. ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಬಿಪಿಎಲ್ ಪಡಿತರ ಚೀಟಿ ಹೊಂದಿದ 'ಹೆಗ್ಗಳಿಕೆ' ನಮ್ಮದು. ಕೇರಳ (ಶೇ.45.59), ತಮಿಳುನಾಡು (ಶೇ.48.81), ತೆಲಂಗಾಣ (ಶೇ.53.93), ಆಂಧ್ರಪ್ರದೇಶ (ಶೇ63.73) ಮಹಾರಾಷ್ಟ್ರ (ಶೇ.58.47) ಸೇರಿ ಇನ್ನೆಲ್ಲೂ ಇಷ್ಟೊಂದು ಸಂಖ್ಯೆಯ ಕಾರ್ಡುಗಳಿಲ್ಲ.

ಕಾರ್ಡ್‌ದಾರರ ಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ಸರಕಾರ ಮತ್ತೊಮ್ಮೆ 'ಅನರ್ಹ'ರನ್ನು ಪತ್ತೆ ಮಾಡುವ ಕಾರ್ಯಕ್ಕೆ ಕೈ ಹಾಕಿದೆ. ಹಾಲಿ ಪಡಿತರದಾರರಲ್ಲಿ ಸುಮಾರು 98,458 ಮಂದಿ ಆದಾಯ ತೆರಿಗೆ ಪಾವತಿದಾರರು. ಕುಟುಂಬ ತಂತ್ರಾಂಶದ ಪ್ರಕಾರ ಸುಮಾರು 10,09,478 ಕಾರ್ಡ್‌ದಾರರ ಆದಾಯ 1.20 ಲಕ್ಷಕ್ಕಿಂತ ಮೇಲಿದೆ. ಸುಮಾರು 2,75,667 ಮಂದಿ ಆರು ತಿಂಗಳಿನಿಂದ ಪಡಿತರ ಅಂಗಡಿಗಳಿಗೆ ಕಾಲಿಟ್ಟಿಲ್ಲ. ಇವರೆಲ್ಲರೂ ಸೇರಿ ಸುಮಾರು 13,87,639 ಪಡಿತರ ಕಾರ್ಡ್‌ಗಳನ್ನು ರದ್ದು ಮಾಡಲು ಮುಂದಾಗುತ್ತಿದ್ದಂತೆಯೇ ಎಲ್ಲೆಡೆಯಿಂದ 'ಬಡವರಿಗೆ' ಅನ್ಯಾಯವಾಗುತ್ತಿದೆ ಎಂಬ ಕೂಗು ಕೇಳಿ ಬಂತು. ಅಕ್ಕಿ ಭಾಗ್ಯದ ಭರವಸೆಯ ಮೂಲಕವೇ ಅಧಿಕಾರಕ್ಕೆ ಬಂದ ಸರಕಾರ ಮತ್ತೆ ಎಂದಿನಂತೆ ಯಥಾಸ್ಥಿತಿಗೆ ಮುಂದಾಗಿದೆ.

ಭರವಸೆಗಳ ಪರಂಪರೆ

ಈ ಕಸರತ್ತುಗಳು ಇಂದು ನಿನ್ನೆಯದ್ದಲ್ಲ. 1997ರಲ್ಲಿ ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಕಿತ್ತು ಹಾಕಿ ನಿರ್ದಿಷ್ಟ ಪಡಿತರ ವಿತರಣೆ ವ್ಯವಸ್ಥೆ (ಡಿಪಿಡಿಎಸ್)ಯನ್ನು ಜಾರಿಗೊಳಿಸಿದ ದಿನದಿಂದಲೇ ಪಡಿತರ ಚೀಟಿಗೋಸ್ಕರ ನೂಕುನುಗ್ಗಲು ಆರಂಭವಾಗಿತ್ತು. ಒಂದೂವರೆ ದಶಕದ ಹಿಂದೆ ಪಡಿತರ ಚೀಟಿ ಎಂದರೆ ಸೀಮೆಎಣ್ಣೆಗಷ್ಟೇ ಮೀಸಲಾದ ಪರವಾನಿಗೆ ಪತ್ರವಾಗಿತ್ತು. ಆಗಲೂ ಒಂದೆರಡು ಕೆಜಿ ಅಕ್ಕಿ, ಗೋಧಿ ಮತ್ತಿತರ ದವಸ-ಧಾನ್ಯಗಳು, ರಿಯಾಯಿತಿ ದರದ ಕೋರ ಬಟ್ಟೆ ದೊರೆಯುತ್ತಿತ್ತು. ಆದರೆ ಜನರಿಗೆ ಆಹಾರದ ಬರವಿರಲಿಲ್ಲ. ತಮಗೆ ಬೇಕಾದ ಅಕ್ಕಿ, ಜೋಳ, ರಾಗಿ ಮತ್ತಿತರ ಆಹಾರಧಾನ್ಯಗಳನ್ನು ತಾವೇ ಬೆಳೆಯುತ್ತಿದ್ದರು. ಮಾರುಕಟ್ಟೆಯಲ್ಲಿ ದೊರೆಯುತ್ತಿದ್ದ ಅಕ್ಕಿಯ ಬೆಲೆ ಏಳೆಂಟು ರೂಪಾಯಿಗಳಿಗಿಂತ ಜಾಸ್ತಿಯಿರಲಿಲ್ಲ.

ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೊಳಿಸಿದ ಹಸಿರು ಪಡಿತರ ಚೀಟಿ ಅವರಿಗೆ ಸಾಕಷ್ಟು ಜನಪ್ರಿಯತೆಯನ್ನು ತಂದುಕೊಟ್ಟಿತ್ತು. ಈ ಚೀಟಿದಾರರು ಕೇಸರಿ ಕಾರ್ಡಿಗಿಂತ ಹೆಚ್ಚಿನ ಪ್ರಮಾಣದ ಪಡಿತರ ಪಡೆಯುತ್ತಿದ್ದರು. ಇದರೊಂದಿಗೆ ಪಡಿತರ ದಾರರ ನಡುವೆಯೇ ಶ್ರೀಮಂತರು ಮತ್ತು ಬಡವರೆಂಬ ಎರಡು ವರ್ಗ ಸೃಷ್ಟಿಯಾಯಿತು. ಏರುತ್ತಿರುವ ಪಡಿತರ ದಾರರ ಸಂಖ್ಯೆಯನ್ನು ಕಡಿತಗೊಳಿಸುವ ಉದ್ದೇಶದಿಂದ ಸರಕಾರ ಆಗಾಗ ಬಣ್ಣ ಬದಲಾಯಿಸುವ ಕೆಲಸಕ್ಕೆ ಕೈ ಹಾಕಿತು. ಕೇಸರಿ, ಹಳದಿ ಕಾರ್ಡುಗಳು ಕಣ್ಮರೆಯಾಗ ತೊಡಗಿದವು. ಪಡಿತರ ಸೌಲಭ್ಯವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಜನರು ಬಡವರಾಗುವ ಪ್ರಯತ್ನ ನಡೆಸಿದರು.

ಈ ಮಧ್ಯೆ ಕೇಂದ್ರ ಸರಕಾರ ರಾಜೀವ್ ಗಾಂಧಿ ಸರಕಾರ ಅಂತ್ಯೋದಯ ಅನ್ನ ಯೋಜನೆಯಡಿ ಹೆಚ್ಚಿನ ಸವಲತ್ತು ಉಳ್ಳ ಪಡಿತರ ಯೋಜನೆ ಆರಂಭಿಸಿತು. ಈ ಯೋಜನೆಗೆ ಸದಸ್ಯರಾಗಲು ಉಳ್ಳವರ ನಡುವೆಯೇ ಪೈಪೋಟಿ ಆರಂಭವಾಯಿತು. ಸವಲತ್ತಿನ ದುರುಪಯೋಗ ಹೆಚ್ಚಿದಾಗ ಕಾರ್ಡುಗಳ ಬದಲು ಕೂಪನ್‌ಗಳನ್ನು ಹಂಚಲಾಯಿತು. ಇವು ಖಾಲಿಯಾದಾಗ ಬದಲಿ ಕಾರ್ಡ್ ನೀಡುತ್ತೇವೆಂದು ಹೇಳಿ ವರ್ಷಗಟ್ಟಲೆ ಯಾವ ಕಾರ್ಡುಗಳನ್ನೂ ನೀಡದೆ ಸತಾಯಿಸುವ ಪರಂಪರೆ ಆರಂಭವಾಯಿತು.

90ರ ದಶಕದ ನಂತರ ಪಡಿತರ ವಿಷಯ ಎಲ್ಲ ರಾಜಕೀಯ ಪಕ್ಷಗಳಿಗೂ ವೋಟು ಗಿಟ್ಟಿಸುವ ಸುಲಭ ತಂತ್ರವಾಯಿತು. ಬಿ.ಎಸ್. ಯಡಿಯೂರಪ್ಪ ಅವರು ಮೊದಲ ಬಾರಿಗೆ ಎರಡು ವಾರಗಳ ಕಾಲ ಸಿಎಂ ಆದ ಕಾಲಕ್ಕೆ ನೀಡಿದ ಮೊದಲ ಭರವಸೆ ಪಡಿತರ ಚೀಟಿ ಸಮಸ್ಯೆ ನಿವಾರಣೆ. ಸದ್ಯಕ್ಕೆ ಯಾವ ರಾಜಕೀಯ ಪಕ್ಷವೂ ಪಡಿತರದ ವಿಚಾರದಲ್ಲಿ ಹಿಂದೇಟು ಹಾಕುವಂತಿಲ್ಲ. ಆದರೆ 70ರ ದಶಕದಲ್ಲಿ ಕೇಂದ್ರ ಸರಕಾರದ ನೀಡುತ್ತಿದ್ದ ವಾರ್ಷಿಕ ಆಹಾರ ಸಬ್ಸಿಡಿ ಪ್ರಮಾಣ 10 ಸಾವಿರ ಕೋಟಿ ರೂ.ಗಳ ಒಳಗಿತ್ತು. ಈಗ ರಾಜ್ಯ ಸರಕಾರವೇ ವರ್ಷಕ್ಕೆ 60 ಸಾವಿರ ಕೋಟಿಗಳನ್ನು ಇದಕ್ಕಾಗಿ ವ್ಯಯಿಸುತ್ತಿದೆ. ಒಂದೆಡೆ ಬಡವರ ಪರ ಸರಕಾರ ಎಂಬ ಭಾವನೆ ಉಳಿಸಿಕೊಳ್ಳಬೇಕು, ಇನ್ನೊಂದೆಡೆ ಸಬ್ಸಿಡಿಯ ಮೊತ್ತ

ವನ್ನು ನಿಯಂತ್ರಿಸಬೇಕು. ಈ ತಾಕಲಾಟಗಳ ನಡುವೆ ಸಿಲುಕಿದ ಸರಕಾರ ಬಡವರ ಸಂಖ್ಯೆಯನ್ನೇ ಇಳಿಸುವ ಯತ್ನಕ್ಕೆ ಕೈ ಹಾಕಿದೆ. ಪಡಿತರ ಅರ್ಹರಿಗೆ ಮಾತ್ರ ದೊರೆಯಬೇಕೆಂಬ ನೆಪದಿಂದ ಹತ್ತಾರು ನಿಯಮಗಳನ್ನು ರೂಪಿಸುತ್ತಿದೆ. ಆದರೆ ಪಡಿತರದಾರರ ಸಂಖ್ಯೆ ಇಳಿಸಲು ಸಾಧ್ಯವಾಗುತ್ತಿಲ್ಲ.

ಅನರ್ಹರದ್ದೇ ಸಿಂಹಪಾಲು

ಸ್ವಯಂ ಸೇವಾ ಸಂಘಟನೆಯೊಂದು ನಡೆಸಿದ ಸಮೀಕ್ಷೆ ಪ್ರಕಾರ ಪಡಿತರ ಸೌಲಭ್ಯಕ್ಕೆಂದು ಸರಕಾರ ಬಿಡುಗಡೆ ಮಾಡುವ ಪ್ರತಿ 100 ರೂ. ಹಣದಲ್ಲಿ 28 ರು. ಕಾಳಸಂತೆ ಕೋರರ ಪಾಲಾಗುತ್ತಿದೆ. 31 ರೂ. ಮಧ್ಯವರ್ತಿಗಳ ಕೈ ಸೇರುತ್ತಿದೆ. 16 ರು. ಪಡಿತರ ನಿರ್ವಹಣೆಗೆಂದು ವ್ಯಯವಾಗುತ್ತಿದೆ. ಕೇವಲ 25 ರು. ಫಲಾನುಭವಿಗಳಿಗೆ ಸಿಗುತ್ತಿದೆ. ಅಂದರೆ 60 ಸಾವಿರ ಕೋಟಿ ರೂ. ಅನುದಾನದಲ್ಲಿ 15 ಸಾವಿರ ಕೋಟಿ ರೂ.ಗಳ ಸೌಲಭ್ಯವಷ್ಟೇ ಬಡಜನರಿಗೆ ಲಭ್ಯವಾಗುತ್ತಿದೆ. ನಮ್ಮ ಪಡಿತರ ವ್ಯವಸ್ಥೆಗೆ ಕಾಯಕಲ್ಪ ಸಿಗಬೇಕಾದರೆ ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಮರು ಜಾರಿಗೊಳಿಸುವುದೊಂದೇ ಮಾರ್ಗ ಎಂದು ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಹೇಳಿದ್ದರು. ಈ ಮಾತು ಇಂದಿಗೂ ನಿಜ. ಪಡಿತರ ಚೀಟಿಗೆ ಪೈಪೋಟಿ ನಡೆಸುವುದು ನಿಲ್ಲಬೇಕಾದರೆ ಎಲ್ಲರನ್ನೂ ಪಡಿತರದಾರರ ಸಾಲಿಗೆ ಸೇರಿಸುವುದೇ ಉತ್ತಮ ಮಾರ್ಗ. ಈಗ ನೀಡುತ್ತಿರುವ ಪಡಿತರ ಪ್ರಮಾಣವನ್ನು ತಗ್ಗಿಸಿದರೆ ದೇಶದ ಎಲ್ಲ ಕುಟುಂಬಕ್ಕೂ ಆಹಾರ ಸಾಮಗ್ರಿ ಪೂರೈಸಬಹುದು.

ಇಷ್ಟಕ್ಕೂ ನಮ್ಮಲ್ಲಿ ರೇಷನ್ ಕಾರ್ಡ್ ಎಂದರೆ ಪಡಿತರಕ್ಕೆ ಮೀಸಲಾದ ಚೀಟಿ ಅಷ್ಟೇ ಅಲ್ಲ, ಗುರುತಿನ ಚೀಟಿಯೂ ಹೌದು. ಗೃಹಲಕ್ಷ್ಮೀ ಯೋಜನೆ, ವಿವಿಧ ಸ್ಕಾಲರ್ ಶಿಪ್ ಯೋಜನೆಗಳು, ಉನ್ನತ ಶಿಕ್ಷಣದಲ್ಲಿ ಮೀಸಲು, ಉಚಿತ ವೈದ್ಯಕೀಯ ಸೌಲಭ್ಯ, ಡ್ರೈವಿಂಗ್ ಲೈಸೆನ್ಸ್, ಭೂ ದಾಖಲೆಗಳ ನೋಂದಣಿ, ಬ್ಯಾಂಕ್ ಖಾತೆ ಮುಂತಾದ ಹತ್ತು ಹಲವು ವ್ಯವಹಾರಗಳಿಗೆ ರೇಷನ್ ಕಾರ್ಡ್ ಪ್ರಮುಖ ದಾಖಲೆಯಾಗಿ ಬಳಕೆಯಾಗುತ್ತಿದೆ. ಬಹುಪಾಲು ಮಂದಿ ಗುರುತಿನ ಚೀಟಿ ಉದ್ದೇಶದಿಂದಲೇ ರೇಷನ್ ಕಾರ್ಡಿಗೆ ಅರ್ಜಿ ಹಾಕುತ್ತಿದ್ದಾರೆ. ಬೆಂಗಳೂರಿಗೆ ಅನ್ಯ ರಾಜ್ಯಗಳಿಂದ ವಲಸೆ ಬಂದವರ ಮೊದಲ ಆದ್ಯತೆ ಈ ಕಾರ್ಡು. ನೆರೆ ರಾಜ್ಯದಲ್ಲೂ ನಮ್ಮಲ್ಲೂ ಬಿಪಿಎಲ್ ಪಟ್ಟಿಗೆ ಸೇರಿದ ಅದೆಷ್ಟೋ ಮಂದಿ ಈ ನಗರದಲ್ಲಿದ್ದಾರೆ. ಭಾವಚಿತ್ರ ಸಹಿತ ಪಡಿತರ ಚೀಟಿ ವಿತರಣೆಗೆಂದೇ ರಾಜ್ಯ ಸರಕಾರ ಸಾವಿರಾರು ಕೋಟಿ ರು.ಗಳನ್ನು ವ್ಯಯಿಸುತ್ತಿದೆ.

ಇಷ್ಟಾದರೂ ಅದೆಷ್ಟೋ ಕಡು ಬಡವರಿಗೆ ಇನ್ನೂ ಪಡಿತರ ಸೌಲಭ್ಯಗಳು ದೊರೆತಿಲ್ಲ. ವಿಧವೆಯರು, ಕುಟುಂಬದ ಬೆಂಬಲವಿಲ್ಲದೆ ಒಬ್ಬಂಟಿಯಾಗಿರುವವರು ಬಿಪಿಎಲ್ ಕಾರ್ಡುಗಳಿಗಾಗಿ ಈಗಲೂ ಸರಕಾರಿ ಕಚೇರಿಗಳ ಬಾಗಿಲು ತಟ್ಟುತ್ತಿದ್ದಾರೆ. ಒಂದು ಕಾರ್ಡು ಕೊಡಿಸಿ ಎಂದು ಎಂಪಿ, ಎಂಎಲ್ಎ, ಕಾರ್ಪೊರೇಟರ್‌ಗಳಿಂದ ಹಿಡಿದು ಮರಿ ಪುಢಾರಿಗಳೆಲ್ಲರ ಕಾಲು ಹಿಡಿಯುವ ಮಂದಿ ಈಗಲೂ ಇದ್ದಾರೆ. ಕಾರ್ಡಿಗೋಸ್ಕರವೇ ಮಧ್ಯವರ್ತಿಗಳಿಗೆ 500ರೂ.ಗಳಿಂದ 5000 ರೂ. ಗಳವರೆಗೆ ಕಮಿಷನ್ ನೀಡುವವರಿದ್ದಾರೆ. ಆದರೆ ಸರಕಾರ ವರ್ಷಕ್ಕೊಂದೆರಡು ಬಾರಿ ಹೊಸ ಪಡಿತರ ಚೀಟಿಗೆ ಅರ್ಜಿ ಆಹ್ವಾನಿಸುತ್ತದೆ. ಸರ್ವರ್ ಸ್ಲೋ ನೆಪದಲ್ಲಿ ಯಾವ ಅರ್ಜಿಗಳು ಬಾರದಂತೆ ನೋಡಿಕೊಳ್ಳುತ್ತದೆ.

'ಸತ್ಯಮೇವ ಜಯತೇ'- ಇದು ನಮ್ಮ ರಾಷ್ಟ್ರೀಯ ಲಾಂಛನದ ಘೋಷವಾಕ್ಯ. ಕೋರ್ಟ್ ಕಟೆಕಟೆಯಲ್ಲಿ ನಿಂತು ಸಾಕ್ಷಿ ಹೇಳುವಾಗಲೂ ಭಗವದ್ಗೀತೆ, ಕುರಾನ್ ಅಥವಾ ಬೈಬಲ್ ಮುಟ್ಟಿ ಪ್ರಮಾಣ ಮಾಡುವ ಕ್ರಮವಿದೆ. ಆದರೆ ನಮ್ಮ ಬಡತನದ ವಿಚಾರದಲ್ಲಿ ಯಾವುದು ಸುಳ್ಳು, ಯಾವುದು ಸತ್ಯ ? ನಾಳೆ ಸರಕಾರದ ಪ್ರತಿನಿಧಿಯೊಬ್ಬರು ಕಟೆಕಟೆಯಲ್ಲಿ ನಿಂತರೆ ಧೈರ್ಯವಾಗಿ ಎರಡೂ ಸುಳ್ಳುಗಳನ್ನು ಸತ್ಯ ಎಂದು ನಿರೂಪಿಸಬಹುದು. ಪಡಿತರದ ವಿಚಾರದಲ್ಲಿ ನಮ್ಮ ಮಾನಸಿಕ ಬಡತನ ಮೊದಲು ನಿವಾರಣೆಯಾಗಬೇಕಿದೆ.

ಇದು ಮತ್ತೇನಲ್ಲ, ಕಮ್ಯುನಿಸ್ಟರ ಗೋಬೆಲ್ಸ್ ನಿಜದರ್ಶನ!

ಬಸವ ಮಂಟಪ
ರವಿ ಹಂಜ್
vveditoped@gmail.com

ಬಸವಣ್ಣ, ಕಾಯಕ, ಶರಣ ಚಳವಳಿ ಮತ್ತು ಕಲ್ಯಾಣ ಕ್ರಾಂತಿಗಳ ಮೂಲೋದ್ದೇಶಗಳನ್ನು ಅಪ್ಪಟ ಸಮಾಜವಾದಿ ಕಮ್ಯುನಿಸ್ಟ್ ಚಿಂತನೆ ಎಂದು ಬಿಂಬಿಸುವ ಸಾಕಷ್ಟು ಸಂಕಥನಗಳನ್ನು ಬುದ್ಧಿಜೀವಿಗಳು ಕಟ್ಟಿಕೊಟ್ಟಿದ್ದಾರೆ. ಅಂಥ ಪಂಥದ ವಕ್ತಾರರಾದ ಶರಣ ರಂಜಾನ್ ದರ್ಗಾ ಅವರ ಲೇಖನಗಳ ಮುಖ್ಯಾಂಶದ ಹೇಳಿಕೆಗಳನ್ನು ಇಲ್ಲಿ ವಿಶ್ಲೇಷಿಸೋಣ. ಏಕೆಂದರೆ ಇಂಥ ಚಿಂತನೆಗಳನ್ನೇ ಕರ್ನಾಟಕ ಕಮ್ಯುನಿಸ್ಟ್ ಸಮಾಜವಾದಿಗಳು ಸದಾ ಹೇಳುವುದು. ಹಾಗಾಗಿ ಇದು ಕೇವಲ ಶರಣ ದರ್ಗಾ ಅವರ ಹೇಳಿಕೆಗಳಷ್ಟೇ ಅಲ್ಲದೆ ಕರ್ನಾಟಕದ ಸಮಸ್ತ ಎಡಪಂಥೀಯ ಚಿಂತಕರ ಹೇಳಿಕೆಗಳು ಎಂದೇ ಪರಿಗಣಿಸಬೇಕಿದೆ. ಅಂದ ಹಾಗೆ ಈ ಹೇಳಿಕೆಗಳನ್ನು ಜಾಗತಿಕ ಲಿಂಗಾಯತ ಮಹಾಸಭಾದ ಲಿಂಗಾಯತ ಧರ್ಮ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿದೆ. ಈ ಹೇಳಿಕೆಗಳನ್ನು ಇಲ್ಲಿ ಕ್ರಮಾಂಕದಲ್ಲಿ ಕೊಟ್ಟು ಅವುಗಳ ಕೆಳಗೆ ವಿಶ್ಲೇಷಣೆಯನ್ನು ಮಾಡಲಾಗಿದೆ, ಗಮನಿಸಿ:

1 ''ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣದಲ್ಲಿಯೂ ವೀರಶೈವ ಪದ ಬಳಕೆಯಾಗಿಲ್ಲ. ಈತನ ಕೃತಿಯ ಆಧಾರದ ಮೇಲೆ ಭೀಮಕವಿಯ 'ಬಸವಪುರಾಣ' (1368) ರಚನೆಯಾಗಿದೆ. ಇಲ್ಲಿ ಮೊದಲಬಾರಿಗೆ 'ವೀರಮಾಹೇಶ್ವರ' ಬದಲಿಗೆ 'ವೀರಶೈವ' ಪದ ಬಳಕೆಯಾಗಿದೆ. ಅಂದರೆ 14ನೇ ಶತಮಾನದವರೆಗೆ ಕನ್ನಡ ಭಾಷೆಯಲ್ಲಿ 'ವೀರಶೈವ' ಪದ ಬಳಕೆಯಾಗಿರಲಿಲ್ಲ''.

● ಕಲಬುರ್ಗಿಯವರ ತಥಾಕಥಿತ ಸಂಶೋಧನಾಧರಿತ ಈ ಹೇಳಿಕೆ ಸುಳ್ಳು ಎಂದು ಆಗಲೇ ಸಾಬೀತುಮಾಡಿದ್ದೇನೆ. ಈಗ ಸಾಂದರ್ಭಿಕವಾಗಿ ಮತ್ತೊಮ್ಮೆ ಉಲ್ಲೇಖಿಸುತ್ತಿದ್ದೇನೆ. ಪಾಲ್ಕುರಿಕೆ ಸೋಮನಾಥನು ತನ್ನ 'ಚಾತುರ್ವೇದ ಸಾರಂ' ಕೃತಿಯಲ್ಲಿ ವೀರಶೈವ ಪದವನ್ನು ಆಂಧ್ರದಲ್ಲಿ ಪ್ರಪ್ರಥಮವಾಗಿ ಬಳಸಿದ್ದಾನೆ. ಕಲಬುರ್ಗಿಯವರೇ ಕೊಟ್ಟಿರುವ ಪಿಎಚ್‌ಡಿ ಪುರಾವೆಯಲ್ಲಿಯೇ ಇದು ತಪ್ಪೆಂದು ಸಾಬೀತಾಗಿರುವುದನ್ನು ಕಳೆದೆರಡು ವಾರಗಳ ಹಿಂದಷ್ಟೇ ಓದಿದ್ದೀರಿ. ಇದು ಕಮ್ಯುನಿಸ್ಟರ ಸಂಶೋಧದೊಳಗಣ 'ಗೋಬೆಲ್ಸ್ ತಂತ್ರ!'

2 ''ಲಿಂಗಾಯತವು ಅವೈದಿಕ ಧರ್ಮವಾಗಿದೆ. ಬಸವಣ್ಣನವರು ವೇದಗಳ ಜತೆಗೆ ಆಗಮಗಳನ್ನೂ ತಿರಸ್ಕರಿಸಿದ್ದಾರೆ. 'ವೇದಕ್ಕೆ ಒರೆಯ ಕಟ್ಟುವೆ, ಆಗಮದ ಮೂಗ ಕೊಯಿವೆ' ಎಂದು ವೇದಾಗಮಗಳನ್ನು ತಿರಸ್ಕರಿಸಿದ್ದಾರೆ. ವೈದಿಕ ನೆಲೆಯ ಮೇಲೆ ನಿಂತ ಹಿಂದೂ ಧರ್ಮಕ್ಕೂ ಜನರ ಅನುಭವದ ನೆಲೆಯ ಮೇಲೆ ನಿಂತ ಲಿಂಗಾಯತ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ. ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗವೇ ಪರಮಾತ್ಮನ ಕುರುಹು. ಬಸವಣ್ಣನವರೇ ಧರ್ಮಗುರು, ವಚನಗಳೇ ಧರ್ಮಗ್ರಂಥ, ಅನುಭವದ ಮೂಲಕ ಬರುವ ಅನುಭಾವವೇ ಧರ್ಮದ ದರ್ಶನ, ಈ ದರ್ಶನವನ್ನು ಲಿಂಗಾದ್ವೈತ ಅಥವಾ ಬಸವಾದ್ವೈತ ಎಂದೂ ಕರೆಯುತ್ತಾರೆ''.

● ಇದು ಅರಿವಳಿಕೆ. ಬಸವಣ್ಣನು ಹೇಳಿಹನೆಂದು ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವ, ಆಗಮದ ಮೂಗ ಕೊಯಿವೆ ಎಂದರೆ ಅದು ಕೇವಲ ಮೌಢ್ಯ ಮಾತ್ರ. ಏಕೆಂದರೆ ವೇದವೆಂಬುದು ಒಂದು ಕಾಲದ ಸಂವಿಧಾನ, ಶಾಸ್ತ್ರವೆಂಬುದು ವಿಜ್ಞಾನ, ತರ್ಕವೆಂಬುದು ಈಗಲೂ ಇಂದಿನ ಮೊಬೈಲಿನಲ್ಲಿರುವ ತಂತ್ರಾಂಶ! ಇದೆಲ್ಲವೂ ಜಡವಲ್ಲದೆ ಬದಲಾಗುತ್ತಲೇ ಬದಲಾಗಲೇಬೇಕಾದ ಚಲನಶೀಲ ಅಂಶಗಳು. ಅದನ್ನೇ ಬಸವ ಬದಲಾಯಿಸಿದ್ದು, ಇಂದು ನಾವುಗಳು ಬದಲಾಯಿಸಬೇಕಾದ್ದು! ಇದೆಲ್ಲಕ್ಕೂ ತರ್ಕವು ಮೂಲದ್ರವ್ಯ. ಇನ್ನು ವೀರಶೈವವು ಬೌದ್ಧ, ಜೈನ, ಸಿಖ್ ಧರ್ಮಗಳಂತೆಯೇ ಹಿಂದೂ ಸಂಸ್ಕೃತಿಯ ಕವಲು ಎನ್ನುವುದು ಐತಿಹಾಸಿಕ ಸತ್ಯ. ಇನ್ನು ಇವರು ಹೇಳುವ 'ಲಿಂಗಾದ್ವೈತ', 'ಬಸವಾದ್ವೈತ' ಎಂದರೆ ಏನು? ಇದನ್ನು ರಚಿಸಿದವನು ಯಾರು? ಇದರ ಅಪ್ಪ ಅಮ್ಮ ಯಾರು? (ಹಿಂದೂ ಧರ್ಮದ ಬಗ್ಗೆ ಇವರು ಕೇಳುವ ಧಾಟಿಯಲ್ಲಿ ಓದಿಕೊಳ್ಳಿ). ಚರ್ಚಾದಾಖಲೆಯ ವಚನಗಳು ಧರ್ಮಗ್ರಂಥವಲ್ಲವೇ ಅಲ್ಲ. ಏಕೆಂದರೆ ವಚನಗಳನ್ನು ಕವನಗಳಂತೆ ಅವರವರ ಭಾವಕ್ಕೆ ವರ್ಣಿಸಬಹುದು. ಅವರವರ ಅನಿಸಿಕೆಗೆ ನಿರ್ವಚಿಸಿದರೆ ಸ್ಪಷ್ಟ ನಿಶ್ಚಿತ ಧರ್ಮಸ್ವರೂಪವು ಸಿಗುವುದಾದರೂ ಹೇಗೆ? ಸದ್ಯದ 'ವಚನದರ್ಶನ' ಮತ್ತು 'ವಚನ ನಿಜದರ್ಶನ'ದಂಥ ಪರಸ್ಪರ ದ್ವಂದ್ವಮಯ ವಚನ ವ್ಯಾಖ್ಯಾನಗಳೇ ಇದಕ್ಕೆ ಜ್ವಲಂತ ಸಾಕ್ಷಿ. ಒಂದು ವೇಳೆ ವಚನಗಳೇ ಧರ್ಮಗ್ರಂಥ, ಬಸವಣ್ಣನೇ ಧರ್ಮಗುರು ಎನ್ನುವುದಾದರೆ ಯಾವುದೇ ಪೂರ್ವಗ್ರಹ ರಹಿತ ಶ್ರೀಸಾಮಾನ್ಯನಿಗೆ ಅನ್ನಿಸುವುದೇನೆಂದರೆ, ಪುರಾಣ/ವಚನಗಳ ಪ್ರಕಾರ ಬಸವಣ್ಣ ಬಿಜ್ಜಳನ ಕೋಶವನ್ನು 'ಕದ್ದು' ಜಂಗಮಕ್ಕೆ ವ್ಯಯಿಸಿದ್ದಾನೆ. ಆ ಬಗ್ಗೆ ಬಿಜ್ಜಳನಿಗೆ 'ಹುಸಿಯ' ನುಡಿದಿದ್ದಾನೆ. ಬಿಜ್ಜಳನ ಕೊಲೆಗೆ ಶರಣರಿಗೆ ಒಪ್ಪಿಗೆ ನೀಡಿ 'ಕೊಲೆ' ಮಾಡಿಸಿದ್ದಾನೆ. ಅನ್ಯಪಂಥದ ಅವಹೇಳನ ಮಾಡಿ 'ಅನ್ಯರಿಗೆ ಅಸಹ್ಯ' ಪಟ್ಟಿದ್ದಾನೆ. ಹೀಗಿದ್ದಾಗ ಇನ್ನೆಲ್ಲಿಯ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ? 'ಇವನಾರವ ಎನ್ನದೆ ಇವನಮ್ಮವನೆನಿಸಯ್ಯ' ಎಂದು ನುಡಿದು ಬೊಟ್ಟು ಮಾಡಿ 'ಇವ ಪರವಾದಿ ಪರವಾದಿ' ಎಂಬ ನಡೆ ತೋರಿದ್ದಾನೆ. 'ಅವರ ನಡೆಯೊಂದು ನುಡಿಯೊಂದಾದಡೆ ಶಿವಾಚಾರಕ್ಕವರು ಸಲ್ಲರಯ್ಯ' ಎಂದು ತನ್ನ ನುಡಿಯಂತೆ ತಾನೇ ಸಲ್ಲದಾಗುತ್ತಾನೆ. ಇದೇ ರೀತಿ ಎಲ್ಲಾ ವಚನಕಾರರು ತಮ್ಮ ತಮ್ಮ ವಚನಗಳಲ್ಲೇ ಇಂದಿನ ತಾಲಿಬಾನರಿಗಿಂತ ಮತಾಂಧರೆನಿಸುವಷ್ಟು ದ್ವಂದ್ವ ತೋರಿ ರದ್ದಾಗಿಬಿಡುತ್ತಾರೆ. ಅದಕ್ಕಾಗಿಯೇ ವಚನಗಳು ಅನುಭವ ಮಂಟಪದ ಆಯಾಯ ದಿನದ ಚರ್ಚೆಯ ಸನ್ನಿವೇಶಕ್ಕೆ ವ್ಯಕ್ತಪಡಿಸಿದ ಅನಿಸಿಕೆಗಳ ದಾಖಲೆಗಳೇ ಹೊರತು ಇನ್ನೇನೂ ಅಲ್ಲ! ವಚನಗಳು ಎಂದಿಗೂ ಧರ್ಮಗ್ರಂಥವಾಗುವ ಮಾನ್ಯತೆಯನ್ನು ಪಡೆದಿಲ್ಲ. ಅವು ಅರ್ಹವೂ ಅಲ್ಲ. ಚರ್ಚೆಯ ಆವೇಶದಲ್ಲಿ ಮಾಡಿರುವ ಪರಮತ ಅಸಹಿಷ್ಣುತೆಯು ವಚನಗಳಲ್ಲಿ ಪರಾಕಾಷ್ಠೆಯನ್ನು ತಲುಪಿದೆ. ಮುಂದಿನ ಪೀಳಿಗೆಯ ವೀರಶೈವ ಲಿಂಗಾಯತ ಧರ್ಮೀಯರು ಈ ಅಸಹಿಷ್ಣುತೆಯನ್ನು ಹೇಗೆ ತಾನೇ ತಮ್ಮ ಧರ್ಮದ ಪ್ರೌಢನೀತಿ ಎಂದು ಬಗೆದಾರು? ವಚನಗಳನ್ನು ಧರ್ಮಗ್ರಂಥ ಎಂದು ಪೆದ್ದು ಪೆದ್ದಾಗಿ ಅಳವಡಿಸಿದರೆ ಅದು ಲಿಂಗಾಯತವನ್ನು ಸರ್ವನಾಶ ಮಾಡುವುದು ಶತಸಿದ್ಧ. ಇದು ಕಮ್ಯುನಿಸ್ಟರ ಅತ್ಯಂತ ವ್ಯವಸ್ಥಿತ ಲಿಂಗಾಯತ ನಾಶದ ದೂ(ದು)ರಾಲೋಚಿತ 'ಗೋಬೆಲ್ಸ್ ತಂತ್ರ'. ಹಾಗಾಗಿ ಕೇವಲ ಆದ್ಯರ ಸಿದ್ಧಾಂತ ಶಿಖಾಮಣಿ, ಕರಣ ಹಸುಗೆ, ಮಂತ್ರಗೋಪ್ಯ, ಮಿಶ್ರಾರ್ಪಣಗಳೇ ವೀರಶೈವರ ಧರ್ಮಗ್ರಂಥಗಳು. ಹಾಗೆಂದು ಅಂದಿನ ಶೂನ್ಯಪೀಠಾಧ್ಯಕ್ಷ ಅಲ್ಲಮ, ಚೆನ್ನಬಸವಣ್ಣ, ಸಿದ್ಧರಾಮರಾದಿಯಾಗಿ ಇತ್ತೀಚಿನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿಗಳವರವರೆಗೆ ಆಗಿಹೋದ ಎಲ್ಲಾ ಶೂನ್ಯ ಪೀಠಾಧಿಪತಿಗಳು ಮಾನ್ಯ ಮಾಡಿದ್ದಾರೆ. ಇದನ್ನು ಬದಲಿಸಲು ಜಾತಿಪೀಠಿಗಳಿಗೆ, ಕಮ್ಯುನಿಸ್ಟರಿಗೆ, ಬಾಲಿಶ ಸಂಶೋಧಕರಿಗೆ, ಕೋಲೆಬಸವನಂಥ ಮಠಾಧೀಶರಿಗೆ, 'ಟಾಮ್-ಡಿಕ್-ಹ್ಯಾರಿ'ಗಳಿಗೆ ಯಾರು ಹಕ್ಕು ಕೊಟ್ಟಿರುವರು? ಇದು ಕಮ್ಯುನಿಸ್ಟರು ದಡ್ಡ ಹೆಡ್ಡ ಮಠಾಧೀಶರನ್ನು ಬಳಸಿಕೊಂಡು ಹೇರಿರುವ ಹಕ್ಕೊತ್ತಾಯದ 'ಗೋಬೆಲ್ಸ್ ತಂತ್ರ'!

3 ''ಕಳೆದ ಶತಮಾನದಲ್ಲಿ ಕ್ಯೂಬಾ ದೇಶ ಅಮೆರಿಕದ ಅಧೀನದಲ್ಲಿದ್ದಾಗ ಅದರ ರಾಜಧಾನಿ ಹವಾನಾ ವೇಶ್ಯಾವಾಟಿಕೆಗಳಿಂದ ತುಂಬಿ ಹೋಗಿತ್ತು. ಸ್ವಾತಂತ್ರ್ಯಾನಂತರ ಕಮ್ಯುನಿಸ್ಟ್ ಯುವಕರ ನೇಕರು ವೇಶ್ಯೆಯರನ್ನು ಮದುವೆಯಾಗುವ ಮೂಲಕ ಆದರ್ಶ ಮೆರೆದರು. ಕಲ್ಯಾಣದಲ್ಲಿ ಶರಣರು ಪಣ್ಯಾಂಗನೆಯರನ್ನು ಪುಣ್ಯಾಂಗನೆಯರನ್ನಾಗಿ ಮಾಡಿ ವೇಶ್ಯಾ ಸಮಸ್ಯೆಯನ್ನು ಬಗೆಹರಿಸುವತ್ತ ಮುನ್ನಡೆದರು''.

● ಸುಳ್ಳು. ಕ್ಯೂಬಾದ ಪುಣ್ಯಸ್ತ್ರೀಯರಿಗೆ ಬಾಳು ಕೊಟ್ಟ ಕಮ್ಯುನಿಸ್ಟ್ ವೀರರ ಸುಳ್ಳಿನ ಬಗ್ಗೆ 'ವಿಶ್ವವಾಣಿ' ಅಕ್ಟೋಬರ್ 8ರ 'ಬಸವ ಮಂಟಪ' ಅಂಕಣದಲ್ಲಿ ಓದಿದ್ದೀರಿ. ಇದು ಭಾವುಕ ಕೋಲಾಹಲದ 'ಗೋಬೆಲ್ಸ್ ತಂತ್ರ'!

4 ''19ನೇ ಶತಮಾನದಲ್ಲೇ ಕಮ್ಯುನಿಸ್ಟ್ ತತ್ತ್ವಜ್ಞಾನಿ ಕಾರ್ಲ್ ಮಾರ್ಕ್ಸ್ 'ಜಗತ್ತಿನ ಕಾರ್ಮಿಕರೇ ಒಂದಾಗಿರಿ, ನೀವು ಒಂದಾದರೆ ನಿಮ್ಮ ಸಂಕೋಲೆಗಳನ್ನು ಹೊರತುಪಡಿಸಿ ನೀವು ಏನನ್ನೂ ಕಳೆದುಕೊಳ್ಳುವುದಿಲ್ಲ' ಎಂದು ಸಾರಿದರು. ಬಸವಣ್ಣನವರು 12ನೇ ಶತಮಾನದಲ್ಲೇ ಭಾರಿ ತೆರಿಗೆ ಮತ್ತು ಸುಲಿಗೆಯಿಂದ ನರಳುತ್ತಿದ್ದ ಕಾಯಕಜೀವಿಗಳನ್ನು, ಅಸ್ಪೃಶ್ಯತೆ ಯಿಂದ ಬಳಲುತ್ತಿದ್ದ ದಲಿತರನ್ನು, ಎಲ್ಲ ಹಕ್ಕುಗಳಿಂದ ವಂಚಿತರಾಗಿದ್ದ ಮಹಿಳೆಯರನ್ನು ವಿಮೋಚನೆಯ ದಾರಿಯೆಡೆಗೆ ತಂದರು''.

● ಇದು ಅರಿವಳಿಕೆ. ಕಮ್ಯುನಿಸ್ಟ್ ಪ್ರಚಾರಕ್ಕೆ ಬಸವಣ್ಣನ ಬಳಕೆಯಷ್ಟೇ. ಇವರೇ ಹೇಳುವಂತೆ ಒಬ್ಬ 'ಧರ್ಮ ಅಫೀಮು' ಎಂದವನು, ಮತ್ತೊಬ್ಬ ಧರ್ಮಸ್ಥಾಪಕ! ಹಾಗಾಗಿ ಇವರನ್ನು ಅಫೀಮು ಹಂಚುವವರು ಎನ್ನಬಹುದು. ಇನ್ನು 12ನೇ ಶತಮಾನದ ಭಾರಿ ತೆರಿಗೆ, ಸುಲಿಗೆ, ಅಸ್ಪೃಶ್ಯತೆ ಆಧಾರರಹಿತ ಆಪಾದನೆಗಳು. ಕೇಳುವವರಿದ್ದರೆ ಬಸವಣ್ಣನೇ ಲೆನಿನ್ನು, ಸ್ಟಾಲಿನ್ನು, ಐನ್‌ಸ್ಟೀನು. ವಚನಗಳ ಕಟ್ಟೇ ಪೆನಿಸಿಲಿನ್ನು, ಟೆಟ್ರಾಸೈಕ್ಲಿನ್ನು, ಅಮಾಕ್ಸಿಲಿನ್ನು, ಹೈಡ್ರಾಕ್ಸಿಕ್ಲೋರೋಕ್ವೀನು! ಅಕಟಕಟಾ, ಎತ್ತಣ ಮಾಮರ ಎತ್ತಣ ಕೋಗಿಲೆ! ಇದು ಅಫೀಮಿನ ನಶೆಯ ಉದ್ರೇಕದ 'ಗೋಬೆಲ್ಸ್ ತಂತ್ರ!'

5 ''... 'ಕಾಯಕದ ಮೂಲಕ ಗಳಿಸಿದ ಒಂದು ಡಾಲರಿನ ಮೌಲ್ಯ ಪುಕ್ಕಟೆ ಸಿಕ್ಕ ಐದು ಡಾಲರಿಗಿಂತ ಬಹಳಷ್ಟು ಹೆಚ್ಚಿಗೆ ಇರುತ್ತದೆ ಎಂಬುದನ್ನು ನನ್ನ ಮಗನಿಗೆ ಕಲಿಸಿರಿ' ಎಂದು ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರು ತಮ್ಮ ಮಗ ಕಲಿಯುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಹೀಗೆ ಕಾಯಕ ನಮ್ಮ ನೈತಿಕ ಶಕ್ತಿಯನ್ನು ಹೆಚ್ಚಿಸುವುದು. 'ರಾಟೆ ತಿರುಗಿಸಲು ನನಗೆ ಶಕ್ತಿ ಇದ್ದು, ಜಪಮಣಿಗಳನ್ನು ಎಣಿಸುವುದು ಅಥವಾ ರಾಟೆ ತಿರುಗಿಸುವುದು ಇವುಗಳ ನಡುವೆ ಆಯ್ಕೆ ಮಾಡಬೇಕಾದಲ್ಲಿ, ಬಡತನ ಮತ್ತು ಉಪವಾಸವು ದೇಶವನ್ನು ಗುಪ್ತವಾಗಿ ಬೆನ್ನಟ್ಟಿರುವುದನ್ನು ಕಾಣುತ್ತಿರುವವರೆಗೆ ನಾನು ಖಂಡಿತವಾಗಿಯೂ ರಾಟೆಯ ಪರವಾಗಿ ತೀರ್ಮಾನಿಸುತ್ತೇನೆ ಮತ್ತು ಅದನ್ನೇ ನಾನು ನನ್ನ ಜಪಸರವನ್ನಾಗಿ ಮಾಡಿಕೊಳ್ಳುತ್ತೇನೆ' ಎಂದು ಗಾಂಧೀಜಿ ಕಾಯಕದ ಮಹತ್ವವನ್ನು ಸಾರಿದ್ದಾರೆ. 'ತಮ್ಮ ಕೈಯಿಂದ ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ಎಂದೂ ಯಾರೂ ತಿಂದಿಲ್ಲ' ಎಂದು ಮುಹಮ್ಮದ್ ಪೈಗಂಬರರು ಹೇಳುತ್ತಾರೆ''.

● ತಮ್ಮ ವಾದಕ್ಕೆ ಶಕ್ತಿ ನೀಡಲು ಗಾಂಧಿ, ಲಿಂಕನ್, ಪೈಗಂಬರ್ ಎಂಬ ಕತ್ತಿ-ಗುರಾಣಿ, ರಕ್ಷಾಕವಚಗಳನ್ನು ಸರಳತೆಯ ನಿರಾಕಾರಕ್ಕೆ ತೊಡಿಸಿ ವೈಭವೀಕರಿಸಿ ಸ್ಟೆರಾಯ್ಡ್ ಚುಚ್ಚುವ ಸಿದ್ಧಮಾದರಿ ತಂತ್ರವಿದು. ಹೀಗೆ ಸುಳ್ಳನ್ನೇ ಸೃಷ್ಟಿಸಿ ಸುಳ್ಳನ್ನೇ ಹೇಳಿ ಸುಳ್ಳಿನ ಸಿದ್ಧಾಂತವನ್ನು ಹೇರಿ ಸಂಪಾದಿಸುವುದು ಕಾಯಕದ ಮಂತ್ರದೊಳಗಣ ನಿಜಾರ್ಥದ 'ಗೋಬೆಲ್ಸ್ ತಂತ್ರ!'

6 ''ಕನ್ನಡವೇ ಲಿಂಗಾಯತದ ಧರ್ಮಭಾಷೆ. ಪಂಚಾಚಾರ್ಯರು ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪುವುದಿಲ್ಲ. ವಚನಗಳನ್ನು ಧರ್ಮಗ್ರಂಥಗಳೆಂದು ಒಪ್ಪುವುದಿಲ್ಲ. ಅನುಭಾವವನ್ನು ತತ್ತ್ವಜ್ಞಾನವೆಂದು ಒಪ್ಪುವುದಿಲ್ಲ. ಕನ್ನಡವನ್ನು ಧರ್ಮಭಾಷೆ ಎಂದು ಒಪ್ಪುವುದಿಲ್ಲ''.

● ಕನ್ನಡ ಭಾಷಾ ಅಭಿಮಾನವನ್ನು ಉದ್ರೇಕಿಸಿ, ಪಂಚಾಚಾರ್ಯ ದ್ವೇಷ ಬಿತ್ತರಿಸಿ ಸಾಮಾನ್ಯರನ್ನು ತಮ್ಮ ತೆಕ್ಕೆಗೆ ಬೀಳಿಸಿಕೊಳ್ಳುವ ಮತ್ತೊಂದು ಭಾವುಕ ಉದ್ರೇಕದ 'ಗೋಬೆಲ್ಸ್ ತಂತ್ರ!'

ಇವರ ಎಲ್ಲಾ ಹೇಳಿಕೆ/ಲೇಖನಗಳಲ್ಲಿ ಸಾಮಾನ್ಯವಾಗಿ ಎದ್ದು ಕಾಣುವ ಅಂಶವೆಂದರೆ, ''ಸಿದ್ಧಾಂತವನ್ನು ಪರಿಣಾಮಕಾರಿಯಾಗಿ ಮನಸ್ಸಿಗೆ ನಾಟುವಂತೆ ಪ್ರಭಾವಿಸಿ ಹರಡುವ ಕಮ್ಯುನಿಸ್ಟ್ (Psychological Propaganda) ತಂತ್ರ!'' ಪ್ರಸಿದ್ಧ ವ್ಯಕ್ತಿಗಳ ಹೆಸರು, ಹೇಳಿಕೆ, ಉದ್ಘೋಷಗಳನ್ನು ತಮ್ಮ ಸಿದ್ಧಾಂತಕ್ಕೆ ಸಮೀಕರಿಸಿ ಓದುಗರ ಅಥವಾ ಕೇಳುಗರ ಭಾವುಕತೆ, ಭಯ, ಭಕ್ತಿ, ಪ್ರೇಮ, ಸಿಟ್ಟು, ದೈನ್ಯತೆ, ಕೃತಜ್ಞತಾ ಭಾವಗಳನ್ನು ಉಕ್ಕಿಸಿ ಅವರ ಮನದಲ್ಲಿ ತಮ್ಮ ಸಿದ್ಧಾಂತ ನೆಲೆಸುವಂತೆ ಮಾಡುವುದು. ಹೀಗೆ ಹಸ್ತಕಮಸ್ತಕ ಸಂಯೋಜಿಸಿ ತಲೆಯನ್ನು ತೊಳೆದು ಅಲ್ಲಿ 'ನಾವು' ಭಾವವನ್ನು ಸೃಷ್ಟಿಸಿ 'ಅವರು' ಎನ್ನುವ ವೈರತ್ವವನ್ನು ಪ್ರತಿಷ್ಠಾಪಿಸುವುದು ರಷ್ಯನ್ ತಂತ್ರ. ಇದನ್ನು ಮನಶ್ಶಾಸ್ತ್ರಜ್ಞರು, 'ಮಾನಸಿಕ ಸಂಗ್ರಾಮ ಮನೋವಿಕಾರ' ಎನ್ನುತ್ತಾರೆ. ಈ ಮನೋವಿಕಾರವನ್ನು ಸೃಷ್ಟಿಸುವಲ್ಲಿ ಕಮ್ಯುನಿಸ್ಟರು ವಿಶ್ವವಿಖ್ಯಾತರಾಗಿದ್ದಾರೆ. ಹಾಗಾಗಿಯೇ ಅವರ ಸುಳ್ಳುಗಳ ಬಗ್ಗೆ ಯಾರು ಎಷ್ಟೇ ಸಾಕ್ಷಿಪುರಾವೆಗಳನ್ನು ಕೊಟ್ಟರೂ ವಿಚಾರಿಸದೆ ತಮ್ಮ ಭ್ರಮಾಧೀನ ಅಫೀಮಿನ ಕೂಪಸಿದ್ಧಾಂತದಾಚೆಗಿನ ವಾಸ್ತವ ಪ್ರಪಂಚವನ್ನೇ ಪರಿಗಣಿಸರು. ಹಾಗಾಗಿ ಅವರ ಬಗ್ಗೆ ಅವರ ಕುಟುಂಬ ಸದಸ್ಯರೇ ಗೌರವ ಕೊಡುವುದಿಲ್ಲ.

ಸಾಕಷ್ಟು ಕಮ್ಯುನಿಸ್ಟರು ಬಹಳಷ್ಟು ವಿರಕ್ತರಿಗೆ, ''ಬ್ರಹ್ಮಚರ್ಯ ಸುಳ್ಳು. ನಿಮಗೆ ಸ್ವಪ್ನಸ್ಖಲನವಾಗಿದೆಯೆಂದರೆ ನಿಮ್ಮ ಬ್ರಹ್ಮಚರ್ಯ ಹರಿದಂತೆ. ಕಾಮವನ್ನು ಅನುಭವಿಸದೆ ಸಂಪೂರ್ಣ ಜ್ಞಾನಪ್ರಾಪ್ತಿ ಸಿಕ್ಕದು. ಶಂಕರಾಚಾರ್ಯ ಸಹ ಅದಕ್ಕಾಗಿಯೇ ಪರಕಾಯ ಪ್ರವೇಶ ಮಾಡಿದ್ದು. ಪರಕಾಯಪ್ರವೇಶ ಸಹ ರೇಣುಕನ ಅವತಾರದಷ್ಟೇ ಸುಳ್ಳು. ಶಂಕರನು ಸಹ ಕಾಮವನ್ನು ನಮ್ಮ ನಿಮ್ಮಂತೆಯೇ ಸ್ವಕಾಯನಾಗಿ ಅನುಭವಿಸಿದ್ದ'' ಎಂದೆಲ್ಲಾ ಉಪದೇಶಿಸಿ ಹಾದಿ ತಪ್ಪಿಸಿದ್ದಾರೆ. ಇದನ್ನು ನಂಬಿ ಅಡುಗೆಯವಳನ್ನೋ/ಅಡುಗೆಯವನನ್ನೋ, ಭಕ್ತೆಯನ್ನೋ/ಭಕ್ತನನ್ನೋ, ನವ್ಯ ಚಿಂತನೆಯ ತರುಣಿಯರನ್ನೋ/ತರುಣರನ್ನೋ ಅವರವರ ಶಕಾನುಸಾರ ಕಾಮಿಸಿ ಸಿಕ್ಕಿಬಿದ್ದ ಎಷ್ಟೋ ಮಠಾಧೀಶರ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೀರಿ. ಅವರಲ್ಲಿ ಕೆಲವು ಧೈರ್ಯಸ್ಥರು ಸಂಸಾರಿಯಾದರೆ, ಧೈರ್ಯವಿಲ್ಲದವರು ಆತ್ಮಹತ್ಯೆ ಮಾಕೊಂಡಿದ್ದಾರೆ. ಶಕ್ತಿಶಾಲಿ ಅನುರಕ್ತರು ಸಾಮ-ಭೇದ-ದಂಡ ನೀತಿಗಳಿಂದ ಸಂತ್ರಸ್ತರ/ಸಂತ್ರಸ್ತೆಯರ ಬಾಯಿ ಮುಚ್ಚಿಸಿ ಮುನ್ನಡೆದಿದ್ದಾರೆ. ಕೆಲವರು ರೊಚ್ಚಿಗೆದ್ದ ಪ್ರೇಮಿಗಳಿಂದ ವಿಷಪ್ರಾಶನಗೊಂಡು ಲಿಂಗೈಕ್ಯರಾಗಿದ್ದಾರೆ. ಇದು ಕಮ್ಯುನಿಸ್ಟರ ನಿಜಗುಣ 'ಗೋಬೆಲ್ಸ್ ತಂತ್ರ!'

ವಿಜಯ್ ಮಲ್ಯ ತಮ್ಮ ಕ್ಯಾಲೆಂಡರ್ ಕನ್ಯೆಯರ ಫೋಟೋ ಶೂಟ್ ಮಾಡಿಸಿದಂಥ ಥಾಯ್ಲೆಂಡ್, ಮಾರಿಷಸ್, ಹವಾಯಿ, ಆಸ್ಟ್ರೇಲಿಯಾ ಬೀಚುಗಳಿಗೆಲ್ಲ ವಿರಕ್ತರ ಜತೆ ಖುದ್ದು ಪ್ರವಾಸ ಹೋಗಿ ಲಿಂಗಾಂಗಸಾಮರಸ್ಯ ಹೊಂದಿದ್ದಾರೆ. ಬಸವಣ್ಣನು ಸಮಾಜದಲ್ಲಿ ಬದಲಾವಣೆ ತರಲು ಬಿಜ್ಜಳನ ಖಜಾನೆಯನ್ನು ಖಾಲಿ ಮಾಡಿರಲಿಲ್ಲವೇ! ಹಾಗೆಯೇ ನಾವೂ ನಮ್ಮ ಸಮಾಜದಲ್ಲಿ ನಾವೀನ್ಯ ತರಲು ಮಠದ ಆಸ್ತಿ ಖರ್ಚು ಮಾಡಿದ್ದೇವೆ ಎಂಬ ಸೊಕ್ಕಿನ ಸಮಜಾಯಿಷಿ ಸಮೀಕರಣ ಸೂತ್ರವನ್ನು ಮಠದ ಆಸ್ತಿ ಮಾರಿದ ವಿರಕ್ತರಿಗೆ ಹೇಳಿಕೊಟ್ಟಿರುವುದು ಇವರ ಆರ್ಥಿಕ ಸಮಜಾಯಿಷಿ 'ಗೋಬೆಲ್ಸ್ ತಂತ್ರ!'

ಕಲಬುರ್ಗಿಯವರು ಪಿಎಚ್‌ಡಿ ಗಳಿಸಿರುವ ಕವಿರಾಜ ಮಾರ್ಗದಲ್ಲಿ, 'ಸ್ವೈರಿಸಲಾರ್ಪೊಡೆ ಪರ ಧರ್ಮಮಂ ಪರ ವಿಚಾರಮುಮಂ' ಎಂದಿದೆ. ಇಂಥ ಘನ ವಿಚಾರವನ್ನು ಬಾಯಲ್ಲಿ ಮಂತ್ರಿಸುತ್ತಲೇ ವೈದಿಕ-ಅವೈದಿಕ, ಆರ್ಯ-ದ್ರಾವಿಡ, ವೀರಶೈವ-ಲಿಂಗಾಯತ ಎಂದೆಲ್ಲಾ ಅಸಹನೆ ತುಂಬುವುದೇ ಈ ಸಮಾಜವಾದಿಗಳ ನಿಜಾರ್ಥದ ಕ್ರಿಯಾಶೀಲ 'ಗೋಬೆಲ್ಸ್ ತಂತ್ರ!'

'ಇವನಾರವ ಇವನಾರವ' ಎಂದು ಪಠಿಸುತ್ತಲೇ 'ಇವ ನಾರುವ ಇವ ನಾರುವ' ಎಂದು ಅಸಹ್ಯಿಸುವ ಸಮಾಜವಧಿಗರು ಇವರೇ ಹೊರತು ಸಮಾಜವಾದಿಗಳಲ್ಲ. ಸಮಾಜವನ್ನು ಛಿದ್ರಛಿದ್ರ ಮಾಡುವ ಇವರ ಇಂಥ ಅನೇಕ ವಧೆಗಳು ಮೇಲ್ನೋಟಕ್ಕೆ ಹೀಗೆ ಸಾಬೀತಾಗುತ್ತ ಸಾಗುತ್ತವೆ. ತಿರುಪತಿಯ ಪ್ರಸಾದದಲ್ಲಿ ಪ್ರಾಣಿಜನ್ಯ ಕೊಬ್ಬಿದ್ದಿತ್ತು ಎನ್ನುವ ಇತ್ತೀಚಿನ ಭ್ರಷ್ಟಾಚಾರದ ಸುದ್ದಿಯನ್ನು ಸನಾತನದ ವಿರುದ್ಧ ಸಮಾನತೆಯ ಸಂಕೇತದ ಕ್ರಾಂತಿ ಎಂಬಷ್ಟು ಸಂತೋಷಿಸಿ ಸಂದೇಶಗಳನ್ನು ಹಂಚಿಕೊಂಡಿರುವುದು ಇವರ ಸಮಾಜವಧೆಯ ತಾಜಾ ಸಾಕ್ಷಿ. ಹೀಗೆ 'ಅನ್ಯರಿಗೆ ಅಸಹ್ಯ ಪಡಬೇಡ' ಎಂಬ ಶಿಶುವಿಹಾರದ ವಚನವನ್ನೇ ಬಾಳದವರು ಅಲ್ಲಮನ ಸ್ನಾತಕೋತ್ತರ ವಚನಗಳಂತೆ ಜೀವಿಸಬಲ್ಲರೆ? ಕುಂಡಲಿನಿಯನ್ನು ಜಾಗೃತಗೊಳಿಸಿಕೊಳ್ಳಬಲ್ಲರೆ? 'ಜಾಣಪ್ರಜ್ಞೆ' ಮತ್ತು 'ಜ್ಞಾನಪ್ರಜ್ಞೆ' ಇವುಗಳ ನಡುವಿನ ವ್ಯತ್ಯಾಸ ಅಜಗಜಾಂತರ. ಒಂದು ಬುಡುಬುಡುಕೆ, ಇನ್ನೊಂದು ಡಮರುಗ! ಇವರೆಲ್ಲರೂ ಹೇಳುವುದು ಲಿಂಗಾಯತವಲ್ಲ, 'ಲಿಂಗಾಹತ'. ಆದರೂ ಇಪ್ಪತ್ತೊಂದನೇ ಶತಮಾನದ ಮಾಹಿತಿ ತಂತ್ರಜ್ಞಾನದ ಈ ಕಾಲದಲ್ಲೂ ಜನರು ಇವರನ್ನು ನಂಬುತ್ತಾರೆಂದರೆ ಸಮಾಜದ ಒಂದಿಡೀ ವರ್ಗವೇ ಸ್ಟಾಕ್‌ಹೋಮ್ ಸಿಂಡ್ರೋಮಿನಲ್ಲಿದೆ ಎಂದರ್ಥ.

ಇನ್ನು ಕರ್ನಾಟಕದ ಬಹಳಷ್ಟು ಕಮ್ಯುನಿಸ್ಟರಿಗೆ ಒಂದು ನಿಶ್ಚಿತ ಕಾಯಕ ಇಲ್ಲ. ಇವರನ್ನು ಪ್ರೇಮಿಸಿ ಮದುವೆಯಾದ ಮೇಲ್ಜಾತಿಯ ಪತ್ನಿಯರು ಮಾತ್ರ ಉತ್ತಮ, ಸುಭದ್ರ, ಗೌರವಾನ್ವಿತ ಉದ್ಯೋಗಗಳಲ್ಲಿದ್ದಾರೆ. ಅಂಥವರನ್ನು ಹುಡುಕಿಯೇ ಈ ಚಿಂತಕರು ಪ್ರೇಮಿಸಿ ಮದುವೆಯಾಗಿ ಸಂಸಾರದ ಆರ್ಥಿಕ ಜವಾಬ್ದಾರಿಯಿಂದ ತಪ್ಪಿಸಿಕೊಂಡಿರುತ್ತಾರೆ. ಇದು ಇವರ 'ಕಾಯಕವೇ ಕೈಲಾಸ'ದ ಅನುಷ್ಠಾನ. ಓರ್ವ ಧೀಮಂತ ಕನ್ನಡ ಕಮ್ಯುನಿಸ್ಟರು ತಮ್ಮ ಶಿಷ್ಯರ ಜತೆ ಬೆರೆತಾಗ, ''ನನ್ನ ಹೆಂಡತಿ ಜಂಗಮರವಳು. ನಮ್ಮಪ್ಪ ಪಾದಪೂಜೆ ಮಾಡಿದ್ದ ಜಾತಿಯೋಳ ಹತ್ರ ನಿತ್ಯ ಪಾದ ಒತ್ತಿಸಿಕೊಳ್ತೀನಿ. ಆ ಗುಲಾಮಿ ಪಾದಪೂಜೆ ನೆನಪಾದ್ರ ಸಾಕು, 'ಏಯ್ ಬಾ ಇಲ್ಲಿ, ಕಾಲು ಒತ್ತು' ಎಂದು ಮಂಚದ ಮೇಲೆ ವಿರಾಜಮಾನನಾಗಿ, ಆಕೆ ಕಾಲು ಒತ್ತುವಾಗ ಮೀಸೆ ತಿರುವಿ ನಸುನಗುತ್ತೇನೆ'' ಎಂದು ತನ್ನ ಪ್ರೇಮವನ್ನೇ ಅಪಮಾನಿಸುತ್ತಾರೆ. ಇದನ್ನು ಕೇಳಿದ ಆ ಮಹಿಳಾ ಸಮಾನತೆಯ ಹೋರಾಟಗಾರ್ತಿ ಶಿಷ್ಯೆಯರು ಕಣ್ಣರಳಿಸಿ, ''ವಾವ್! ಮಾರ್ವಲಸ್!'' ಎಂದು ಸಂತೋಷಿಸುತ್ತಾರೆ. ಮತ್ತೊರ್ವ ಪ್ರಗತಿಪರ ನಾಯಕರು, ''ನನ್ನ ಹೆಂಡತಿ ಬ್ರಾಹ್ಮಣರವಳು. ನನಗೆ ಬ್ರಾಹ್ಮಣ್ಯ ನೆನಪಾದಾಗಲೆಲ್ಲ ಅವಳನ್ನ ಕರೆದು ಮುಖಮೈಥುನ ಮಾಡಿಸಿಕೊಳ್ಳುತ್ತೇನೆ. ಬ್ರಾಹ್ಮಣ್ಯದ ವಿರುದ್ಧ ಸೇಡು ತೀರಿಸಿಕೊಳ್ಳುವ ಈ ವಿಧಾನ... ಆಹಾ!'' ಎಂದು ತನ್ನ ಶಿಷ್ಯರ ಮುಂದೆ ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಇದು ಅಮರ, ಮಧುರ, ನಿಷ್ಕಲ್ಮಷ, ಪವಿತ್ರ ಇತ್ಯಾದಿ ಸಮಸಮಾಜ ಪದಗಳಲ್ಲಿ 'ತಮ್ಮ ಕವಿತ್ವ ಮೆರೆವವರ' ಪ್ರೇಮದ ಅಸಲಿಯತ್ತು. ಮಹಿಳಾ ಸಮಾನತೆಯ ಹಕೀಕತ್ತು. ನಿಜಾರ್ಥದ ಕ್ರಿಯಾಶೀಲ 'ಗೋಬೆಲ್ಸ್ ತಂತ್ರ!'ದ ಮಸಲತ್ತು.

ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬದ ಕಣ್ಣಲ್ಲಿ ಕಣ್ಣಿಟ್ಟು ತಮ್ಮ ಸಮರ್ಥನೆಯನ್ನು ಸಮರ್ಥಿಸಿಕೊಳ್ಳಲಾಗದ ಆತ್ಮವಿರದ ಆತ್ಮಗೇಡಿಗಳು ಬರಿಯ ಲಿಂಗವ ದಿಟ್ಟಿಸಿದೊಡವೇನು ಫಲ! ಶೂನ್ಯಪೀಠಾಧೀಶ್ವರ ಚೆನ್ನಬಸವಣ್ಣನು ಕಾಲಜ್ಞಾನಿಯಾಗಿ ಇಂಥ 'ತಮ್ಮ ಕವಿತ್ವವ ಮೆರೆವವರ' ಗೋಬೆಲ್ಸ್ ತಂತ್ರಜ್ಞರಿಗಾಗಿಯೇ ಬರೆದ ಎಚ್ಚರಿಕೆಯ ವಚನ ಹೀಗಿದೆ: ''ನಮ್ಮ ಪುರಾತನರ ವಚನಂಗಳನೆಲ್ಲ ಓದದೆ ಇದ್ದಾರು, ಓದಿಯೂ ನಂಬಿಗೆ ಇಲ್ಲದೆ ಇದ್ದಾರು, ನೂರ ಕೊಬ್ಬರಲ್ಲದೆ ನಂಬರು, ನಮ್ಮ ಆದ್ಯರ ವಚನಂಗಳ ಜರೆದಾರು, 'ತಮ್ಮ ಕವಿತ್ವವ ಮೆರೆ'ದಾರು, ನಮ್ಮ ಆದ್ಯರ ವಚನಂಗಳಿಂದೊದಗಿದ ಜ್ಞಾನವೆಂಬುದನರಿಯರು. ತಾಯಿಯಿಂದ ಮಕ್ಕಳಾದರೆಂಬುದನರಿಯರು. ಊರೆಲ್ಲಕ್ಕೆ ಹುಟ್ಟಿದ ಹಾಗೆ ನುಡಿದಾರು ನಮ್ಮ ಪುರಾತನರ ವಚನವೆ ತಾಯಿ ತಂದೆ ಎಂದರಿಯರು. ನಮ್ಮ ಆದ್ಯರ ವಚನ ಜ್ಞಾನದ ನೆಲೆಯ ತೆಗೆದಿರಿಸಿತ್ತು ನಮ್ಮ ಆದ್ಯರ ವಚನ ಮದ ಮಾತ್ಸರ್ಯಾದಿ ಅರಿಷಡ್ವರ್ಗ ಸಪ್ತವ್ಯಸನ ಪಂಚೇಂದ್ರಿಯ ದಶವಾಯುಗಳಿಚ್ಚೆಗೆ ಹರಿವ ಮನವ ಸ್ವಸ್ಥವಾಗಿ ನಿಲಿಸಿತ್ತು ನಮ್ಮ ಆದ್ಯರ ವಚನ ಅಂಗೇಂದ್ರಿಯಂಗಳ ಲಿಂಗೇಂದ್ರಿಯಂಗಳೆನಿಸಿತ್ತು. ನಮ್ಮ ಆದ್ಯರ ವಚನ ನೂರೊಂದುಸ್ಥಲವ ಮೀರಿದ ಮಹದಲ್ಲಿ ನೆಲಸಿತ್ತು. ನಮ್ಮ ಆದ್ಯರ ವಚನ ಇನ್ನೂರ ಹದಿನಾರು ಲಿಂಗಕ್ಕೆ ಸರ್ವೇಂದ್ರಿಯವ ಸನ್ಮತವ ಮಾಡಿ, ಸಾಕಾರವ ಸವೆದು ನಿರಾಕಾರವನರಿದು ನಿರವಯಲ ನಿತ್ಯಸುಖದಲ್ಲಿರಿಸಿತ್ತು. ಇಂತಪ್ಪ ಆದ್ಯರ ವಚನಭಂಡಾರವ, ನಮ್ಮ ಪ್ರಭುದೇವರು ಮುಖ್ಯವಾದ ಏಳುನೂರೆಪ್ಪತ್ತು ಅಮರಗಣಂಗಳು ಅಂಖ್ಯಾತ ಪುರಾತನರು, ಪ್ರಮಥಗಣಂಗಳು ಕೇಳಿ ಹೇಳಿ ಕೊಂಡಾಡಿದ ಕಾರಣ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಸರ್ವಸುಖವ ಸೂರೆಗೊಂಡು ಸ್ವಯಲಿಂಗವಾದರು (ಸಮಗ್ರ ವಚನ ಸಂಪುಟ: 3, ವಚನದ ಸಂಖ್ಯೆ: 1294).

ಇಷ್ಟೆಲ್ಲಾ ಕೇಳಿದ ಮೇಲೆ ಸ್ಟಾಕ್‌ಹೋಮ್ ಸಿಂಡ್ರೋಮಿಗರು, 'ಓಂ ಶ್ರೀ ಗುರು ಬಸವಲಿಂಗಾಯ ನಮಃ' ಎಂದು ಪಠಿಸಬೇಕೋ ಅಥವಾ 'ಕಾಮ್ರೇಡ್ ಬಸವಣ್ಣ ಅಮರ್ ರಹೇ, ಲಾಲ್ ಸಲಾಂ ಜಿಂದಾಬಾದ್' ಎಂದು ಘೋಷಣೆ ಕೂಗಬೇಕೋ ಲಿಂಗಾಹತ ಸಭಾ ಸದಸ್ಯರೇ ಆಜ್ಞಾಪಿಸಬೇಕು.

ಇನ್ನು, ನನ್ನ ಸಾಕಷ್ಟು ಸುಸಂಸ್ಕೃತ ಸಭ್ಯ ವಿದ್ವಾಂಸ ಮಿತ್ರರು, ''ತಕ್ಷಣದ ಪರಿಣಾಮ ಯಾವತ್ತೂ ಅಲ್ಪಾಯುಷಿ. ನಿಧಾನವಾಗಿ ಪರಿಣಾಮ ಬೀರುವುದೇ ಶಕ್ತಿಶಾಲಿ ಬರವಣಿಗೆಯ ಗುಣ ಮತ್ತು ಶಕ್ತಿ. ಸಾಕಷ್ಟು ಅಧ್ಯಯನ ಮಾಡಿ ಬರೆಯುವ ನೀವು ಕುಟುಕುವುದು ಬೇಡ, ಎಚ್ಚರಿಸುವ ಕೆಲಸ ಮಾಡಿದರೆ ಒಳಿತು'' ಎಂದು ಸಲಹೆ ನೀಡಿದ್ದಾರೆ. ಅದು ಅತ್ಯಂತ ಸಮಂಜಸ ಕೂಡ. ಆದರೆ ಒಂದು ತಲೆಮಾರಿನ ಯುವಶಕ್ತಿಯನ್ನು ತಮ್ಮ ಗೋಬೆಲ್ಸ್ ತಂತ್ರಗಳಿಂದ ಯಾಮಾರಿಸಿ ಮೂರ್ಖರನ್ನಾಗಿಸಿ ಸ್ಟಾಕ್‌ಹೋಮ್ ಸಿಂಡ್ರೋಮಿನಲ್ಲಿರಿಸಿದ ವ್ಯವಸ್ಥೆಯನ್ನು ವ್ಯವಸ್ಥಿಗರನ್ನು ಕುಟುಕಿ ಕಟಕಿಯಾಡದೇ ಎಚ್ಚರಿಸಲು ಕಾಳಾಮುಖ 'ವೀರ'ಶೈವ ಪರಂಪರೆಯ ಶರಣ ಬರಹಗಳಿಗೆ ಹೇಗೆ ಸಾಧ್ಯ! ಎಲ್ಲಾ ಶರಣರೂ ತಮ್ಮ ವೀರಪರಂಪರೆಯಂತೆ ವಚನಗಳಲ್ಲಿ ಕುಟುಕಿ ಕಟಕಿಯಾಡಿಯೇ ಸಮಾಜಕ್ಕೆ ತಿಳಿಹೇಳಿದ್ದಾರೆ. ಶರಣಸಂಹಿತೆಯ ಈ ಪರಂಪರೆಯನ್ನು ಮುಂದುವರಿಸಬೇಕಾದ ಅವರದೇ ಮಾರ್ಗದ ಶರಣ ಜವಾಬ್ದಾರಿ ನನಗರಿವಿಲ್ಲದೆ ನನ್ನ ಹೆಗಲೇರಿರುವ ಕಾರಣ ಈ ಕುಟುಕುನೀತಿ ಈ ಬರಹಗಳಲ್ಲಿ ಅತ್ಯಂತ ಅನಿವಾರ್ಯವಾಗಿ ಮೂಡಿಬಂದಿದೆ. ಅಂದಹಾಗೆ ಓಂ ಎನ್ನುವಾಗ ಪೂರಕ, ನಮಃ ಎನ್ನುವಾಗ ಕುಂಭಕ, ಶಿವಾಯ/ಬಸವಾಯ/ಜೀಸಸಾಯ/ಅಲ್ಲಾಹಾಯ/ರಂಭೋರ್ವಶಿಮೇನಕೇಯ ಎಂದು ನಿಮ್ಮಿಷ್ಟದ್ದು ಎನ್ನುವಾಗ ರೇಚಕ! ಇದು ಮಂತ್ರಪಠಣದ ಹಿಂದಿನ ಪ್ರಾಥಮಿಕ ಪ್ರಾಣಾಯಾಮ ತಂತ್ರ. ಇಲ್ಲಿಂದ ಅಲ್ಲಮ, ಅಕ್ಕ, ಚೆನ್ನಬಸವಣ್ಣನ ಕುಂಡಲಿನಿಯ ಹಾದಿ, ಇವರಿಂದ ಅನಂತಾನಂತ ದೂರದ ಅಗಮ್ಯ ಅಗೋಚರ!

''ಅಗ್ಗಿಯ ಸುಡುವಲ್ಲಿ ಉದಕವ ಹೊಲೆವಲ್ಲಿ ವಾಯುವ ಮುಟ್ಟಿ ಆಕಾಶವ ಹಿಡಿವಲ್ಲಿ ಯೋಗದ ಹೊಲಬ ನೀನೆತ್ತ ಬಲ್ಲೆ? ಕರಣಂಗಳ ಬನವ ನಿನ್ನನೆ ನೀನರಿಯದೆ ಮಾತಾಡಬೇಡ. ಹೊಡೆಮರಳುತಿರೆ ಗುಹೇಶ್ವರನೆಂಬ ಲಿಂಗವ ಕಲ್ಪಿಸಿ ಕೊಳ್ಳಬಲ್ಲೆ?''.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:9, Issue:338

ಸಮಾಚಾರ ಸಣ್ಣದಲ್ಲ

ಮಹಾರಾಷ್ಟ್ರ ಸಿಎಂ ಶಿಂದೆ ರಾಜೀನಾಮೆ



ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂದೆ ತಮ್ಮ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ. ರಾಜಭವನಕ್ಕೆ ತೆರಳಿ ರಾಜ್ಯಪಾಲ ರಾಧಾಕೃಷ್ಣನ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು. ಸಿಎಂ ಶಿಂದೆ ಜತೆ ಇಡೀ ಸಂಪುಟ ಕೂಡ ರಾಜೀನಾಮೆ ಸಲ್ಲಿಸಿದೆ. ಹೊಸ ಸರಕಾರ ರಚನೆ ವರೆಗೂ ಹುದ್ದೆಯಲ್ಲಿ ಮುಂದುವರಿಯುವಂತೆ ರಾಜ್ಯಪಾಲರು ಸೂಚಿಸಿದ್ದಾರೆ. ಈ ಸಂದರ್ಭ ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡ್ನವಿಸ್ ಮತ್ತು ಅಜಿತ್ ಪವಾರ್ ಕೂಡ ಇದ್ದರು. ಮಹಾ ರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ, ಶಿವಸೇನೆ, ಎನ್‌ಸಿಪಿ ಒಳಗೊಂಡ ಮಹಾಯುತಿ ಮೈತ್ರಿಕೂಟ ಭಾರಿ ಬಹುಮತ ಸಾಧಿಸಿದ್ದು, ನೂತನ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಮುಂದು ವರೆದಿದೆ. ಶಿವಸೇನೆ ಮತ್ತು ಎನ್‌ಸಿಪಿ ಬಣದಿಂದ ತಲಾ ಒಬ್ಬರು ಉಪ ಮುಖ್ಯಮಂತ್ರಿ ಇರಲಿದ್ದಾರೆ ಎನ್ನಲಾಗಿದೆ.

ಕೋಸ್ಟರಿಕ: 6 ಜನರಿದ್ದ ಸೆಸ್ನಾ ವಿಮಾನ ಪತನ

ಕೋಸ್ಟರಿಕ: ಆರು ಪ್ರಯಾಣಿಕರಿದ್ದ ಸೆಸ್ನಾ ವಿಮಾನ ಮಧ್ಯ ಅಮೆರಿಕದ ಕೋಸ್ಟರಿಕದ ರಾಜಧಾನಿ ಸ್ಯಾನ್ ಜೋಸ್‌ನ ಆಗ್ನೇಯ ಭಾಗದಲ್ಲಿ ಸೋಮವಾರ ಮಧ್ಯಾಹ್ನ ಪತನಗೊಂಡಿದೆ. ಮೌಂಟ್ ಪಿಕೊ ಬ್ಲಾಂಕೊ ಬಳಿ ಪರ್ವತಕ್ಕೆ ವಿಮಾನ ಅಪ್ಪಳಿಸಿದೆ. ಸದ್ಯ ವಿಮಾನದಲ್ಲಿದ್ದವರ ಬಗ್ಗೆ ಮಾಹಿತಿ ಪತ್ತೆಯಾಗಿಲ್ಲ. ಶೋಧ ಮತ್ತು ರಕ್ಷಣಾ ತಂಡದ ಸಿಬ್ಬಂದಿ ಪರ್ವತದ ತುದಿಯಲ್ಲಿ ವಿಮಾನದ ಅವಶೇಷಗಳನ್ನು ಪತ್ತೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೋಸ್ಟರಿಕದ ಉತ್ತರ ಕೆರಿಬಿಯನ್ ಕರಾವಳಿಯ ಟೋರ್ಟುಗುರೊದಿಂದ ಹೊರಟ ಪುಟ್ಟ ವಿಮಾನ ಸ್ಯಾನ್‌ಜೋಸ್‌ಗೆ ತೆರಳುತ್ತಿತ್ತು.

ಆರ್‌ಬಿಐ ಗವರ್ನರ್ ಶಕ್ತಿಕಾಂತ್ ಆಸ್ಪತ್ರೆಗೆ

ಚೆನ್ನೈ: ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಗವರ್ನರ್ ಶಕ್ತಿಕಾಂತ್ ದಾಸ್ ಮಂಗಳವಾರ ಅಸ್ವಸ್ಥಗೊಂಡಿದ್ದು, ಅವರನ್ನು ಚೆನ್ನೈನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಶಕ್ತಿಕಾಂತ್ ದಾಸ್ ಅವರಿಗೆ ಆ್ಯಸಿಡಿಟಿ ಸಮಸ್ಯೆ ಎದುರಾಗಿತ್ತು. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಳಿಕ ಅವರು ಆರೋಗ್ಯವಾಗಿದ್ದಾರೆ. ಸದ್ಯದಲ್ಲೇ ಆಸ್ಪತ್ರೆಯಿಂದ ಬಿಡುಗಡೆಗೊಳ್ಳಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. 1960ರ ನಂತರ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿದ ಆರ್‌ಬಿಐ ಮುಖ್ಯಸ್ಥ ಎಂಬ ಖ್ಯಾತಿ ದಾಸ್ ಅವರದ್ದಾಗಿದೆ. ದಾಸ್ ಆರ್‌ಬಿಐ ಗವರ್ನರ್ ಆಗಿ 2018ರಲ್ಲಿ ಮೂರು ವರ್ಷದ ಅವಧಿಗೆ ನೇಮಕಗೊಂಡಿದ್ದರು. 2021ರಲ್ಲಿ ಮರು ನೇಮಕವಾಗಿದ್ದು, ಅಧಿಕಾರದಲ್ಲಿ ಮುಂದುವರಿದಿದ್ದಾರೆ. ಡಿಸೆಂಬರ್‌ಗೆ ಅಧಿಕಾರವಧಿ ಮುಕ್ತಾಯವಾಗಲಿರುವ ಹಿನ್ನೆಲೆ ಮರುನೇಮಕವಾಗಿದೆ.

{ ರೇವಂತ್ ರೆಡ್ಡಿ } ತೆಲಂಗಾಣ ಸಿಎಂ

ತೆಲಂಗಾಣದಲ್ಲಿ ಜಾತಿ ಗಣತಿ ಶೇ.92ರಷ್ಟು ಪೂರ್ಣಗೊಂಡಿದೆ. ಸಂವಿಧಾನದ ಮೂಲಕ ಜನರಿಗೆ ಮತದಾನದ ಹಕ್ಕು ದೊರೆತಿದೆ. ಬಡವರಿಗೆ ಉಚಿತ ಶಿಕ್ಷಣ, ನೌಕರಿ, ವಸತಿ, ಮೀಸಲಾತಿ ಸೌಲಭ್ಯ ಸಿಕ್ಕಿದೆ. ಬಡವರಿಗಾರಿ ಕೃಷಿ ಕಾಯ್ದೆ ರೂಪಿಸಲಾಗಿದೆ. ಕಾಂಗ್ರೆಸ್ ಪಕ್ಷದ ಸರಕಾರ ಜನರಿಗೆ ಸಾಮಾಜಿಕ ನ್ಯಾಯವನ್ನೂ ಒದಗಿಸಿದೆ.

ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ನೇತೃತ್ವದಲ್ಲಿ ಸಂವಿಧಾನ ದಿನ ಆಚರಣೆ | ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಪ್ರಶಂಸೆ

ಕಾಶ್ಮೀರದಲ್ಲಿ ಪ್ರಥಮ ಬಾರಿ ಸಂವಿಧಾನ ದಿನಾಚರಣೆ

ಶ್ರೀನಗರ: ಕಳೆದ 74 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಜಮ್ಮು-ಕಾಶ್ಮೀರದಲ್ಲಿ 'ಸಂವಿಧಾನ ದಿನ' ಆಚರಿಸಲಾಗಿದೆ. ಜಮ್ಮು- ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ ವಿಧಿ 370 ಅನ್ನು 2019ರಲ್ಲಿ ಕೇಂದ್ರದ ಎನ್‌ಡಿಎ ಸರಕಾರ ರದ್ದುಗೊಳಿ ಸಿದ್ದರಿಂದ ಶ್ರೀನಗರದಲ್ಲಿಯೂ ಸಂವಿಧಾನ ದಿನವನ್ನು ಮೊದಲ ಬಾರಿಗೆ ಆಚರಿಸಲು ಸಾಧ್ಯವಾಗಿದೆ ಎಂಬುದು ಉಲ್ಲೇಖಾರ್ಹ.

ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ನೇತೃತ್ವದಲ್ಲಿ ಶ್ರೀನಗರದಲ್ಲಿ ಮಂಗಳವಾರ ಸಿವಿಲ್ ಸೆಕ್ರೆಟರಿಯೇಟ್‌ನ ಸಭಾಂಗಣದಲ್ಲಿ ಸಂಭ್ರಮದಿಂದ 'ಸಂವಿಧಾನ ದಿನ'ದ ಆಚರಣೆ ನಡೆದಿದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಮನೋಜ್ ಸಿನ್ಹಾ ಅವರು, ರಾಜ್ಯದ ಜನರೆಲ್ಲರಿಗೂ ಸಂವಿಧಾನ ದಿನದ ಶುಭಾಶಯಗಳು. ಶ್ರೇಷ್ಠ ಸಂವಿಧಾ ನವನ್ನು ರಚಿಸಿದ ಹಿರಿಯರಿಗೆ ಗೌರವ ವಂದನೆ. ನಾವೆಲ್ಲರೂ ನಮ್ಮ ಅತ್ಯುತ್ತಮ ಸಂವಿಧಾನದ ಪಾವಿತ್ರ್ಯವನ್ನು ಕಾಪಾಡ ಬೇಕಿದೆ. ಸಾಮಾಜಿಕ ನ್ಯಾಯ, ಸಮಾನತೆಯ ತತ್ವಗಳನ್ನು ಇನ್ನಷ್ಟು ಬಲಪಡಿಸಬೇಕಿದೆ. ಸಮಾಜದಲ್ಲಿ ಶಾಂತಿ ಮತ್ತು ಪ್ರಗತಿಯನ್ನು ಕಾಯ್ದುಕೊಳ್ಳಲು ಎಲ್ಲರೂ ಒಗ್ಗೂಡಿ ಶ್ರಮಿಸಬೇಕಿದೆ ಎಂದು ಹೇಳಿದರು. ಜಮ್ಮು-ಕಾಶ್ಮೀರದಲ್ಲಿ ಇದೇ ಮೊದಲ ಬಾರಿ ಸಂವಿಧಾನ ದಿನ ಆಚರಣೆ ಆಗಿರುವುದಕ್ಕೆ ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, 'ಭಾರತ ಏಕೀಕೃತ' ಎಂಬ ಸಂದೇಶವನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು ಕಾಶ್ಮೀರ ಜನತೆಗೆ ಶುಭ ಕೋರಿದ್ದಾರೆ.

ಸಂವಿಧಾನದಡಿ ಒಮರ್ ಪ್ರಮಾಣ: ಜಮ್ಮು-ಕಾಶ್ಮೀರದಲ್ಲಿ ಹೊಸ ಸರಕಾರ ರಚನೆಯಾಗುವ ಸಂದರ್ಭ ನಿಯೋಜಿತ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಅ.16ರಂದು ಭಾರತದ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದಾಗ ಆ ಬಗ್ಗೆ ರಾಜ್ಯದಲ್ಲಿ ಬಹಳಷ್ಟು ಚರ್ಚೆಗಳಾದವು. ಇದಕ್ಕೂ ಹಿಂದಿನ ಅಧಿಕಾರಾವಧಿಯಲ್ಲಿ ಒಮರ್ ಅಬ್ದುಲ್ಲಾ ಅವರು ಪ್ರಮಾಣವಚನ ಸಮಾರಂಭದ ವಿಡಿಯೊ ಹಂಚಿಕೊಂಡಿದ್ದಾಗ ದೇಶದ ಹಲವು ಜನರು, 'ಭಾರತದ ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಬೇಕಿತ್ತು' ಎಂದು ಪ್ರತಿಕ್ರಿಯಿಸಿದ್ದರು.

1947ರಲ್ಲಿ ಜಮ್ಮು-ಕಾಶ್ಮೀರ ರಾಜ್ಯವನ್ನು ಭಾರತ ದೇಶದಲ್ಲಿ ವಿಲೀನಗೊಳಿಸಿದ ನಂತರ ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಸಂವಿಧಾನ ದಿನ ಆಚರಿಸಲಾಗಿದೆ. ಶ್ರೀನಗರದಲ್ಲಿ ಸಂವಿಧಾನ ದಿನ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಭಾಗವಹಿಸಿದ್ದರು.



ಗೈರಾದ ಮುಖ್ಯಮಂತ್ರಿ

ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಸೋಮವಾರವೇ ಸೌದಿ ಅರೇಬಿಯಾಕ್ಕೆ ತೆರಳಿದ್ದರಿಂದ ಸಂವಿಧಾನ ದಿನ ಕಾರ್ಯಕ್ರಮದಲ್ಲಿ ಹಾಜರಿರಲಿಲ್ಲ. 1965ರ ವರೆಗೂ ಜಮ್ಮು-ಕಾಶ್ಮೀರದಲ್ಲಿನ ಸರಕಾ ರದ ಮುಖ್ಯಸ್ಥರನ್ನು 'ಪ್ರಧಾನ ಮಂತ್ರಿ' ಎಂದೇ ಕರೆಯಲಾಗುತ್ತಿತ್ತು. ಸದರ್-ಎ-ರಿಯಾಸತ್ ಅಧ್ಯಕ್ಷ ಸ್ಥಾನಮಾನ ಹೊಂದಿತ್ತು. ಈಗ ಕಾಲ ಬದಲಾಗಿದೆ. ಜಮ್ಮು-ಕಾಶ್ಮೀರ ಪರಿಸ್ಥಿತಿಯೂ ಈಗ ಭಾರತದ ಉಳಿದೆಲ್ಲಾ ರಾಜ್ಯಗಳಂತೆಯೇ ಇದೆ. ಕಣಿವೆ ಪ್ರದೇಶದಲ್ಲಿ ಏನೂ ಭಿನ್ನವಾಗಿಲ್ಲ. ದೇಶದ ಸಂವಿಧಾನದ ಎಲ್ಲಾ ನಿಬಂಧನೆಗಳೂ ಅಲ್ಲಿಯೂ ಅನ್ವಯವಾಗುತ್ತವೆ.

ಸಂಸ್ಕೃತ-ಮೈಥಿಲಿ ಭಾಷೆಯಲ್ಲಿ ಸಂವಿಧಾನ



ದೆಹಲಿ: ಭಾರತದ ಸಂವಿಧಾನವನ್ನು ಸಂಸತ್ತು ಮತ್ತು ದೇಶ ಅಂಗೀಕರಿಸಿ ನ.26ಕ್ಕೆ 75 ವರ್ಷಗಳೇ ಸಂದಿವೆ. ಈ ವಿಶೇಷ ದಿನವನ್ನು ಸ್ಮರಣೀಯವಾಗಿಸಲು ಇದೇ ಮೊದಲ ಬಾರಿಗೆ ಸಂಸ್ಕೃತ ಮತ್ತು ಮೈಥಿಲಿ ಭಾಷೆಯಲ್ಲಿ ಪ್ರಕಟಿಸಲಾಗಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ ಭವನದ ಸಭಾಂಗಣದಲ್ಲಿ ಮಂಗಳವಾರ ಅನಾವರಣಗೊಳಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಸೆಂಟ್ರಲ್ ಹಾಲ್ ತಲುಪುತ್ತಿದ್ದಂತೆ ರಾಷ್ಟ್ರಗೀತೆ ಪ್ರಾರಂಭವಾಯಿತು. ನಂತರ ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರನ್ನು ಉದ್ದೇಶಿಸಿ ದ್ರೌಪದಿ ಮುರ್ಮು ಭಾಷಣ ಆರಂಭಿಸಿದರು.

75ನೇ ಸಂವಿಧಾನ ದಿನ ಸ್ಮರಣಾರ್ಥ ವಿಶೇಷ ನಾಣ್ಯ, ಅಂಚೆಚೀಟಿ ಹಾಗೂ 'ಮೇಕಿಂಗ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯ: ಎ ಗ್ಲಿಂಪ್ಸ್' ಮತ್ತು 'ಮೇಕಿಂಗ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯ ಅಂಡ್ ಇಟ್ಸ್ ಗ್ಲೋರಿಯಸ್ ಜರ್ನಿ' ಎಂಬ ಪುಸ್ತಕಗಳನ್ನು ರಾಷ್ಟ್ರಪತಿ ಬಿಡುಗಡೆ ಮಾಡಿದರು.

ಯಾರು ಏನೆಂದರು...



75 ವರ್ಷಗಳ ಹಿಂದೆ ಇದೇ ದಿನ(ನ.26) ಭಾರತದ ಲಿಖಿತ ಸಂವಿಧಾನ ಅಂಗೀಕರಿಸಲಾಯಿತು. ಇಡೀ ದೇಶ ಸಂವಿಧಾನಕ್ಕೆ ಇಂದು ಕೃತಜ್ಞತೆ ಸಲ್ಲಿಸುತ್ತಿದೆ. ನ.26ರಂದು ಸಂವಿಧಾನ ದಿನವನ್ನಾಗಿ ಆಚರಿಸಲು 2015ರಲ್ಲಿ ನಿರ್ಧರಿಸಿದೆವು. ನಮ್ಮ ಸಂವಿಧಾನ ವರ್ಷಗಳ ಸ್ಥಿರತೆ, ಶಕ್ತಿ ಮತ್ತು ಸಾಮರ್ಥ್ಯದ ಫಲಿತಾಂಶವಾಗಿದೆ. ಪ್ರಸ್ತುತ, ಭಾರತೀಯ ಸಂವಿಧಾನದ ವೈಭವ, ಅದರ ರಚನೆ ಮತ್ತು ಐತಿಹಾಸಿಕ ಪಯಣವನ್ನು ಬಿಂಬಿಸುವ ಕಿರುಚಿತ್ರವನ್ನು ಸಹ ಪ್ರದರ್ಶಿಸಲಾಗುತ್ತಿದೆ.

-ಓಂ ಬಿರ್ಲಾ ಲೋಕಸಭೆ, ಸ್ಪೀಕರ್



ಇದೊಂದು ಐತಿಹಾಸಿಕ ಕ್ಷಣ. ಸಂವಿಧಾನ ಅನುಷ್ಠಾನದ 75ನೇ ವರ್ಷದ ಸಂಭ್ರಮ ಆಚರಿಸುತ್ತಿದ್ದೇವೆ. ಈ ಏಳೂವರೆ ದಶಕಗಳಲ್ಲಿ ಭಾರತ ಅನೇಕ ದೊಡ್ಡ ಸಾಧನೆಗಳನ್ನು ಮಾಡಿದೆ. ಅದೆಲ್ಲ ಸಾಧ್ಯವಾಗಿದ್ದು ಸಂವಿಧಾನದಿಂದಲೇ. ಸಂವಿಧಾನವನ್ನು ಸದಾ ಗೌರವಿಸಬೇಕು. ದೇಶಕ್ಕೆ ಮೊದಲ ಆದ್ಯತೆ ನೀಡಬೇಕು. ಸಂವಿಧಾನ ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕುಗಳನ್ನು ನೀಡಿದೆ. ಭಾರತದ ಸಂವಿಧಾನವನ್ನು ಪ್ರಪಂಚದಾದ್ಯಂತ ಪ್ರಶಂಸಿಸಲಾಗಿದೆ.

-ಜಗದೀಪ್ ಧನಕರ್ , ಉಪ ರಾಷ್ಟ್ರಪತಿ

ಡಿಜಿಟಲ್ ಅರೆಸ್ಟ್; ₹3.8 ಕೋಟಿ ವಂಚನೆ

ಮುಂಬೈ: ದೇಶದಲ್ಲಿ ಸೈಬರ್ ಕ್ರೈ ವಿಸ್ತರಿಸುತ್ತಲೇ ಇದೆ. ವಿದ್ಯಾವಂತರೂ ಹೆಚ್ಚು ಹೆಚ್ಚು ಮೋಸ ಹೋಗುತ್ತಿದ್ದಾರೆ. ಮುಂಬೈನಲ್ಲಿ ಸಿರಿವಂತ ಕುಟುಂಬದ 77 ವರ್ಷದ ವೃದ್ಧೆಯೊಬ್ಬರು ವಂಚಕ 'ಡಿಜಿಟಲ್ ಅರೆಸ್ಟ್' ಜಾಲಕ್ಕೆ ಸಿಲುಕಿ 3.80 ಕೋಟಿ ರು.ಗಳಷ್ಟು ಭಾರೀ ಮೊತ್ತವನ್ನು ಕಳೆದುಕೊಂಡಿದ್ದಾರೆ.

- **ದಕ್ಷಿಣ ಮುಂಬೈ 77ರ ವೃದ್ಧೆಗೆ ಒಂದು ತಿಂಗಳ ಕಾಲ ಕಾಟ**
- **ಭಾರತದಲ್ಲೇ ಅತಿ ಸುದೀರ್ಘ ಅವಧಿ ಡಿಜಿಟಲ್ ಅರೆಸ್ಟ್!**
- **ನಿವೃತ್ತ ಪತಿ, ವಿದೇಶದಲ್ಲಿದ್ದ ಮಕ್ಕಳು, ಭಯದಲ್ಲಿ ವೃದ್ಧೆ**

ದಕ್ಷಿಣ ಮುಂಬೈನ ನಿವಾಸದಲ್ಲಿ ನಿವೃತ್ತ ಪತಿಯ ಜತೆಗೆ ವಾಸವಿರುವ (ಮಕ್ಕಳಿಬ್ಬರೂ ವಿದೇಶದಲ್ಲಿದ್ದಾರೆ) ಈ ಹಿರಿಯ ಜೀವವನ್ನು ವಂಚಕರು ಒಂದು ತಿಂಗಳಷ್ಟು ಸುದೀರ್ಘ ಕಾಲ ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಭಯದ ಆಳದಲ್ಲಿ ಮುಳುಗಿಸಿದ್ದರು ಎಂಬ ವಿಚಾರ ಪೊಲೀಸರೂ ಆಘಾತಗೊಳ್ಳುವಂತೆ ಮಾಡಿದೆ. ಈ ಪ್ರಕರಣ 'ದೇಶದಲ್ಲಿಯೇ ಅತಿ ದೀರ್ಘಾವಧಿಯ ಡಿಜಿಟಲ್ ಅರೆಸ್ಟ್ ಪ್ರಕರಣವಾಗಿದೆ' ಎಂದು ಮುಂಬೈನ ಸೈಬರ್ ಕ್ರೈಂ ವಿಭಾಗದ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ವಾಟ್ಸಾಪ್ ಕರೆ ಮಾಡುವ ಮೂಲಕ ವಂಚಕರು ಹಿರಿಯ ಜೀವವನ್ನು ಉಪಾಯವಾಗಿ ತಮ್ಮ ಡಿಜಿಟಲ್ ಅರೆಸ್ಟ್ ಬಲೆಗೆ ಬೀಳಿಸಿಕೊಂಡಿದ್ದಾರೆ. ಮಾಮೂಲಿಯಂತೆಯೇ ನೀವು ತೈವಾನ್ ದೇಶಕ್ಕೆ ಕಳುಹಿಸಿರುವ ಪಾರ್ಸೆಲ್‌ನಲ್ಲಿ 5 ಪಾಸ್‌ಪೋರ್ಟ್‌ಗಳಿವೆ. ಒಂದು ಬ್ಯಾಂಕ್ ಕಾರ್ಡ್, 4 ಕಿಲೊ ವಸ್ತ್ರಗಳು ಹಾಗೂ ನಿಷೇಧಿತ ಮಾದಕದ್ರವ್ಯ 'ಎಂಡಿಎಂಎ' ಇದೆ. ಈ ಪಾರ್ಸೆಲ್‌ಗೆ ನಿಮ್ಮ ಆಧಾರ್ ಕಾರ್ಡ್ ಸಂಖ್ಯೆ ಜೋಡಣೆಯಾಗಿದೆ. ಹಾಗಾಗಿ, ಈ ಪಾರ್ಸೆಲ್ ನಾನು ಕಳುಹಿಸಿಲ್ಲ ಎಂದು ನೀವು ಹೇಳಲು ಸಾಧ್ಯವೇ ಇಲ್ಲ. ಮಾದಕದ್ರವ್ಯ ಪ್ರಕರಣದಲ್ಲಿ ನಿಮ್ಮನ್ನು ಅರೆಸ್ಟ್ ಮಾಡಲಾಗಿದೆ ಎಂದು ಹೆದರಿಸಲಾಗಿದೆ. ಬಳಿಕ ಮುಂಬೈ ಪೊಲೀಸ್ ಅಧಿಕಾರಿಗಳು ನಿಮ್ಮನ್ನು ಸಂಪರ್ಕ ಮಾಡಲಿದ್ದಾರೆ. ನೀವು ಸ್ಕೈಪ್ ಆಪ್ ಡೌನ್‌ಲೋಡ್ ಮಾಡಿಕೊಂಡು ಪೊಲೀಸರ ವಿಡಿಯೊ ಕರೆ ಸ್ವೀಕರಿಸಿ ಎಂದು ಹೇಳಿ ವಂಚನೆಯ ಜಾಲದಲ್ಲಿ ಸಿಲುಕಿಸಲಾಗಿದೆ. ವೃದ್ಧೆಯನ್ನು ನಂಬಿಸಲು ಮುಂಬೈ ಪೊಲೀಸರೇ ಹೊರಡಿಸಿದಂತೆ ನಕಲಿ ನೋಟಿಸ್ ಸಿದ್ಧಪಡಿಸಿ ವಾಟ್ಸಾಪ್ ಮಾಡಲಾಗಿದೆ. ಬಳಿಕ ವೃದ್ಧೆಯನ್ನು ಭಯದಲ್ಲೇ ಇರಿಸಿ ಬ್ಯಾಂಕ್ ಖಾತೆ ವಿವರಗಳನ್ನು ಪಡೆದು ಹಂತ ಹಂತವಾಗಿ ವಿವಿಧ ಖಾತೆಗಳಿಗೆ 3.80 ಕೋಟಿ ರು.ಗಳನ್ನು ವರ್ಗಾಯಿಸಿಕೊಳ್ಳಲಾಗಿದೆ. ತನಿಖೆ ಮುಗಿಯುವವರೆಗೂ ಈ ಮೊತ್ತವನ್ನು ಭದ್ರತಾ ಠೇವಣಿಯಾಗಿ ಇರಿಸಿಕೊಂಡಿರುತ್ತೇವೆ. ನೀವು ನಿರಪರಾಧಿ ಎಂಬುದು ಖಚಿತವಾದ ಬಳಿಕ ಹಣ ವಾಪಸ್ ಆಗಲಿದೆ ಎಂದು ಹೇಳಿ ವೃದ್ಧೆಯನ್ನು ನಂಬಿಸಲಾಗಿದೆ.

ಮೊದಲಿಗೆ ಒಂದಿಡೀ ದಿನ ವೃದ್ಧೆಯನ್ನು ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಒಂದೆಡೆ ಕೂರಿಸಿ ಚೂರೂ ಕದಲದಂತೆ ಮಾಡಿ ಅಪಾರ ಒತ್ತಡ ಸೃಷ್ಟಿಯಾಗುವಂತೆ ಮಾಡಿದ ವಂಚಕರು, ಒಂದು ತಿಂಗಳ ಕಾಲ ಬಿಟ್ಟು ಬಿಡದೇ ಕರೆ ಮಾಡಿ ಸತಾಯಿಸಿದ್ದಾರೆ. ಆರಂಭದಲ್ಲಿ 15 ಲಕ್ಷ ರು. ವರ್ಗಾಯಿಸಲು ಹೇಳಿ, ಬಳಿಕ ಹಂತ ಹಂತವಾಗಿ 3.80 ಕೋಟಿ ರು. ವಸೂಲಿ ಮಾಡಿದ್ದಾರೆ. ಮನೆಯಲ್ಲೇ ಇದ್ದ ವೃದ್ಧ ಪತಿಗೂ ಹೇಳಲಾಗದೇ, ವಿದೇಶದಲ್ಲಿದ್ದ ಮಕ್ಕಳ ಜತೆಗೂ ಹೇಳಿಕೊಳ್ಳಲಾಗದಂತೆ ವೃದ್ಧೆಯನ್ನು ವಂಚಕರು ಭಯಪಡಿಸಿ ಮೌನವಾಗಿಸಿದ್ದಾರೆ.

ತಮಿಳು ನಾಡಲ್ಲಿ 4-5 ದಿನ ಮಳೆ , ಬೆಂಗಳೂರಲ್ಲೂ ಮಳೆ ಸಾಧ್ಯತೆ

ಫೆಂಗಲ್ ಚಂಡಮಾರುತ; ರೆಡ್ ಅಲರ್ಟ್

ದೆಹಲಿ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿ ಫೆಂಗಲ್ ಚಂಡಮಾರುತ ಸೃಷ್ಟಿಯಾಗಿದ್ದು, ತಮಿಳುನಾಡು ಕರಾವಳಿಗೆ ಅಪ್ಪಳಿಸಲಿದೆ. 4 ದಿನಗಳ ಕಾಲ ಭಾರಿ ಮಳೆಯಾಗುವ ನಿರೀಕ್ಷೆ ಇದ್ದು, ತಮಿಳುನಾಡಿನ ಕರಾವಳಿ ಪ್ರದೇಶಗಳಿಗೆ ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಚಂಡಮಾರುತ ಬೆಂಗಳೂರು ನಗರದ ಮೇಲೂ ಪ್ರಭಾವ ಬೀರಲಿದ್ದು, ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಫೆಂಗಲ್ ಚಂಡಮಾರುತ ಅಪ್ಪಳಿಸಲಿರುವ ಹಿನ್ನೆಲೆ ತಮಿಳುನಾಡಿನ ನಾಗಪಟ್ಟಣಂ, ತಿರುವರೂರ್ ಮತ್ತು ಮೈಲಾಡುತುರೈ ಮತ್ತು ಕಾರೈಕಲ್ ಪ್ರದೇಶಗಳಿಗೆ ರೆಡ್ ಅಲರ್ಟ್, ಕೆಲವು ಪ್ರದೇಶಗಳಿಗೆ ಹಳದಿ ಅಲರ್ಟ್ ಘೋಷಿಸಲಾಗಿದೆ. ತಮಿಳುನಾಡು ಮತ್ತು ಪುದುಚೇರಿಯ ಹಲವು ಭಾಗಗಳಲ್ಲಿ ಮುಂದಿನ 4-5 ದಿನ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸದ್ಯ ಬಂಗಾಳ ಕೊಲ್ಲಿಯಲ್ಲಿ ಸುತ್ತು ಹಾಕು ತ್ತಿರುವ ಫೆಂಗಲ್ ಚಂಡಮಾರುತ ಬುಧವಾರ ತೀವ್ರಗೊಳ್ಳಲಿದ್ದು, ನಂತರ ಉತ್ತರ- ವಾಯುವ್ಯ ದಿಕ್ಕಿನತ್ತ ಸಾಗಿ ತಮಿಳುನಾಡು ಕರಾವಳಿಯತ್ತ ಚಲಿಸಲಿದೆ. ಪರಿಣಾಮ 2 ದಿನ ಶ್ರೀಲಂಕಾ ಕರಾವಳಿಯಲ್ಲೂ ಮಳೆಯಾಗಲಿದೆ. ಬುಧವಾರ ತಮಿಳುನಾಡು ಮತ್ತು ಪುದುಚೇರಿಯ ಹಲವೆಡೆ ಭಾರೀ ಮಳೆಯಾಗಲಿದೆ. ಆಂಧ್ರ ಪ್ರದೇಶದಲ್ಲೂ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರು: ಫೆಂಗಲ್ ಚಂಡಮಾರುತ ಬೆಂಗಳೂರಿನ ಮೇಲೂ ಪರಿಣಾಮ ಬೀರಲಿದ್ದು, 3 ದಿನ ಮಳೆಯಾಗುವ ಸಾಧ್ಯತೆ ಇದೆ.

ರೆಡ್ ಅಲರ್ಟ್

ಮೈಲಾಡುತುರೈ, ಕಡಲೂರು, ಕಾರೈಕಲ್ ಪ್ರದೇಶದಲ್ಲಿ ಬುಧವಾರಕ್ಕೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಚೆಂಗಲ್ಪಟ್ಟು, ವಿಲ್ಲುಪುರಂ, ಅರಿಯಲೂರು, ತಂಜಾವೂರು, ತಿರುವರೂರು, ಮತ್ತು ನಾಗಪಟ್ಟಣಂ ಜಿಲ್ಲೆಗಳಲ್ಲಿ ಬುಧವಾರ ಅತ್ಯಧಿಕ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ.

ಎಸ್ಸಾರ್ ಸಮೂಹದ ಶಶಿ ರೂಯಿ ನಿಧನ



ದೆಹಲಿ: ಭಾರತದ ಹೆಸರಾಂತ ಉದ್ಯಮಿಗಳಲ್ಲಿ ಒಬ್ಬರಾದ, ಎಸ್ಸಾರ್ ಸಮೂಹ ಕಂಪನಿಗಳ ಸಹ ಸಂಸ್ಥಾಪಕ ಶಶಿ ರೂಯಿ(81) ಮಂಗಳವಾರ ನಿಧನರಾದರು. 1969ರಲ್ಲಿ ಎಸ್ಸಾರ್ ಕಂಪನಿಗಳ ಸಮೂಹವನ್ನು ಸ್ಥಾಪನೆ ಮಾಡಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ದು ಯಶಸ್ವಿ ಉದ್ಯಮಿ ಎನಿಸಿಕೊಂಡಿದ್ದರು. ಇಂಧನ, ಉಕ್ಕು, ದೂರಸಂಪರ್ಕ ಸೇರಿದಂತೆ ವಿವಿಧ ವಲಯಗಳಲ್ಲಿ ಎಸ್ಸಾರ್ ಸಮೂಹ ಚಟುವಟಿಕೆಯಲ್ಲಿದೆ. ಸಮಾಜ ಸೇವಾ ಕಾರ್ಯಗಳಿಗೆ ದೇಣಿಗೆ ನೀಡುವುದರಲ್ಲಿಯೂ ಶಶಿ ರೂಯಿ ಹೆಸರಾಗಿದ್ದರು.

ವಿಪ್ರೊ ಲಿಮಿಟೆಡ್

ಸಿಐಎನ್: ಎಲ್32102ಕೆಎ1945ಪಿಎಲ್‌ಸಿ 020800
ನೋಂದಾಯಿತ ಕಚೇರಿ: ದೊಡ್ಡಕನ್ನೆಲ್ಲಿ ಸರ್ಜಾಪುರ ರೋಡ್, ಬೆಂಗಳೂರು-560 035
ದೂರವಾಣಿ : +918028440011; **ವೆಬ್‌ಸೈಟ್ :** www.wipro.com; **ಇಮೇಲ್:** corp-secretarial@wipro.com

ಷೇರ್ ಸರ್ಟಿಫಿಕೇಟ್ ಕಳೆದುಕೊಂಡಿರುವುದಕ್ಕಾಗಿ ಹಾಗೂ ಡುಪ್ಲಿಕೇಟ್ ಷೇರ್ ಸರ್ಟಿಫಿಕೇಟ್ ನೀಡಿಕೆಗಾಗಿ ನೋಟೀಸು

ಬಾಂಬೆಯಲ್ಲಿನ ಹೈಕೋರ್ಟ್ ಆಫ್ ಜ್ಯುಡಿಕೇಚರ್‌ನಲ್ಲಿ
2024ರ ಟೆಸ್ಟಿಮೆಂಟರಿ ಹಾಗೂ ಇಂಟೆಸ್ಟೇಟ್ ಜ್ಯುರಿಸ್ಡಿಕ್ಷನ್
ಇಂಟೆರಿಮ್ ಅಪ್ಲಿಕೇಶನ್ (ಎಲ್) ನಂ. 18901
2024ರ ಟೆಸ್ಟಮೆಂಟರಿ ಪೆಟಿಶನ್ ನಂ. 349ರಲ್ಲಿ

ಬಾಲುಭಾಯಿ ಭಂಗನ್‌ಲಾಲ್ ಭಾಂಜಿ ... ಮೃತಪಟ್ಟ ವ್ಯಕ್ತಿ
ಪುರುಷೋತ್ತಮ ಸನಾಭಾಯಿ ಪಟೇಲ್ ... ಅರ್ಜಿದಾರರು/ಪೆಟಿಶನರ್
ಪ್ರತಿ
ವಿಪ್ರೊ ಲಿಮಿಟೆಡ್ ಹಾಗೂ ಓರ್ಸ್ ... ಪ್ರತಿವಾದಿಗಳು

ಇಲ್ಲಿ ಕೆಳಗೆ ನಿರ್ದಿಷ್ಟಪಡಿಸಿದ ವಿವರಗಳ ಪ್ರಕಾರ ಡುಪ್ಲಿಕೇಟ್ ಷೇರ್ ಸರ್ಟಿಫಿಕೇಟ್ ಅನ್ನು ನೀಡುವುದಕ್ಕಾಗಿ ಮೂಲ ಷೇರ್‌ಹೋಲ್ಡರ್‌ರ ಕಾನೂನು ಉತ್ತರಾಧಿಕಾರಿ ಎಂದು ಹೇಳಿಕೊಳ್ಳುತ್ತಿರುವ ಅಂದರೆ, ಶ್ರೀ. ಬಾಲುಭಾಯಿ ಭಂಗನ್‌ಲಾಲ್ ಭಾಂಜಿ ಅವರ ಉತ್ತರಾಧಿಕಾರಿಯಾಗಿರುವ ಶ್ರೀ ಪುರುಷೋತ್ತಮ ಸನಾಭಾಯಿ ಪಟೇಲ್ ಅಂದರೆ, ಅರ್ಜಿದಾರರು/ಪೆಟಿಶನರ್ ರಿಂದ ಕಂಪನಿಯು ಕೋರಿಕೆಯನ್ನು ಸ್ವೀಕರಿಸಿದ್ದು ಮೇಲೆ ನಮೂದಿಸಿದ ಇಂಟೆರಿಮ್ ಅಪ್ಲಿಕೇಶನ್‌ನಲ್ಲಿ (ಮಧ್ಯಂತರ ಅರ್ಜಿಯಲ್ಲಿ) ಗೌರವಾನ್ವಿತ ಬಾಂಬೆ ಹೈಕೋರ್ಟ್ 14ನೇ ನವೆಂಬರ್ 2024ರ ಆದೇಶಕ್ಕೆ ಅನುಗುಣವಾಗಿ ಕಂಪನಿಯು ಈ ಮೂಲಕ ಪ್ರಸ್ತುತ ನೋಟೀಸ್ ಅನ್ನು ನೀಡಿದೆ:

ಕ್ರ.ಸಂ.	ಮೂಲ ಷೇರ್‌ಹೋಲ್ಡರ್‌ರ ಹೆಸರು	ಫೋಲಿಯೊ ನಂ.	ಷೇರ್‌ಗಳ ಸಂ.	ಷೇರ್ ಸರ್ಟಿಫಿಕೇಟ್ ಸಂ.	ಡಿಸ್ಟಿಂಕ್ಟಿವ್ ನಂ.	
					ಇಂದ	ಗೆ
1	ಬಾಲುಭಾಯಿ ಭಂಗನ್‌ಲಾಲ್ ಭಾಂಜಿ	WPL000036	4,16,000	38046	1470008205	1470424204
			2,49,600	9372	686172841	686422440
			3,74,400	10081	1390093866	1390468265
	ಒಟ್ಟು ಷೇರುಗಳು		10,40,000			

ಹೇಳಲಾದ ಷೇರ್ ಸರ್ಟಿಫಿಕೇಟ್‌ಗಳು/ಫೋಲಿಯೋ ನಂ. WPL000036 ಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮ್‌ಗಳು/ಹಕ್ಕು /ಅಧಿಕಾರ/ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿ(ಗಳು) ಅಂತಹ ಕ್ಲೇಮ್‌ಗಳನ್ನು ಕಂಪನಿ ಹಾಗೂ/ಅಥವಾ ಕಂಪನಿಯ ರೆಜಿಸ್ಟ್ರಾರ್ ಟ್ರಾನ್ಸ್‌ಫರ್ ಏಜಂಟ್‌ರ ಕೆಳಗೆ ನಮೂದಿಸಲಾಗಿರುವ ವಿಳಾಸಕ್ಕೆ ಈ ನೋಟೀಸಿನ ಪತ್ರಿಕಾ ಪ್ರಕಟಣೆಯ 15 ದಿನಗಳೊಳಗೆ ತಿಳಿಸಬೇಕು ಹಾಗೂ/ಅಥವಾ ಸೂಚಿಸಬೇಕು. ಅದರ ನಂತರ ಕಂಪನಿಯು ಯಾವುದೇ ಕ್ಲೇಮ ಅನ್ನು ಸ್ವೀಕರಿಸುವುದಿಲ್ಲ ಹಾಗೂ /ಅಥವಾ ಅಂಗೀಕರಿಸುವುದಿಲ್ಲ ಹಾಗೂ ಡುಪ್ಲಿಕೇಟ್ ಷೇರ್ ಸರ್ಟಿಫಿಕೇಟ್‌ಗಳನ್ನು ನೀಡುವುದಕ್ಕಾಗಿ ಕಂಪನಿಯು ಅರ್ಜಿದಾರರ ಅಂದರೆ, ಶ್ರೀ ಪುರುಷೋತ್ತಮ ಸನಾಭಾಯಿ ಪಟೇಲ್‌ರ ಕೋರಿಕೆಯನ್ನು ಪರಿಗಣಿಸಲು ಕ್ರಮಕೈಗೊಳ್ಳುತ್ತದೆ. ಈ ನೋಟೀಸ್ ಅನ್ನು ನೀಡುವ ಸಮಯದಲ್ಲಿ, ಮೇಲಿನ ಷೇರ್ ಸರ್ಟಿಫಿಕೇಟ್‌ಗಳೊಂದಿಗೆ ವ್ಯವಹರಿಸುವ ಯಾವುದೇ ವ್ಯಕ್ತಿಯು ವೆಚ್ಚ ಹಾಗೂ ಪರಿಣಾಮಗಳ ಬಗ್ಗೆ ಅವನ/ಅವಳ ರಿಸ್ಕ್‌ನಲ್ಲಿ ಮಾತ್ರ ಮಾಡುತ್ತಾರೆ ಹಾಗೂ ಕಂಪನಿಯು ಯಾವುದೇ ಕ್ಲೇಮ್‌ಗಾಗಿ ಹಾಗೂ/ಅಥವಾ ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ.

ವಿಪ್ರೊ ಲಿಮಿಟೆಡ್
ನೋಂದಾಯಿತ ಕಚೇರಿ : ದೊಡ್ಡಕನ್ನೆಲ್ಲಿ ಸರ್ಜಾಪುರ ರೋಡ್, ಬೆಂಗಳೂರು-560 035

ರೆಜಿಸ್ಟ್ರಾರ್ ಆ್ಯಂಡ್ ಷೇರ್ ಟ್ರಾನ್ಸ್‌ಫರ್ ಏಜಂಟ್:
ಕೆಫಿನ್ ಟೆಕ್ನಾಲಾಜಿಸ್ ಲಿಮಿಟೆಡ್,
ಸೆಲೆನಿಯಂ ಟಾವರ್ ಬಿ, ಪ್ಲಾಟ್ 31 ಹಾಗೂ 32, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ -500 032,ತೆಲಂಗಾನ.
ಶುಲ್ಕ ರಹಿತ ಸಂ. :1800 3455 001

ವಿಪ್ರೊ ಲಿಮಿಟೆಡ್‌ಗಾಗಿ
ಸಹಿ/-
ಎಮ್ ಸನುಲ್ಲಾ ಖಾನ್
ಕಂಪನಿ ಸಕ್ರೆಟರಿ

ದಿನಾಂಕ : ನವೆಂಬರ್ 26, 2024
ಸ್ಥಳ : ಬೆಂಗಳೂರು

CONCEPT

ಬಾಂಗ್ಲಾ ರಾಷ್ಟ್ರ ಧ್ವಜಕ್ಕೆ ಅಗೌರವ ಆರೋಪದಡಿ ದೇಶದ್ರೋಹ ಪ್ರಕರಣ ದಾಖಲು

ಚಿನ್ಮೋಯ್‌ಗೆ ಜಾಮೀನಿಲ್ಲ: ಬಾಂಗ್ಲಾ ಕೋರ್ಟ್



ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸೆ, ದೌರ್ಜನ್ಯದ ಬಗ್ಗೆ ಧ್ವನಿ ಎತ್ತಿದ್ದ 'ಸಮ್ಮಿಲಿತ ಸನಾತನಿ ಜೋತೆ' ಹಿಂದೂ ಸಂಘಟನೆಯ ನಾಯಕ, ಹಿಂದೂ ಸಂತ ಚಿನ್ಮೋಯ್ ಕೃಷ್ಣ ದಾಸ್ ಬ್ರಹ್ಮಚಾರಿ ಅವರಿಗೆ ಜಾಮೀನು ನೀಡಲು ಢಾಕಾ ನ್ಯಾಯಾಲಯ ಮಂಗಳವಾರ ನಿರಾಕರಿಸಿದೆ. ಬದಲಾಗಿ ದೇಶದ್ರೋಹ ಆರೋಪ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ.

ಛಟ್ಟೋಗ್ರಾಮ್‌ನ 6ನೇ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಖಾಜಿ ಷರೀಫುಲ್ ಇಸ್ಲಾಂ ಅವರೆದುರು ಚಿನ್ಮೋಯ್ ಅವರನ್ನು ಪೊಲೀಸರು ಮಂಗಳವಾರ ಬೆಳಗ್ಗೆ 11.45ರಲ್ಲಿ ಹಾಜರುಪಡಿಸಿದರು. ಚಿನ್ಮೋಯ್ ಪರ ವಕೀಲರು ಸಲ್ಲಿಸಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ಮ್ಯಾಜಿಸ್ಟ್ರೇಟ್, ಆರೋಪಿಯನ್ನು ಸೆರೆಮನೆಗೆ ಕರೆದೊಯ್ಯುವಂತೆ ಆದೇಶಿಸಿದರು. ಜಾಮೀನು ನೀಡದಿದ್ದುದಕ್ಕೆ ಆಕ್ರೋಶಗೊಂಡ ಚಿನ್ಮೋಯ್ ಬೆಂಬಲಿಗರು, ಅನುಯಾಯಿಗಳು ಕೋರ್ಟ್‌ನ ಹೊರಗೆ ಘೋಷಣೆ ಕೂಗಲಾ ರಂಭಿಸಿದರು. ಹಿಂದೂಗಳ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಧ್ವನಿ ಎತ್ತಿದ್ದಕ್ಕೆ ಚಿನ್ಮೋಯ್ ಕೃಷ್ಣ ದಾಸ್ ಬ್ರಹ್ಮಚಾರಿ ಅವರನ್ನು ಢಾಕಾ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ ಎಂದು ಹಿಂದೂ ಹೋರಾಟಗಾರರು ಕಿಡಿಕಾರಿದರು.

ಪ್ರತಿಭಟನೆ-ಲಾಠಿ ಪ್ರಹಾರ: ಚಿನ್ಮೋಯ್ ಕೃಷ್ಣ ದಾಸ್ ಅವರನ್ನು ಪೊಲೀಸರು ಬಂಧಿಸಿರುವುದನ್ನು ಖಂಡಿಸಿ ಹಿಂದೂ ಹೋರಾಟಗಾರರು ಮಂಗಳವಾರ ಢಾಕಾ ಸೇರಿದಂತೆ ಬಾಂಗ್ಲಾದೇಶದ ವಿವಿಧೆಡೆ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನಾಕಾರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ ಎಂದು ವರದಿಯಾಗಿದೆ.

ಬಂಧಿಸಿದ್ದೇಕೆ?

ಚಿನ್ಮೋಯ್ ಕೃಷ್ಣದಾಸ್ ಬ್ರಹ್ಮಚಾರಿ ಅವರನ್ನು ಢಾಕಾ ವಿಮಾನ ನಿಲ್ದಾಣ ಬಳಿ ಬಂಧಿಸಿದ ಪೊಲೀಸರು, ಬಳಿಕ ವಿಮಾನದಲ್ಲಿ ಕರೆದೊಯ್ದು ಛಟ್ಟೋಗ್ರಾಮ್ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಅ.30ರಂದು ಛಟ್ಟೋಗ್ರಾಮ್ ಮಾರು ಕಟ್ಟೆ ಪ್ರದೇಶದಲ್ಲಿ ಹಿಂದೂ ಸಮುದಾಯ ಪ್ರತಿಭಟನೆ ನಡೆಸಿದಾಗ ಚಿನ್ಮೋಯ್ ಅವರು ಬಾಂಗ್ಲಾದೇಶದ ರಾಷ್ಟ್ರ ಧ್ವಜಕ್ಕೆ ಅಗೌರವ ತೋರಿದ್ದಾರೆ ಎಂಬ ಆರೋಪದಡಿ ಛಟ್ಟೋಗ್ರಾಮ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಲ್ಲದೇ, ಇತರೆ 19 ಜನರ ವಿರುದ್ಧವೂ ಎಫ್‌ಐಆರ್ ಆಗಿದೆ. ಇದೇ ಪ್ರಕರಣದಲ್ಲಿ ಚಿನ್ಮೋಯ್ ಅವರನ್ನು ಬಂಧಿಸಿರುವು ದಾಗಿ ತಿಳಿದುಬಂದಿದೆ. ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಇದು ಅಘಾತಕಾರಿ ನಡೆಯಾಗಿದೆ ಎಂದು ರಾಧಾರಾಮನ್ ದಾಸ್ ಎಂಬವರು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ದಾಸ್ ಅವರನ್ನು ಢಾಕಾ ವಿಮಾನ ನಿಲ್ದಾಣದಿಂದ ಪೊಲೀಸರು ಬಂಧಿಸಿ ಕರೆದುಕೊಂಡು ಹೋಗಿದ್ದನ್ನು ವಿಮಾನ ನಿಲ್ದಾಣ ವ್ಯವಸ್ಥಾಪಕರು ಖಚಿತಪಡಿಸಿದ್ದಾರೆ.

ಚಿನ್ಮೋಯ್ ಬಂಧನಕ್ಕೆ ಭಾರತ ಖಂಡನೆ

ದೆಹಲಿ: ಹಿಂದೂ ಪರ ಹೋರಾಟಗಾರ ಚಿನ್ಮೋಯ್ ಕೃಷ್ಣದಾಸ್ ಅವರನ್ನು ಢಾಕಾ ಪೊಲೀಸರು ಬಂಧಿಸಿರುವುದನ್ನು ಭಾರತ ತೀವ್ರವಾಗಿ ಖಂಡಿಸಿದೆ. ಈ ಬಗ್ಗೆ ಮಂಗಳವಾರ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಶ್ರೀ ಚಿನ್ಮೋಯ್ ಕೃಷ್ಣದಾಸ್ ಅವರನ್ನು ಬಂಧಿಸಿರುವುದು ಮತ್ತು ಜಾಮೀನು ನೀಡದೇ ಇರುವುದನ್ನು ಬಲವಾಗಿ ಖಂಡಿಸುತ್ತೇವೆ. ಬಾಂಗ್ಲಾದೇಶದಲ್ಲಿ ಹಿಂದೂ ನಾಯಕರ ಸುರಕ್ಷತೆ ವಿಚಾರದಲ್ಲಿ ನಮಗೆ ಬಹಳ ಕಳವಳವಾಗುತ್ತಿದೆ ಎಂದೂ ಹೇಳಿದೆ. ತನ್ನ ದೇಶದಲ್ಲಿನ ಅಲ್ಪಸಂ ಖ್ಯಾತ ಹಿಂದೂ ಸಮಾಜದ ಸುರಕ್ಷತೆಯನ್ನು ಬಾಂಗ್ಲಾದೇಶ ಸರಕಾರ ಖಚಿತಪಡಿಸಬೇಕಿದೆ ಎಂದೂ ಸಚಿವಾಲಯ ಆಗ್ರಹಿಸಿದೆ.

ನಾಲ್ಕು ರಾಜ್ಯಕ್ಕೆ ಬೇಕಿದ್ದ ಸರಣಿ ಹಂತಕ ಬಂಧನ



ಗಾಂಧಿನಗರ: ಯುವತಿಯರ ಅತ್ಯಾಚಾರ ನಡೆಸಿ ಕೊಲೆ ಮಾಡುತ್ತಿದ್ದ, ಕರ್ನಾಟಕ ಸೇರಿ 4 ರಾಜ್ಯಗಳ ಪೊಲೀಸರಿಗೆ ಬೇಕಾಗಿದ್ದ ಸರಣಿ ಹಂತಕನನ್ನು ಗುಜರಾತ್‌ನ ಅಹಮದಾಬಾದ್ ಪೊಲೀಸರು ಬಂಧಿಸಿದ್ದಾರೆ. ಹರಿಯಾಣದ ರೋಹ್ಟಕ್‌ನ ರಾಹುಲ್ ಜಾಟ್ ಬಂಧಿತ ಆರೋಪಿ.

ನ.14ರಂದು ಟ್ಯೂಷನ್‌ನಿಂದ ಮನೆಗೆ ಹೋಗುತ್ತಿದ್ದ 19 ವರ್ಷದ ಯುವತಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಿದ್ದ. ಶವವನ್ನು ಉದ್ವಾಡ ರೈಲು ನಿಲ್ದಾಣ ಸಮೀಪ ಹಳಿ ಮೇಲೆ ಎಸೆದು ಹೋಗಿದ್ದ. ಇದಕ್ಕೂ ಮುನ್ನ ಅಕ್ಟೋಬರ್‌ನಲ್ಲಿ ಮಹಾ ರಾಷ್ಟ್ರದ ಸೋಲಾಪುರ ಬಳಿ ರೈಲಿನಲ್ಲಿ ಮಹಿಳೆಯ ಅತ್ಯಾಚಾರ ನಡೆಸಿ ಕೊಲೆ ಮಾಡಿದ್ದ. ಕರ್ನಾಟಕದ ಮೂಲ್ಕಿಯಲ್ಲಿ ರೈಲು ಪ್ರಯಾಣಿಕನನ್ನು ಹತ್ಯೆ ಮಾಡಿದ ಆರೋಪವೂ ಈತನ ಮೇಲಿದೆ. ಪಶ್ಚಿಮ ಬಂಗಾಳದ ಹೌರಾ ರೈಲು ನಿಲ್ದಾಣ ಬಳಿ ಕತಿಹಾರ್ ಎಕ್ಸ್‌ಪ್ರೆಸ್ ರೈಲಿನಲ್ಲಿ ವೃದ್ಧ ವ್ಯಕ್ತಿಯನ್ನು ಇರಿದು ಕೊಂದಿದ್ದ. ವಲ್ಸಾದ್‌ನ ವಾಪಿ ರೈಲು ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ಆರೋಪಿ ರಾಹುಲ್ ಜಾಟ್‌ನನ್ನು ರೈಲ್ವೆ ಪೊಲೀಸರ ಜತೆಗೂಡಿ ಸ್ಥಳೀಯ ಪೊಲೀಸರು ಬಂಧಿಸಿದ್ದಾರೆ.

ಇವಿಎಂ ಬೇಡವೇ ಬೇಡ ಮತಪತ್ರ ಬೇಕು: ಖರ್ಗೆ



ದೆಹಲಿ: ನಮಗೆ ವಿದ್ಯುನ್ಮಾನ ಮತಯಂತ್ರಗಳ(ಇವಿಎಂ) ಮೇಲೆ ನಂಬಿಕೆ ಇಲ್ಲ. ಮತಪತ್ರದಲ್ಲೇ ಚುನಾವಣೆ ನಡೆಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಆಗ್ರಹಿಸಿದ್ದಾರೆ.

ದೆಹಲಿಯ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ಪಕ್ಷ ಮಂಗಳವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತ್ ಜೋಡೋ ಯಾತ್ರೆಯಂತೆಯೇ ಚುನಾವಣೆಯಲ್ಲಿ ಮತಪತ್ರ ಬಳಕೆಗೆ ಆಗ್ರಹಿಸಿ ರಾಷ್ಟ್ರವ್ಯಾಪಿ ಪ್ರಚಾರ ನಡೆಸುತ್ತೇವೆ ಎಂದರು. 'ಇಂಥ ಹೇಳಿಕೆ ಮೂಲಕ ಕಾಂಗ್ರೆಸ್ ಅಧ್ಯಕ್ಷರು ಸುಪ್ರೀಂ ಕೋರ್ಟ್ ಆದೇಶಕ್ಕೆ ಅಗೌರವ ತೋರಿ ದ್ದಾರೆ. ಕಾಂಗ್ರೆಸ್ ಕರ್ನಾಟಕ, ಜಮ್ಮು- ಕಾಶ್ಮೀರ, ತೆಲಂಗಾಣ, ವಯನಾಡು, ಹಿಮಾಚಲ ಪ್ರದೇಶ, ಜಾರ್ಖಂಡ್ ಚುನಾವಣೆಯಲ್ಲಿ ಗೆದ್ದಾಗ ಖರ್ಗೆ ಅವರಿಗೆ ಚುನಾವಣಾ ಆಯೋಗ ಮತ್ತು ಇವಿಎಂಗಳು ಸರಿಯಾಗಿ ಕಾರ್ಯನಿರ್ವಹಿಸಿವೆ ಎನಿಸಿದೆ. ಈಗ ಮಹಾರಾಷ್ಟ್ರದಲ್ಲಿ ಬಿಜೆಪಿ ಗೆಲುವು ಕಂಡು 'ಇವಿಎಂ' ಸರಿ ಇಲ್ಲ ಎನಿಸುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾ ವಾಲಾ ಖಂಡಿಸಿದ್ದಾರೆ.

ರಾಜ್ಯಸಭೆ 6 ಸ್ಥಾನ; ಡಿ.20ಕ್ಕೆ ಚುನಾವಣೆ



ದೆಹಲಿ: ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಹರಿಯಾಣ ರಾಜ್ಯಗಳಿಂದ ಖಾಲಿಯಾಗಿರುವ ರಾಜ್ಯಸಭೆಯ ಆರು ಸ್ಥಾನಗಳಿಗೆ ಡಿ.20ರಂದು ಚುನಾವಣೆ ನಡೆಸಲಾಗುವುದು ಎಂದು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ವೇಳಾಪಟ್ಟಿ ಪ್ರಕಟಿಸಿದೆ. ಡಿ.20ರ ಸಂಜೆ ಫಲಿತಾಂಶ ಪ್ರಕಟವಾಗಲಿದೆ ಎಂದು ಆಯೋಗ ಹೇಳಿದೆ. ಆಂಧ್ರಪ್ರದೇಶದಿಂದ ಮೂರು ಸ್ಥಾನಗಳು ಹಾಗೂ ಒಡಿಶಾ, ಪಶ್ಚಿಮ ಬಂಗಾಳ ಮತ್ತು ಹರಿಯಾಣ ರಾಜ್ಯಗಳಿಂದ ತಲಾ ಒಂದು ಸ್ಥಾನ ಭರ್ತಿಯಾಗಬೇಕಿದೆ. ಆಂಧ್ರದ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ವೆಂಕಟರಮಣ ರಾವ್ ಮೋಪಿದೇವಿ, ಬೀಧ ಮಸ್ತಾನ್ ರಾವ್ ಯಾದವ್ ಮತ್ತು ಆರ್. ಕೃಷ್ಣಯ್ಯ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ರಾಜ್ಯಸಭೆ ಸ್ಥಾನಗಳು ತೆರವಾಗಿವೆ. ಸಿಎಂ ಚಂದ್ರಬಾಬು ನಾಯ್ಡು ಅವರ ನೇತೃತ್ವದ ತೆಲುಗು ದೇಶಂ ಪಕ್ಷ(ಟಿಡಿಪಿ) ಈ ಮೂರೂ ಸ್ಥಾನಗಳನ್ನು ಪಡೆದುಕೊಳ್ಳುವ ನಿರೀಕ್ಷೆಯಿದೆ. ಬಿಜು ಜನತಾ ದಳ ಸಂಸದ ಸುಜಿತ್ ಕುಮಾರ್ ರಾಜೀನಾಮೆ ನೀಡಿದ್ದರಿಂದ ಒಂದು ಸ್ಥಾನ ತೆರವಾಗಿದ್ದು, ಈ ಬಾರಿ ಬಿಜೆಪಿ ಈ ಸ್ಥಾನ ಗೆಲ್ಲುವ ನಿರೀಕ್ಷೆಯಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸಂಸದ ಜವಾಹರ್ ಸಿಕಾರರ್ ರಾಜೀನಾಮೆ ನೀಡಿದ್ದು, ಟಿಎಂಸಿ ಪಕ್ಷದವರೇ ಈ ಸ್ಥಾನ ಹೊಂದಲಿದ್ದಾರೆ.

ಸಮಾಚಾರ ಸಣ್ಣದಲ್ಲ

700 ಕೋಟಿ ವೆಚ್ಚದ ಕಾಮಗಾರಿಗೆ ಟೆಂಡರ್

ಬೆಂಗಳೂರು: ಬಿಬಿಎಂಪಿಯು 700ಕೋಟಿನ ರು. ವೆಚ್ಚದ ರಸ್ತೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳುತ್ತಿದ್ದು, ಈ ಕುರಿತು ಗುರುವಾರ ಟೆಂಡರ್ ಕರೆಯಲಾಗುವುದು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು. ಈ ಕುರಿತು ಮಾತನಾಡಿದ ಅವರು, ನಗರದಲ್ಲಿ ರಸ್ತೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಶೀಘ್ರ ಟೆಂಡರ್ ಕರೆಯಲಾಗುವುದು. ಪಾಲಿಕೆಯು ಸುಮಾರು 700 ಕೋಟಿ ರು. ವೆಚ್ಚದ ರಸ್ತೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಗುರುವಾರ ಟೆಂಡರ್ ಕರೆಯಲಾಗುತ್ತದೆ. 21 ದಿನಗಳಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ 2025ರ ಜನವರಿಯಿಂದ ಕಾಮಗಾರಿ ಕೈಗೆತ್ತಿಕೊಳ್ಳಲಾಗು ವುದು ಎಂದು ಮಾಹಿತಿ ನೀಡಿದರು. ಈ ಬಾರಿ ಬಿಬಿಎಂಪಿಯು ವಲಯವಾರು ಬಜೆಟ್ ಮಂಡನೆ ಮಾಡಲು ನಿರ್ಧರಿಸಲಾಗಿದ್ದು, ಆದಾಯ ಸಂಗ್ರಹಣೆ, ಅಂದಾಜುಗಳು ಮತ್ತು ಮಾಡಬೇಕಾದ ಕಾಮಗಾರಿ ಗಳ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡ ಲಾಗುತ್ತದೆ. ಇಲ್ಲಿಯವರೆಗೆ ಆಸ್ತಿ ತೆರಿಗೆ ರೂಪದಲ್ಲಿ 3,751 ಕೋಟಿ ರುಪಾಯಿ ಸಂಗ್ರಹಿಸಲಾಗಿದ್ದು, ನವೆಂಬರ್ ಅಂತ್ಯಕ್ಕೆ 4,000 ಕೋಟಿ ತಲುಪುವ ಗುರಿ ಹೊಂದಲಾಗಿದೆ. ನಂತರದ ನಾಲ್ಕು ತಿಂಗಳಲ್ಲಿ ಆರ್ಥಿಕ ವರ್ಷದ ಗುರಿ 5,200 ಕೋಟಿ ರು. ಗುರಿ ಮುಟ್ಟಲು ಪ್ರಯತ್ನಿಸಲಾಗುತ್ತದೆ ಎಂದರು.

ಇಂಧನ ಇಲಾಖೆಯಿಂದ ಪ್ರೀಪೇಯ್ಡ್ ವಿದ್ಯುತ್

ಬೆಂಗಳೂರು: ನಗರದಲ್ಲಿ ಮೊಬೈಲ್ ರೀ ಚಾರ್ಜ್ ಮಾದರಿಯಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಬೆಸ್ಕಾಂ ಜಾರಿಗೆ ತರುತ್ತಿದ್ದು, ರೀಚಾರ್ಜ್ ಮುಗಿ ದಂತೆ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಲಿದೆ. ನಗರದ ಹೊಸ ಕಟ್ಟಡಗಳಿಗೆ ಮೊದಲು ಪ್ರೀಪೇಯ್ಡ್ ಮೀಟರ್ ಅಳವಡಿಸಲಾಗುತ್ತದೆ ಬಳಿಕ ಎಲ್ಲಾ ಮನೆಗಳಿಗೆ ಅಳವಡಿಸಲಾಗುತ್ತದೆ. ಮೊಬೈಲ್ ರಿಚಾರ್ಜ್ ಮಾಡಿದಂತೆ ಶುಲ್ಕ ಪಾವತಿಸಿದ ಬಳಿಕ ವಿದ್ಯುತ್ ಬಳಕೆ ಸಾಧ್ಯವಾಗಿದೆ. ವಿದ್ಯುತ್ ಬಳಸಿ ಬಿಲ್ ಕಟ್ಟುವ ವ್ಯವಸ್ಥೆಯಿಂದ ಭಾರೀ ಸಮಸ್ಯೆ ಯಾಗುತ್ತಿದ್ದು, ಗ್ರಾಹಕರು ವಿದ್ಯುತ್ ಬಿಲ್ ಪಾವತಿ ಮಾಡದೇ ವಿದ್ಯುತ್ ಬಳಕೆ ಮಾಡಿಕೊಳ್ಳುತ್ತಿರು ವುದರಿಂದ ಇಲಾಖೆಗೆ ಭಾರೀ ನಷ್ಟವುಂಟಾಗಿದೆ. ಜತೆಗೆ ಈಗಾಗಲೇ ಆಗುತ್ತಿರುವ ನಷ್ಟ ಭರಿಸಲು ಇಂಧನ ಇಲಾಖೆಯು ನಾನಾ ರೀತಿಯಲ್ಲಿ ಕಸರತ್ತು ನಡೆಸುತ್ತಿದ್ದು, ಹೊಸ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವವರಿಗೆ ಮಾತ್ರ ಪ್ರೀಪೇಯ್ಡ್ ಮೀಟರ್ ಕಡ್ಡಾಯಗೊಳಿಸಲಾಗಿದೆ. ಮುಂದಿನ ದಿನ ಗಳಲ್ಲಿ ಹಂತ ಹಂತವಾಗಿ ಹಳೆಯ ಗ್ರಾಹಕರಿಗೂ ಪ್ರೀಪೇಯ್ಡ್ ಮೀಟರ್ ಅನ್ವಯವಾಗಲಿದೆ. ಹೆಚ್ಚು ವರಿ ವಿದ್ಯುತ್ ಬಳಕೆ ಮಾಡಿದಂತೆ ದುಡ್ಡು ಕೂಡಾ ಕಟ್ ಆಗಲಿದ್ದು, ಬ್ಯಾಲೆನ್ಸ್ ಇಲ್ಲವಾದಲ್ಲಿ ವಿದ್ಯುತ್ ಸಂಪರ್ಕವೂ ಕಡಿತವಾಗಲಿದೆ.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಗರದ 66/11ಕೆ.ವಿ ಸೌತ್ ಸಿಟಿ ವಿವಿ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾಮ ಗಾರಿಯನ್ನು ಹಮ್ಮಿಕೊಳ್ಳುವುದ ರಿಂದ ಬುಧವಾರ ಬೆಳಗ್ಗೆ 10.00 ರಿಂದ ಸಂಜೆ 3.00 ಗಂಟೆಯ ವರೆಗೆ ಲಕ್ಷ್ಮಿ ಲೇಔಟ್, ಸೌತ್ ಸಿಟಿ ಅಪಾರ್ಟ್ ಮೆಂಟ್, ಕಮ್ಮನಹಳ್ಳಿ, ಶಾಂತಿನಿಕೇತನ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಲೀಲಾ ವೆಂಚ್ಯೂರ್ ನ ಸ್ಟೇಷನ್‌ನಲ್ಲಿ ನ.28ರ ಬೆಳಗ್ಗೆ 9.00ರಿಂದ 5.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ಏರ್‌ಪೋರ್ಟ್ ರಸ್ತೆ, ಕೋಡಿಹಳ್ಳಿ, 16 ಮತ್ತು 19ನೇ ಮುಖ್ಯ ರಸ್ತೆ, ಎಚ್ ಎಎಲ್ 2ನೇ ಹಂತ, ಕಾಲ್ವನ್ ಟವರ್ಸ್,ಎನ್ ಎಎಲ್ ಕಾಂಪೌಂಡ್, ಕೋಡಿಹಳ್ಳಿ, ರಾಮಟೆಂಪಲ್ ರಸ್ತೆ, ವೆಂಕಟೇಶ್ವರ ಕಾಲೋನಿ, ಬೂಮರೆಡ್ಡಿ ಕಾಲೋನಿ, 515 ಕಾಲೋನಿ, ಕೋಡಿಹಳ್ಳಿ ಗ್ರಾಮ, ದೊಮ್ಮಲೂರು 2ನೇ ಹಂತ, 6ನೇ ಮುಖ್ಯ ಡಿಫೈನ್ಸ್ ಕಾಲೋನಿ, ಹಳೆ ತಿಪ್ಪಸಂದ್ರ, ಹೊಸ ತಿಪ್ಪಸಂದ್ರ, ಎಂ.ಜಿ.ರಸ್ತೆ, ಚರ್ಚ್‌ರಸ್ತೆ,ಸೇಂಟ್ ಮಾರ್ಕ್ಸ್ ರಸ್ತೆ, ಲ್ಯಾವೆಲ್ಲೆ ರಸ್ತೆ, ಮ್ಯೂಸಿಯಂ ರಸ್ತೆ, ರೆಸಿಡೆನ್ಸಿ ರಸ್ತೆ, ಟ್ರಿನಿಟಿ ಸರ್ಕಲ್, ಹಲಸೂರು ರಸ್ತೆ, ಹಲಸೂರು ಗೀತಾಂಜಲಿ ಲೇಔಟ್ ಸುತ್ತಮುತ್ತಲಿನ ಪ್ರದೇಶ ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬಿಜೆಪಿಯಿಂದ ಉಚ್ಚಾಟನೆ

ಹಾವೇರಿ: ಪಕ್ಷ ವಿರೋಧಿ ಚಟುವಟಿಕೆ ಮಾಡಿದ ಹಿನ್ನೆಲೆಯಲ್ಲಿ ಇಬ್ಬರನ್ನು ಬಿಜೆಪಿಯಿಂದ ಉಚ್ಚಾಟನೆ ಮಾಡಲಾಗಿದೆ. ಬಿಜೆಪಿ ಪಕ್ಷದಲ್ಲಿ ಇದ್ದುಕೊಂಡು ಪಕ್ಷದ ಹೆಸರಲ್ಲಿ ಗುರುತಿಸಿಕೊಂಡು ಅಧಿಕಾರ ಅನುಭವಿಸಿ ಶಿಗ್ಗಾಂವಿ – ಸವಣೂರು ಬೈ ಎಲೆಕ್ಷನ್ ಸಮಯದಲ್ಲಿ ಪಕ್ಷ ವಿರೋಧಿ ಕೆಲಸ ಮಾಡಿರುವ ಶ್ರೀಕಾಂತ್ ದುಂಡಿಗೌಡ್ರ ಹಾಗೂ ಸಂಗಮೇಶ ಕಂಬಾಳಿಮಠ ಅವರನ್ನು ಹಾವೇರಿ ಜಿಲ್ಲಾ ಬಿಜೆಪಿ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಅರುಣಕುಮಾರ ಪೂಜಾರ ತಿಳಿಸಿದ್ದಾರೆ.

{ ಎಂ.ಬಿ. ಪಾಟೀಲ } ಸಚಿವ

ರಾಜ್ಯ ಸರ್ಕಾರ ಸರಳ, ಸುಗಮ ಮತ್ತು ಉದ್ಯಮಸ್ನೇಹಿ ಉಪಕ್ರಮಗಳಿಗೆ ಬದ್ಧ ವಾಗಿದ್ದು, ವಿವಿಧ ರೀತಿಯ ಅನುಮತಿ, ಪರವಾನಗಿಯನ್ನು ಒಂದೇ ವ್ಯವಸ್ಥೆ ಮೂಲಕ ನೀಡಲು ಏಕಗವಾಕ್ಷಿ ಯೋಜನೆ ರೂಪಿಸ ಲಾಗುತ್ತಿದೆ. ಇದಕ್ಕೆ ಅಗತ್ಯವಿರುವ ತಂತ್ರಾಂಶ ವನ್ನು ಜನವರಿ ಯೊಳಗೆ ಅಳವಡಿಸಿ ಕೊಳ್ಳಲಾಗುವುದು.

ನಮ್ಮ ಮೆಟ್ರೋದ 21.26ಕಿ.ಮೀ ಉದ್ದದ ಎತ್ತರಿಸಿದ ಗುಲಾಬಿ ಮಾರ್ಗ | ಕೊತ್ತನೂರು ಡಿಪೋದಿಂದ ಸಂಚಾರ

ಡಿಸೆಂಬರ್ 2025ಕ್ಕೆ ಗುಲಾಬಿ ಮಾರ್ಗ ಸಂಚಾರಕ್ಕೆ ಮುಕ್ತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋದ 21.26ಕಿ.ಮೀ ಉದ್ದದ ಎತ್ತರಿಸಿದ ಗುಲಾಬಿ ಮಾರ್ಗ ಡಿಸೆಂಬರ್ 2025ರ ವೇಳೆಗೆ ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗಲಿದ್ದು, ವರ್ಷದ ಮಧ್ಯ ಭಾಗದಲ್ಲಿ ಬಿಇಎಂಎಲ್ ಲಿಮಿಟೆಡ್‌ನಿಂದ ಮೊದಲ ರೈಲನ್ನು ಹಸ್ತಾಂತರಿಸಲಾಗುತ್ತಿದೆ.

ತಾವರೆಕೆರೆ-ಕಾಳೇನ ಅಗ್ರಹಾರ ನಡುವಿನ 7.5 ಕಿ.ಮೀ. ಎತ್ತರಿಸಿದ ಮಾರ್ಗದಲ್ಲಿ 6 ನಿಲ್ದಾಣಗಳ ಕಾಮಗಾರಿ ತ್ವರಿತಗತಿಯಲ್ಲಿ ಸಾಗಿದ್ದು, ನಿಗದಿತ ಗಡುವಿನಲ್ಲಿ ಕಾಮಗಾರಿ ಮುಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಮೆಟ್ರೋದ ಹಿರಿಯ ಅಧಿಕಾರಿ ಯೊಬ್ಬರು ಈ ಕುರಿತು ಮಾತನಾಡಿ, ಮುಂದಿನ ವರ್ಷದ ಜೂನ್ ವೇಳೆಗೆ ಬಿಇಎಂಎಲ್ ಕಂಪನಿ 53 ಸೆಟ್ ರೈಲು ನೀಡಬೇಕಿದ್ದು, ಜುಲೈ ವೇಳೆಗೆ ಮತ್ತೊಂದು ಸೆಟ್ ಹಸ್ತಾಂತರವಾಗುವ ನಿರೀಕ್ಷೆಯಿದೆ.

ಡಿಸೆಂಬರ್ ವೇಳೆಗೆ ಎರಡು ಸೆಟ್ ಸಂಪೂರ್ಣವಾಗಿ ಕೈ ಸೇರಲಿದ್ದು, ಡಿಸೆಂಬರ್‌ನಲ್ಲಿ ಮಾರ್ಗದ ಉದ್ಘಾಟನೆ ವೇಳೆಗೆ 9–10 ಸೆಟ್ ರೈಲುಗಳು ಸಿದ್ಧವಾಗಿರಲಿದೆ ಎಂದರು. ತಾವರಕೆರೆ, ಜಯದೇವ ಇಂಟರ್‌ಚೇಂಜ್ ನಿಲ್ದಾಣ, ಜೆಪಿ ನಗರ 5ನೇ ಹಂತ, ಐಐಎಂಬಿ, ಹುಳಿಮಾವು ಮತ್ತು ಕಾಳೇನ ಅಗ್ರಹಾರ ನಿಲ್ದಾಣಗಳು ಈ ಮಾರ್ಗದಲ್ಲಿದ್ದು, ರೈಲು ನಿಲ್ಲುವ ವಯಾಡಕ್ ಬ್ರಿಡ್ಜ್ ಸಂಪೂರ್ಣ ಸಿದ್ಧವಾಗಿದೆ. ರೈಲು ಹಳಿ ಹಾಕುವ ಕಾರ್ಯ ಶೇ.70ರಷ್ಟು ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಗುಲಾಬಿ ಮಾರ್ಗದ ರೈಲುಗಳು ಕೊತ್ತನೂರು ಡಿಪೋದಿಂದ ಸಂಚಾರ: ಈ ಮಾರ್ಗದ ನಾಲ್ಕು ನಿಲ್ದಾಣಗಳಿಗೆ ಅಂತಿಮ ರೂಪ ನೀಡಲಾಗುತ್ತಿದ್ದು, ಜೆ. ಪಿ. ನಗರ ನಿಲ್ದಾಣ ಮೆಟ್ರೋ ಹಂತ-3ರ ಕಾಮಗಾರಿ ಪೂರ್ಣಗೊಂಡಿದೆ. ಮಾರ್ಚ್ 2025ಕ್ಕೆ ಕಾಮಗಾರಿ ಸಂಪೂರ್ಣವಾಗಿ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ. ಕಾಳೇನ ಅಗ್ರಹಾರದಲ್ಲಿ ಪ್ಲಾಟ್ ಫಾರ್ಮ್‌ನ ಕಾಮಗಾರಿ ಶೇ.50ರಷ್ಟು ಪೂರ್ಣ ಗೊಂಡಿದ್ದು, ಬಲಭಾಗದಲ್ಲಿ ಇನ್ನೂ ಕಾಮಗಾರಿ ನಡೆಯಬೇಕಿದೆ. ಗುಲಾಬಿ ಮಾರ್ಗದ ರೈಲುಗಳು ಕೊತ್ತನೂರು ಡಿಪೋದಿಂದ ಸಂಚಾರ ನಡೆಸಲಿವೆ. ಈ ಡಿಪೋದ ಶೇ 80ರಷ್ಟು ಕಾಮಗಾರಿ ಪೂರ್ಣ ಗೊಂಡಿದೆ. ಇಲ್ಲಿಂದಲೇ ಗುಲಾಬಿ ಮಾರ್ಗದಲ್ಲಿ ರೈಲುಗಳು ಹೊರಡಲಿವೆ. ನಮ್ಮ ಮೆಟ್ರೋ ಮಾರ್ಚ್ 2025 ರೊಳಗೆ ಎಲ್ಲಾ ಸಿವಿಲ್ ಕಾಮಗಾರಿ ಗಳನ್ನು ಪೂರ್ಣಗೊಳಿಸುವ ಗುರಿ ಹೊಂದಿದ್ದು, ಸಿಗ್ನಲಿಂಗ್, ಟೆಲಿ ಕಮ್ಯುನಿಕೇಶನ್ ಮುಂತಾದ ಕಾಮಗಾರಿಗಳನ್ನು ಬಳಿಕ ಕೈಗೊಳ್ಳಲಾಗುತ್ತದೆ ಎಂದು ವಿವರಿಸಿದರು.

2026ಕ್ಕೆ ಸುರಂಗ ಮಾರ್ಗ ಪೂರ್ಣ

ವರ್ಷದ ಅಕ್ಟೋಬರ್ 30 ರಂದು ಒಂಬತ್ತನೇ ಮತ್ತು ಅಂತಿಮ ಸುರಂಗ ಕೊರೆಯುವ ಯಂತ್ರ, ಗುಲಾಬಿ ಮಾರ್ಗದಲ್ಲಿ 13.86-ಕಿಮೀ ಸುರಂಗ ಕೊರೆಯುವ ಕಾರ್ಯ ಪೂರ್ಣಗೊಳಿಸಿದ್ದು, ಹಳಿ ಹಾಕುವ ಕಾಮಗಾರಿ ಆರಂಭವಾಗಿದೆ. 4 ಕಿ. ಮೀ. ಕಾಮಗಾರಿ ಪೂರ್ಣಗೊಂಡಿದೆ. ಟೆಕ್ಸ್‌ಮಾಕೋ ರೈಲು ಎಂಜಿನಿಯರಿಂಗ್ ಲಿಮಿಟೆಡ್ ಕೆಲಸ ನಿಧಾನಗತಿಯಲ್ಲಿ ಸಾಗಿದ್ದು, ಈಗ ಎಲ್ ಅಂಡ್ ಟಿ ಲಿಮಿಟೆಡ್ ಸಹ ಕಾಮಗಾರಿಗೆ ಕೈ ಜೋಡಿಸಿದೆ. ಈ ಮಾರ್ಗದ ಸುರಂಗ ಮಾರ್ಗ 2026ಕ್ಕೆ ಸಂಪೂರ್ಣವಾಗಲಿದೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಕಾರಿನ ಮೇಲೆ ಬಿದ್ದ ಮೆಟ್ರೋ ಬ್ರಿಡ್ಜ್‌ನ ಸಿಮೆಂಟ್ ತುಂಡು

ಬೆಂಗಳೂರು: ಚಲಿಸುತ್ತಿದ್ದ ಕಾರಿನ ಮೇಲೆ ಮೆಟ್ರೋ ಬ್ರಿಡ್ಜ್‌ನ ಸಿಮೆಂಟ್ ತುಂಡು ಬಿದ್ದ ಪರಿಣಾಮ ಕಾರಿನ ಗಾಜು ಒಡೆದು ಹೋಗಿದ್ದು, ಒಳಗಿದ್ದವರು ಅಪಾಯದಿಂದ ಪಾರಾಗಿರುವ ಘಟನೆ ಮೈಸೂರು ರಸ್ತೆಯಲ್ಲಿ ನಡೆದಿದೆ.

ಮೈಸೂರು ರಸ್ತೆಯ ಬಳಿ ಮೆಟ್ರೋ ಬ್ರಿಡ್ಜ್‌ನಿಂದ ಸೋಮವಾರ ಬೆಳಗ್ಗೆ ಸಿಮೆಂಟಿನ ಕಲ್ಲು ಕಳಚಿ ಚಲಿಸುತ್ತಿದ್ದ ಕಾರಿನ ಮೇಲೆ ಬಿದ್ದಿದೆ. ಬಿದ್ದ ಪರಿಣಾಮ ಕಾರಿನ ಮಾಲೀಕ ನಮ್ಮ ಮೆಟ್ರೋ ಮೇಲೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಯಲಹಂಕದ ಬಾಗಲೂರಿನಿಂದ ಮೈಸೂರಿಗೆ ಕಾರ್ಯಕ್ರಮಕ್ಕೆ ನವೀನ್ ರಾಜ್ ಮತ್ತು ಕುಟುಂಬ ಹೋಗುತ್ತಿದ್ದಾಗ ಮೈಸೂರು ರಸ್ತೆಯ ಪಿಲ್ಲರ್ ನಂಬರ್ 393 ಬಳಿ ಈ ಘಟನೆ ನಡೆದಿದೆ.

ಮೆಟ್ರೋ ರೈಲು ಹೋಗುತ್ತಿದ್ದಂತೆ ಅಲ್ಲಿನ ವೈಬ್ರೇಷನ್‌ಗೆ ಸಿಮೆಂಟ್ ಕಳಚಿ ಬಿದ್ದಿದೆ. ಖರೀದಿಸಿ ಒಂದು ತಿಂಗಳು ಕೂಡ ಆಗದ ಎಸ್‌ಯುವಿ 700 ಕಾರಿನ ಮುಂದಿನ ಗ್ಲಾಸ್ ಒಡೆದಿದ್ದು, ಕಾರಿನ ಮೇಲ್ಭಾಗ ಹಾನಿಯಾಗಿದೆ. ಕಲ್ಲು ಬಿದ್ದ ರಭಸಕ್ಕೆ ಕಾರಿನಲ್ಲಿದ್ದವರು ಭಯಗೊಂಡಿದ್ದಾದರೂ ಪಾರಾಗಿದ್ದಾರೆ.

ಪೊಲೀಸ್ ಠಾಣೆಗೆ ದೂರು ನೀಡುತ್ತಿದ್ದಂತೆ, ಮೆಟ್ರೋ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಘಟನೆ ಬಗ್ಗೆ ಕಾರು ಮಾಲೀಕನಿಂದ ಮಾಹಿತಿ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಕಾರು ಮೇಲೆ ಬಿದ್ದ ಆ ಸಿಮೆಂಟ್ ಕಲ್ಲು ಯಾರ ಮೇಲಾದರೂ ಬಿದ್ದಿದ್ದರೆ ಏನು ಗತಿ? ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಇದಕ್ಕೆ ಶಾಶ್ವತವಾದ ಪರಿಹಾರ ಹಾಗೂ ಸರಿಯಾದ ರೀತಿಯ ನಿರ್ವಹಣೆ ನಮ್ಮ ಮೆಟ್ರೋ ಮಾಡಬೇಕಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನ ವಿಶ್ವೇಶ್ವರ ಪುರದ ಸಜ್ಜನರಾವ್ ವೃತ್ತದಲ್ಲಿ ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ,ಲೋಕಮಾನ್ಯ ಸಂಘ, ವಾಸವಿ ಕ್ಲಬ್ , ಕರ್ನಾಟಕ ಲೇಖಕರ ಸಂಘ, ಸಮರ್ಪಣಾ ಸಂಘಟನೆ– ಕನ್ನಡ ಪಕ್ಷ, ರಾಮಯ್ಯಂಗಾರ್ ರಸ್ತೆ ನಿವಾಸಿಗಳ ಸಂಘ ಸೇರಿದಂತೆ ಹಲವು ಸಂಘಟನೆಗಳ ಆಶ್ರಯದಲ್ಲಿ ಮಂಗಳವಾರ ಸಂವಿಧಾನ ದಿನಾಚರಣೆ ನಡೆಯಿತು.

ಪೊಲೀಸ್ ಜತೆ ಬೆಂಬಲಿಗರ ಘರ್ಷಣೆ: ಕಂಡಲ್ಲಿ ಗುಂಡು ಆದೇಶ

ಪಾಕ್‌ನಲ್ಲಿ ಮತ್ತೆ ಹಿಂಸಾಚಾರ 5 ಇಮ್ರಾನ್ ಬೆಂಬಲಿಗರ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಮತ್ತೆ ರಾಜಕೀಯ ಹಿಂಸಾಚಾರ ಭುಗಿಲೆದ್ದಿದೆ. ಮಾಜಿ ಪ್ರಧಾನಿ, ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಮುಖಂಡ ಇಮ್ರಾನ್‌ಖಾನ್ ಬೆಂಬಲಿಗರು ಇಸ್ಲಾಮಾಬಾದ್‌ನಲ್ಲಿ ಬೀದಿಗಿಳಿದು ಭಾರೀ ಪ್ರತಿಭಟನೆ ನಡೆಸಿದ್ದಾರೆ.

ಸದ್ಯ ಜೈಲಿನಲ್ಲಿರುವ ಇಮ್ರಾನ್ ಖಾನ್ ಅವರ ಬಿಡುಗಡೆಗೆ ಒತ್ತಾಯಿಸಿ ಪ್ರತಿಭಟನಾಕಾರರು ಸೋಮವಾರ ತಡರಾತ್ರಿ ರಾಜಧಾನಿ ಇಸ್ಲಾಮಾಬಾದ್ ಪ್ರವೇಶಿಸಿದಾಗ ಹಿಂಸಾಚಾರ ಭುಗಿಲೆದ್ದಿತು. ದೇಶಾದ್ಯಂತ ಇಮ್ರಾನ್ ಬೆಂಬಲಿಗರಿಂದ ಪ್ರತಿಭಟನೆ ನಡೆದಿದೆ. ಪಿಟಿಐ ಕಾರ್ಯಕರ್ತರ ಪ್ರತಿಭಟನೆ ಹತ್ತಿಕ್ಕಲು ಪೊಲೀಸರು ಮುಂದಾದಾಗ ಭಾರೀ ಸಂಘರ್ಷ ಉಂಟಾಗಿದೆ. ಈ ಸಂದರ್ಭ ಐವರು ಸಾವಿಗೀಡಾಗಿದ್ದಾರೆ. ಪ್ರತಿಭಟನಾಕಾರರೊಂದಿಗಿನ ಘರ್ಷಣೆಯಲ್ಲಿ ನಾಲ್ವರು ಸೈನಿಕರು ಸಾವಿಗೀಡಾದರೆ, ಒಬ್ಬ ಪ್ರತಿಭಟನಾಕಾರ ಸಾವನ್ನಪ್ಪಿದ್ದಾನೆ. ಅಲ್ಲದೇ, 119ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ರಾಷ್ಟ್ರವ್ಯಾಪಿ ನಡೆಯುತ್ತಿರುವ ಸರಣಿ ಪ್ರತಿಭಟನೆಗಳನ್ನು ನಿಗ್ರಹಿಸಲು ಪ್ರಧಾನಿ ಶೆಹಬಾಜ್ ಷರೀಫ್ ಅವರ ಸರಕಾರ ನಿರಂತರ ಪ್ರಯತ್ನ ನಡೆಸಿದೆ. ಪಾಕಿಸ್ತಾನ ಸೇನೆ ಪ್ರತಿಭಟನಾಕಾರರು ಘರ್ಷಣೆ ನಡೆಸಿದಲ್ಲಿ ಗುಂಡಿಕ್ಕಲು ಆದೇಶ ನೀಡಿದೆ. ಜನರ ಜೀವ, ಸರಕಾರಿ ಮತ್ತು ಸಾರ್ವಜನಿಕ ಆಸ್ತಿ ಭದ್ರತೆಗಾಗಿ ಆರ್ಟಿಕಲ್ 245ರಡಿ

ಸೇನೆಯನ್ನು ನಿಯೋಜಿಸಲಾಗಿದೆ. ಕಾನೂನು ಸುವ್ಯವಸ್ಥೆ ಪಾಲನೆಗಾಗಿ 'ಕಂಡಲ್ಲಿ ಗುಂಡು' ಆದೇಶ ನೀಡಲಾಗಿದೆ.

ರಾಜಧಾನಿ ತಲುಪಿದರು: ಪಿಟಿಐ ಪಕ್ಷದ ನಾಯಕ ಇಮ್ರಾನ್ ಖಾನ್ ನ.24ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸುವಂತೆ ಕರೆ ನೀಡಿದ್ದರು. ಅದರ ಮೇರೆಗೆ ಪಕ್ಷದ ಕಾರ್ಯಕರ್ತರು ಬೆಂಬಲಿಗರು ಪ್ರತಿಭಟನೆ ನಡೆಸಲಾರಂಭಿಸಿದ್ದಾರೆ. ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮುಖ್ಯಮಂತ್ರಿ ಅಲಿ ಅಮೀನ್ ಗಂದಪುರ್ ಮತ್ತು ಪ್ರತಿಪಕ್ಷ ನಾಯಕ ಒಮರ್ ಅಯೂಬ್ ನೇತೃತ್ವದ ತಂಡ ಮಂಗಳವಾರ ಇಸ್ಲಾಮಾಬಾದ್ ತಲುಪಿದೆ. ಈ ಸಂದರ್ಭ ಪೊಲೀಸರಿಂದ ಪ್ರತಿರೋಧ ಎದುರಿಸಬೇಕಾಯಿತು. ಸ್ಥಳದಲ್ಲಿ ಸಂಘರ್ಷ ನಡೆದಿದೆ.

ಕಲಾವಿದ ಕೃಷ್ಣ ನಾಯ್ಕರ ಬಂಧನ ಖಂಡನೀಯ

ಬೆಂಗಳೂರು: ಕಾರ್ಕಳದ ಪರಶುರಾಮ ಥೀಮ್ ಪಾರ್ಕ್ ವಿಚಾರದಲ್ಲಿ ಮುಗ್ಧ ಕಲಾವಿದ ಕೃಷ್ಣ ನಾಯ್ಕರನ್ನು ಬಂಧಿಸಿ ಹಿಂಸೆ ನೀಡುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಇಡಗುಂಜಿ ಮೂಲದ ಕೃಷ್ಣ ನಾಯ್ಕ ಚಿತ್ರಕಲೆಗೆ ಸಾಕಷ್ಟು ಕೊಡುಗೆ ನೀಡಿದ ಹಿರಿಯ ಕಲಾವಿದರು.

ಕೆಲವು ದಶಕದಿಂದ ವೃತ್ತಿಪರರಾದ ಅವರು ಮೂರು ಸಾವಿರಕ್ಕೂ ಹೆಚ್ಚು ಮ್ಯೂರಲ್, ನಾಕ್ಕೈದು ಸಾವಿರ ಶಿಲ್ಪ ಅಲ್ಲದೆ ಸಾಕಷ್ಟು ಕಲಾ ಯೋಜನೆಗಳ ಯಶಸ್ವಿ ರೂವಾರಿ ಆಗಿ ಜಿಲ್ಲೆಯ ಹೆಮ್ಮೆಯ ಕಲಾವಿದರು. ಬೆಂಗಳೂರು ವಿಶ್ವೇಶ್ವರಯ್ಯ ಲೇ ಔಟ್ ನಲ್ಲಿ ಸ್ಟೂಡಿಯೊ ಸ್ಥಾಪಿಸಿ ಹತ್ತೈವತ್ತು ಹುಡುಗರಿಗೆ ಕೆಲಸವನ್ನೂ ಕೊಟ್ಟಿದ್ದಾರೆ. ಇದಾವುದನ್ನೂ ಪರಿಗಣಿಸದೆ, ಸರಕಾರ ಬದಲಾಗುತ್ತಲೇ ಕಳೆದ ಒಂದು ವರ್ಷದಿಂದ ಕೃಷ್ಣ ನಾಯ್ಕರನ್ನು ಅಮಾನುಷವಾಗಿ ನಡೆಸಿಕೊಂಡು ತನಿಖೆಯ ಹೆಸರಲ್ಲಿ ಆಗಾಗ ದಾಳಿ ಮಾಡಲಾಗಿದೆ. ಕೊನೆಗೆ ಇತ್ತೀಚೆಗೆ ಅವರನ್ನು ಬಂಧಿಸಿರುವುದು ಪಾಪದ ಕಲಾವಿದರನ್ನು ನಮ್ಮ ರಾಜಕೀಯ ವ್ಯವಸ್ಥೆ ಹೇಗೆ ನೋಡುತ್ತದೆ ಎಂಬುದಕ್ಕೆ ಸಾಕ್ಷಿ ಆಯಿತು. ಓರ್ವ ಪ್ರತಿಭಾವಂತ ಕಲಾವಿದನು ಪಕ್ಷ ರಾಜಕೀಯದ ಬಲಿಪಶುವಾಗುತ್ತಿದ್ದಾರೆ. ಸರಕಾರಿ ಕೆಲಸಗಳ ವಿಚಾರದಲ್ಲಿ ಇಡೀ ಕಲಾವಿದರ ಸಮೂಹವೇ ಭಯದಿಂದ ನೋಡಬೇಕಾದ ಘಟನೆ ಇದು. ಪರಶುರಾಮ ಥೀಮ್ ಪಾರ್ಕ್ ರಚನೆಯ ಬೃಹತ್ ಯೋಜನೆಗೆ ಹಿಂದಿನ ಸರಕಾರ ಅ ಪ್ರಾಯೋಗಿಕ ಅವಸರವನ್ನು ಮಾಡಿ ಅವರನ್ನು ಹಿಂಸಿಸಿತು. ಇದೀಗ ಬಂದ ಹೊಸ ಸರಕಾರವು ಅದಾವುದನ್ನೂ ಪರಿಗಣಿಸದೆ, ಮುಂಚೂಣಿಯಲ್ಲಿ ನಿಂತವರನ್ನು ಹಾಗೆಯೇ ಬಿಟ್ಟು ಕಲಾವಿದರನ್ನು ಬಂಧಿಸಿ ತನಿಖೆಯ ಹೆಸರಲ್ಲಿ ತೊಂದರೆ ಕೊಡುತ್ತಿದ್ದಾರೆ. ಕಲಾ ಚಟುವಟಿಕೆಗೆ ಸಹಾಯಹಸ್ತ ನೀಡಬೇಕಾದ ಪ್ರಭುತ್ವವು, ಕಲಾವಿದರನ್ನೇ ಶೋಷಣೆ ಮಾಡುವುದು ಖಂಡಿತವಾಗಿ ಉತ್ತಮ ಆಡಳಿತದ ಲಕ್ಷಣವಲ್ಲ. ಈ ಘಟನೆಯನ್ನು ಉತ್ತರ ಕನ್ನಡ ಮೂಲದ ಕಲಾವಿದರಾಗಿ ನಾವು ಕೃಷ್ಣ ನಾಯ್ಕರ ಪರವಾಗಿ ಈ ಹೇಳಿಕೆ ನೀಡುತ್ತಿದ್ದೇವೆ. ಸುಲಭಕ್ಕೆ ಸಿಗುವ ಮುಗ್ಧ ಕಲಾವಿದರನ್ನು ಗುರಿಯಾಗಿಸಿ ನಡೆಸುತ್ತಿರುವ ಹಿಂಸೆಯನ್ನು ಖಂಡಿಸುತ್ತೇವೆ ಎಂದು ಉತ್ತರ ಕನ್ನಡ ಕಲಾವಿದರ ಸಂಘ ತಿಳಿಸಿದೆ.

ರಾಷ್ಟ್ರಪತಿಗೆ ಗೌರವ ಸಲ್ಲಿಸದೆ ನಿರ್ಗಮಿಸಿದ ಪ್ರತಿಪಕ್ಷ ನಾಯಕ

ರಾಹುಲ್ ವಿರುದ್ಧ ಬಿಜೆಪಿ ಗರಂ

ದೆಹಲಿ: ಸಂಸತ್ತಿನಲ್ಲಿ ಸಂವಿಧಾನ ದಿನ ಆಚರಣೆ ಕಾರ್ಯಕ್ರಮದಲ್ಲಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಶುಭಾಶಯ ಕೋರದೇ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ಗಂಭೀರ ಆರೋಪ ಮಾಡಿದೆ. ಸಂಸತ್‌ನಲ್ಲಿ ಸಂವಿಧಾನ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳಿಗೆ ರಾಹುಲ್ ಶುಭಕೋರದೇ ನಿರ್ಗಮಿಸಿದ ವಿಡಿಯೋವನ್ನು ಹಂಚಿಕೊಂಡಿರುವ ಬಿಜೆಪಿ, ರಾಷ್ಟ್ರಪತಿಗಳಿಗೆ ಶುಭ ಕೋರದಷ್ಟು ರಾಹುಲ್ ಗಾಂಧಿ ಅಹಂಕಾರಿಯಾಗಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದೆ. ಬಿಜೆಪಿ- ಕಾಂಗ್ರೆಸ್ ನಾಯಕರ ನಡುವೆ ಆರೋಪ-ಪ್ರತ್ಯಾರೋಪ ನಡೆದಿವೆ. ರಾಷ್ಟ್ರಪತಿ ಒಬ್ಬ ಮಹಿಳೆ, ಬುಡಕಟ್ಟು ಸಮುದಾಯದವರು, ರಾಹುಲ್ ಗಾಂಧಿ ಅವರಾದರೂ ಕಾಂಗ್ರೆಸ್ ಯುವ ರಾಜ ಎಂಬ ಧೋರಣೆಯೇ? ಇದೆಂತಹ ಅಗ್ಗದ ಮನಸ್ಥಿತಿ? ಎಂದು ಬಿಜೆಪಿ ಪ್ರಶ್ನಿಸಿದೆ. ಬಿಜೆಪಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ, ರಾಷ್ಟ್ರಪತಿಗಳು ಕುಳಿತುಕೊಳ್ಳುವ ಮೊದಲೇ ಗಾಂಧಿ ವೇದಿಕೆ ಮೇಲೆ ತಮ್ಮ ಆಸನದಲ್ಲಿ ಕುಳಿತುಕೊಂಡಿದ್ದಾರೆ. ಪಕ್ಕದಲ್ಲಿ ನಿಂತಿದ್ದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ, ರಾಹುಲ್ ಅವರನ್ನು ಎದ್ದೇಳುವಂತೆ ಮನವಿ ಮಾಡುತ್ತಿರುವುದು ಕಂಡುಬಂದಿದೆ.

ರಾಜ ಮನೆತನ ಕಲಹ ಬೀದಿಯಲ್ಲಿ ಮಾರಾಮಾರಿ

ಜೈಪುರ: ರಾಜಸ್ತಾನದ ಉದಯಪುರ ರಾಜಮನೆತನದಲ್ಲಿ ಕೌಟುಂಬಿಕ ಕಲಹ ಬೀದಿಗೆ ಬಂದಿದೆ. ರಾಜ ಮನೆತನದ ಎರಡು ಬಣಗಳ ನಡುವೆ ಸೋಮವಾರ ರಾತ್ರಿ ಭಾರಿ ಮಾರಾಮಾರಿಯೇ ನಡೆದಿದೆ. ಸಿಟಿ ಪ್ಯಾಲೇಸ್ ಹೊರಗೆ ಕಲ್ಲು ತೂರಾಟ ನಡೆದಿರುವ ಬಗ್ಗೆ ವರದಿಯಾಗಿದೆ. ರಾಜಸಮುಂದ್‌ನ ಬಿಜೆಪಿ ಶಾಸಕ ಮಹಾರಾಣಾ ವಿಶ್ವರಾಜ್ ಸಿಂಗ್ ಮೇವಾರ್ ಮತ್ತು ಚಿಕ್ಕಪ್ಪ ಅರವಿಂದ್ ಸಿಂಗ್ ಮೇವಾರ್ ನಡುವೆ ಘರ್ಷಣೆ ಉಂಟಾಗಿದೆ. ವಿಶ್ವರಾಜ್ ಸಿಂಗ್‌ಗೆ ಅರಮನೆ ಪ್ರವೇಶ ನಿಷೇಧಿಸಿದ ಕಾರಣ ಈ ಘರ್ಷಣೆ ಏರ್ಪಟ್ಟಿದೆ ಎಂದು ತಿಳಿದುಬಂದಿದೆ.

ಎಕ್ಸ್‌ಪ್ರೆಸ್ ಹೈವೆ: ಅಪಘಾತಕ್ಕೆ 3 ಸಾವು

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ರಾಮನಗರ ಸಮೀಪ ಮಂಗಳವಾರ ರಾತ್ರಿ ಭೀಕರ ಅಪಘಾತ ಸಂಭವಿಸಿದೆ. ಕೆಎಸ್ ಆರ್ ಟಿಸಿ ಬಸ್ಸಿಗೆ ಕಾರು ಡಿಕ್ಕಿಯಾಗಿ, ಕಾರಿನಲ್ಲಿದ್ದ ಮೂವರು ಅಸುನೀಗಿದ್ದಾರೆ. ರಾಮನಗರ ತಾಲೂಕಿನ ಸಂಗಬಸವನ ದೊಡ್ಡಿ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ.

ಕೆಎಸ್ ಆರ್ ಟಿಸಿ ಬಸ್ ಮೈಸೂರಿನಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದಾಗ, ಬೆಂಗಳೂರಿನಿಂದ ಮೈಸೂರು ಕಡೆಗೆ ಹೋಗುತ್ತಿದ್ದ ಕಾರೊಂದು ನಿಯಂತ್ರಣ ತಪ್ಪಿ, ಡಿವೈಡರ್ ದಾಟಿ ಬಂದು ಬಸ್ಸಿಗೆ ಡಿಕ್ಕಿ ಹೊಡೆದಿದ್ದರ ಪರಿಣಾಮವಾಗಿ ಈ ಅಪಘಾತ ಸಂಭವಿಸಿದೆ. ದೆಹಲಿ ರಿಜಿಸ್ಟ್ರೇಷನ್ ನಂಬರ್ ಇರುವ ಈ ಕಾರಿನಲ್ಲಿದ್ದ ಇಬ್ಬರು ಪುರುಷರು, ಒಬ್ಬ ಮಹಿಳೆ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಅದು ಹುಂಡೈ ಕಂಪನಿಯ ಕಾರು ಎಂದು ಗುರುತಿಸಲಾಗಿದ್ದು ಡಿಕ್ಕಿಯ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ. ಸುದ್ದಿ ತಿಳಿಯುತ್ತಲೇ ಸ್ಥಳಕ್ಕಾಗಮಿಸಿದ ರಾಮನಗರ ಸಂಚಾರಿ ಪೊಲೀಸರು, ಶವಗಳನ್ನು ರಾಮನಗರ ಜಿಲ್ಲಾಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಸಾಗಿಸಿದ್ದಾರೆ. ಮೃತರ ಸಂಬಂಧಿಗಳನ್ನು ಹುಡುಕುವ ಪ್ರಯತ್ನ ಮಾಡಲಾಗುತ್ತಿದೆ. ರಾಮನಗರ ಸಂಚಾರಿ ಠಾಣೆಯಲ್ಲಿ ಅಪಘಾತ ಪ್ರಕರಣ ದಾಖಲಾಗಿದೆ.

ಬೆಂಗಳೂರು ನಗರ ಪೊಲೀಸರಿಂದ ವಿಶೇಷ ಕಾರ್ಯಾಚರಣೆ

ಡ್ರಗ್ಸ್ ಮಾರಾಟ: ಮೂವರ ಸೆರೆ

ಬೆಂಗಳೂರು: ಹೊಸ ವರ್ಷಾಚರಣೆಗೆ ರಾಜಧಾನಿ ಬೆಂಗಳೂರು ಸಜ್ಜಾಗುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಮಾದಕ ಪದಾರ್ಥ ಸರಬರಾಜುದಾರರ ವಿರುದ್ಧ ಬೆಂಗಳೂರು ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ. 3 ಪ್ರತ್ಯೇಕ ಪ್ರಕರಣಗಳಲ್ಲಿ ಮಾದಕ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದ ಓರ್ವ ಆಫ್ರಿಕಾ ಪ್ರಜೆ ಸೇರಿದಂತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ಒಟ್ಟು 86.50 ಲಕ್ಷ ಮೌಲ್ಯದ ವಿವಿಧ ಮಾದಕ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಸೋಲದೇವನಹಳ್ಳಿ ಪೊಲೀಸ್ ಠಾಣೆ: ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಆರ್.ಆರ್.ಕಾಲೇಜು ರಸ್ತೆಯಲ್ಲಿ ಎಂಡಿಎಂಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ ಕೌಸ್ಸಿ ಜೂಲಿಯಸ್‌ನ ಗಿಸ್ಸನ್ ಎಂಬಾತನನ್ನು ಸಿಸಿಬಿಯ ಮಾದಕ ದ್ರವ್ಯ ನಿಗ್ರಹದಳದ ಪೊಲೀಸರು ಬಂಧಿಸಿದ್ದಾರೆ.

2017ರಲ್ಲಿ ವ್ಯಾಪಾರಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ ಮೋಜಿನ ಜೀವನ ಹಾಗೂ ಕಡಿಮೆ ಅವಧಿಯಲ್ಲಿ ಹೆಚ್ಚು ಹಣ ಗಳಿಸುವ ಉದ್ದೇಶದಿಂದ ತನ್ನ ಪರಿಚಯಸ್ಥರಿಂದ ಕಡಿಮೆ ಬೆಲೆಗೆ ಎಂಡಿಎಂಎ ಕ್ರಿಸ್ಟಲ್ ಖರೀದಿಸುತ್ತಿದ್ದ. ನಂತರ ಅವುಗಳನ್ನು ಗ್ರಾಂಗೆ 12 ರಿಂದ 15 ಸಾವಿರದಂತೆ ಕಾಲೇಜು ವಿದ್ಯಾರ್ಥಿಗಳು, ಐಟಿ/ಬಿಟಿ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದ. ಬಂಧಿತನಿಂದ 515 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಒಂದು ಎಲೆಕ್ಟ್ರಾನಿಕ್ ತೂಕದ ಯಂತ್ರ ಮತ್ತು ಒಂದು ಮೊಬೈಲ್ ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ಸಂಪಿಗೆಹಳ್ಳಿ ಪೊಲೀಸ್ ಠಾಣೆ: ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪಶ್ಚಿಮ ಬಂಗಾಳದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ತಂದಿದ್ದ ಆರೋಪಿ ಸಂಪಿಗೆಹಳ್ಳಿ ಮುಖ್ಯರಸ್ತೆಯ ನೀಲಗಿರಿ ತೋಪಿನ ಮುಂಭಾಗದ ರಸ್ತೆಯಲ್ಲಿ ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ್ದ ಸಂಪಿಗೆಹಳ್ಳಿ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿತನಿಂದ ಒಟ್ಟು 2 ಲಕ್ಷ ಮೌಲ್ಯದ 4 ಕೆ.ಜಿ. ಗಾಂಜಾ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಾರ್ಟ್‌ಮೆಂಟ್‌ನ ಹಿಂಭಾಗದ ಶೆಡ್‌ನಲ್ಲಿ ಸಂಗ್ರಹ

ಅಧಿಕ ಬೆಲೆಗೆ ಮಾರಾಟ ಮಾಡಲು ಗಾಂಜಾ ಸಂಗ್ರಹಿಸಿಟ್ಟಿದ್ದ ವ್ಯಕ್ತಿಯನ್ನು ಮಾರತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಾರತಹಳ್ಳಿಯ ಕರಿಯಮ್ಮನ ಅಗ್ರಹಾರ ಬಳಿಯಿರುವ ಅಪಾರ್ಟ್‌ಮೆಂಟ್‌ನ ಹಿಂಭಾಗದ ಶೆಡ್‌ನಲ್ಲಿ ಆರೋಪಿ ಗಾಂಜಾ ಸಂಗ್ರಹಿಸಿಟ್ಟಿದ್ದ. ಆತನಿಂದ 7.50 ಲಕ್ಷ ಮೌಲ್ಯದ 10 ಕೆ.ಜಿ 370 ಗ್ರಾಂ ತೂಕದ ಗಾಂಜಾ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

sagility™

Sagility India Limited

(formerly known as Sagility India Private Limited and prior to that Berkmeer India Private Limited)

Corporate Identity Number: U72900KA2021PLC150054

Registered office: No.23 & 24 AMR Tech Park, Building 2A, First Floor, Hongasandara Village, Off Hosur Road, Bommanahalli, Bangalore Karnataka, 560 068, India.**Telephone .:** 91- 8071251500, **E-mail:** investorservice@sagilityhealth.com ; **website:** www.sagilityhealth.com

CONSOLIDATED FINANCIAL RESULTS FOR THE QUARTER AND SIX MONTHS ENDED 30 SEPTEMBER 2024

Rs in million unless otherwise stated

S. No.	Particulars	Quarter Ended			Six month ended		Year Ended
		30 September 2024	30 June 2024	30 September 2023	30 September 2024	30 September 2023	31 March 2024
		(Unaudited)	(Audited)	(Unaudited)	(Unaudited)	(Unaudited)	(Audited)
1	Revenue from operations	13,250.45	12,233.28	10,941.02	25,483.73	22,101.95	47,535.57
2	Net Profit / (Loss) for the period/year (before Tax, Exceptional and/or Extraordinary items)	1,604.18	710.13	433.75	2,314.31	1,052.84	2,416.81
3	Net Profit / (Loss) for the period/year before tax (after Exceptional and/or Extraordinary items)	1,604.18	710.13	433.75	2,314.31	1,052.84	2,416.81
4	Net Profit / (Loss) for the period/year after tax	1,173.42	222.94	349.61	1,396.36	774.60	2,282.66
5	Net Profit / (Loss) for the period/year after tax attributable to owners of the Company	1,173.42	222.94	349.61	1,396.36	774.60	2,282.66
6	Total Comprehensive Income / (Loss) for the period/year attributable to owners of the Company	1,984.72	(488.29)	491.54	1,496.43	454.71	2,404.69
7	Paid up Equity Share Capital (Face value of Rs. 10/- each)	46,792.74	46,792.74	19,186.72	46,792.74	19,186.72	42,852.82
8	Other equity						21,578.46
9	Earnings Per Share (EPS) (of Rs. 10/- each) (from continuing and discontinued operations) (Not annualised except for the year ended 31 March 2024)						
	1. Basic	0.25	0.05	0.08	0.31	0.18	0.53
	2. Diluted	0.25	0.05	0.08	0.31	0.18	0.53

Notes:

Standalone Unaudited Financial Results for the quarter and six month ended 30 September 2024

Rs in million unless otherwise stated

S. No.	Particulars	Quarter Ended			Six month ended		Year Ended
		30 September 2024	30 June 2024	30 September 2023	30 September 2024	30 September 2023	31 March 2024
		(Unaudited)	(Unaudited)	(Unaudited)	(Unaudited)	(Unaudited)	(Audited)
1	Revenue from operations	4,207.56	3,868.79	3,657.32	8,076.35	7,307.39	14,946.10
2	Net Profit / (Loss) for the period/year (before Tax, Exceptional and/or Extraordinary items)	941.73	282.44	522.14	1,224.17	225.57	612.78
3	Net Profit / (Loss) for the period/year before tax (after Exceptional and/or Extraordinary items)	941.73	282.44	522.14	1,224.17	225.57	612.78
4	Net Profit / (Loss) for the period/year after tax	731.89	64.08	(79.28)	795.97	(385.38)	727.09

The above is an extract of the detailed format of Quarter and Six month ended Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of Financial Results are available on the websites of the Stock Exchange(s) i.e., www.nseindia.com and www.bseindia.com and the Company at www.sagilityhealth.com

The above unaudited consolidated and standalone financial results have been reviewed and recommended by the Audit Committee and approved by the Board of Directors, at their respective meetings held on 25 November 2024. These unaudited consolidated and standalone financial results have been subjected to limited review by the statutory auditors of the Sagility India Limited and they have issued an unmodified report on these unaudited consolidated and standalone financial results.

Date: 25 November 2024
Place: Bengaluru

Ramesh Gopalan
Managing Director and Group Chief Executive Officer

CONCEPT

ಜಪಾನಿನ ಸಾಂಸ್ಕೃತಿಕ ತಾಣಗಳಿಗೆ ವಿಶ್ವವಾಣಿ ನಿಯೋಗ ಭೇಟಿ

ಕಿಯಾ-ಮಿಜು ದೇರಾ ದೇವಾಲಯದ ಮುಂಭಾಗದಲ್ಲಿ ವಿಶ್ವವಾಣಿ ನಿಯೋಗದ ಸದಸ್ಯರು

ಹಸಿರಿನ ಉಸಿರು ಹರಿಸುವ ಬಿದಿರಿನ ಚಂದದ ತೋಟ ಪ್ರವಾಸಿಗರ ವಿಶೇಷ ಆಕರ್ಷಣೆ.

ಮಾಜಿ ಸಚಿವ ಆರಗ ಜ್ಞಾನೇಂದ್ರ ಹಾಗೂ ವಿಶ್ವೇಶ್ವರ ಭಟ್

ಭೋವಿ ಶ್ರೀಗಳೊಂದಿಗೆ ವಿಶ್ವವಾಣಿ ಸಿಇಒ ಚಿದಾನಂದ್ ಕಡಲಾಸ್ಕರ

ವಿಶ್ವೇಶ್ವರ ಭಟ್ ಅವರೊಂದಿಗೆ ಚಿದಾನಂದ್ ಕಡಲಾಸ್ಕರ್, ಕಿರಣ್, ನಾಗೇಂದ್ರ ಹಾಗೂ ರಾಜು ಅಡಕಳ್ಳಿ

ದೇವಾಲಯಕ್ಕೆ ಭೇಟಿ ನೀಡಿದ ವೇಳೆ ವಿಶಿಷ್ಟ ಘಂಟೆ ಬಾರಿಸಿ ಪ್ರಾರ್ಥನೆ ಸಲ್ಲಿಸಿದ ವಿಶ್ವೇಶ್ವರ ಭಟ್.

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ವಿಶ್ವವಾಣಿಯ ನಿಯೋಗವು ಒಂದು ವಾರದ ಅವಧಿಯಲ್ಲಿ ಜಪಾನಿನ ಐತಿಹಾಸಿಕ ಸಾಂಸ್ಕೃತಿಕ ಧಾರ್ಮಿಕ ಮತ್ತು ನಿಸರ್ಗ ಸೌಂದರ್ಯದ ಪ್ರವಾಸಿ ತಾಣಗಳಿಗೆ ಪ್ರತ್ಯಕ್ಷ ಭೇಟಿ ನೀಡಿ , ಜಪಾನಿನ ಅಂತರಂಗವನ್ನು ಅರಿತುಕೊಳ್ಳುವ ಪ್ರಯತ್ನ ನಡೆಸಿತು. ಇದರ ಚಿತ್ರ ಮಾಹಿತಿಯ ವಿಶೇಷ ಸಂಚಿಕೆ ಇಲ್ಲಿದೆ.

ಕಿಂಕಾಕು-ಜಿ ಪ್ರದೇಶದಲ್ಲಿರುವ ಗೋಲ್ಡನ್ ಟೆಂಪಲ್ ಮುಂಭಾಗದಲ್ಲಿ ನಿಯೋಗದ ಸದಸ್ಯರು.

ಒಸಾಕದ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ ವಿಶ್ವವಾಣಿ ನಿಯೋಗ



ಬಿದಿರಮ್ಮ ತಾಯಿ ಕೇಳೆ....ನೀನಾರಿಗಲ್ಲಾದವಳೆ ? ಎಂಬ ನಮ್ಮ ಕನ್ನಡ ಹಾಡನ್ನು ನೆನಪಿಸುವಂತೆ ಕ್ಯೋಟೋದ ನಿರ್ಮಲ ಪರಿಸರದಲ್ಲಿ ಹಸಿರಿನ ಉಸಿರು ಹರಿಸುವ ಬಿದಿರಿನ ಚಂದದ ತೋಟ ಪ್ರವಾಸಿಗರ ವಿಶೇಷ ಆಕರ್ಷಣೆ. ಇದೇ ಜಾಗದಲ್ಲಿ ಹಿಂದಿ ಚಲನಚಿತ್ರ ಜಿಲ್ಲಾ ದ ಹಾಡೊಂದಕ್ಕೆ ಚಿತ್ರೀಕರಣ ನಡೆಸಲಾಗಿತ್ತು.

ಶ್ರೀಗಳೊಂದಿಗೆ ವಿಶ್ವೇಶ್ವರ ಭಟ್ ಅವರ ಸಮಾಲೋಚನೆ

ಕಿಯಾ-ಮಿಜು ದೇರಾ ದೇವಾಲಯದ ಮುಂಭಾಗದಲ್ಲಿ ಶ್ರೀಗಳು

ಕ್ಯೋಟೋದಲ್ಲಿ ಕಂಡು ಬಂದ ಪ್ರಕೃತಿ ಸೊಬಗು



ಜಪಾನಿನ ಒಸಾಕಾ, ಕ್ಯೋಟೋ ತುಂಬೆಲ್ಲ ಅಲ್ಲಲ್ಲಿ ದೇವಾಲಯಗಳು. ಬೌದ್ಧ ಮಂದಿರಗಳು. ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮತ್ತು ಶ್ರೀ ಶಾಂತವೀರ ಸ್ವಾಮೀಜಿ ಅವರಿಂದ ಪವಿತ್ರ ಸ್ಥಳಗಳಲ್ಲಿ ಭಕ್ತಿ ಪೂರ್ವಕ ಪ್ರಣಾಮಗಳು.



ಜಪಾನ್‌ನಲ್ಲಿಯೂ ಡ್ರೋಣ್ ಶೂಟಿಂಗ್

ಗೋಲ್ಡನ್ ಟೆಂಪನ್‌ನ ವಿಹಂಗಮ ನೋಟ

ಒಸಾಕಾದಲ್ಲಿರುವ ಪುರಾತನ ಕೋಟೆ ವಿಕ್ಷೀಸಿದ ವಿಶ್ವವಾಣಿ ನಿಯೋಗ

ನಂಜನಗೂಡು ಮೋಹನ್ ಅವರ ಜತೆ ಲತಿಕಾ ಜಿ.ಭಟ್ ಸಮಾಲೋಚನೆ

ವಿಶ್ವವಾಣಿ

27.11.2024 ಬುಧವಾರ

vishwavani.news

ದಿನ ದರ್ಶಿಕೆ

ಕಾರ್ತಿಕ ಮಾಸ, ಕೃಷ್ಣ ಪಕ್ಷ, ದ್ವಾದಶಿ ತಿಥಿ, ಚಿತ್ರಾ ನಕ್ಷತ್ರ, ಕನ್ಯಾ ಲಗ್ನ, ವೃಶ್ಚಿಕ ರಾಶಿ, ಹೇಮಂತ ಋತು, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಆಲೂಗಡ್ಡೆಯನ್ನು ತುರಿ ಮಾಡಿ ಮತ್ತು ಅದನ್ನು ನಿಮ್ಮ ಕಣ್ಣುರೆಪ್ಪೆಗಳ ಮೇಲೆ ಹರಡಿ. 15 ರಿಂದ 20 ನಿಮಿಷಗಳ ಕಾಲ ಹಾಸಿಗೆ ಅಥವಾ ಮಂಚದ ಮೇಲೆ ಮಲಗಿಕೊಳ್ಳಿ. ಹೀಗೆ ಮಾಡುವು ದರಿಂದ ನಿಮ್ಮ ಕಣ್ಣಿನ ಆಯಾಸ ಮತ್ತು ತಲೆನೋವಿನಲ್ಲಿ ಗಮನಾರ್ಹವಾದ ಇಳಿಕೆಯನ್ನು ಗಮನಿಸಬಹುದು.

ಸೌಂದರ್ಯ ಸೂತ್ರ

ದಾಳಿಂಬೆ, ಸ್ಟ್ರಾಬೆರಿ, ಕ್ಯಾನ್‌ಬೆರಿ, ರಸ್ಬೆರಿ, ಸೇಬು ಹಣ್ಣುಗಳಲ್ಲಿ ವಿಟಮಿನ್ ಸಿ ಮತ್ತು ಆ್ಯಂಟಿ ಆಕ್ಸಿಡೆಂಟ್‌ಗಳು ಸಮೃದ್ಧವಾಗಿವೆ. ಪ್ರತಿದಿನ ಅವುಗಳನ್ನು ತಿನ್ನುವುದರಿಂದ ಚರ್ಮಕ್ಕೆ ನೈಸರ್ಗಿಕ ಹೊಳಪು ಹೆಚ್ಚುವುದಲ್ಲದೇ, ದೇಹದ ತೂಕವನ್ನು ಸಹ ನಿಯಂತ್ರಣದಲ್ಲಿಡುತ್ತದೆ. ಹಾಗಾಗಿ ತೂಕ ನಿಯಂತ್ರಿಸಲು ಪ್ರಯತ್ನಿಸುವವರು ಈ ಹಣ್ಣುಗಳನ್ನು ತಿಂದರೆ ದಪ್ಪವಾಗುತ್ತೀರಿ ಎಂದು ಚಿಂತಿಸುವ ಅಗತ್ಯವಿಲ್ಲ.

ದಿನ ಭವಿಷ್ಯ

ಮೇಷ: ವಿದ್ಯೆ, ಜ್ಞಾನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ವ್ಯವಹಾರಗಳಲ್ಲಿ ಗೌರವ ಲಭ್ಯ. ಮೇಲಾಧಿಕಾರಿಗಳಿಂದ ಪ್ರೋತ್ಸಾಹ.

ವೃಷಭ: ಮನೆಯಲ್ಲಿ ಸಂತಸದ ವಾತಾವರಣ. ನಿರೀಕ್ಷಿತ ಧನ ಸಂಚಯನ ವೃದ್ಧಿ. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವಿದ್ಯಾರ್ಥಿಗಳು ಅಧ್ಯಯನಕ್ಕೆ ಆದ್ಯತೆ ನೀಡಬೇಕು.

ಮಿಥುನ: ಬಹಳ ಸಮಯದಿಂದ ಬಳಲುತ್ತಿದ್ದ ಅನಾರೋಗ್ಯಕ್ಕೆ ಪರಿಹಾರ. ನೂತನ ಮಿತ್ರರ ಭೇಟಿಯಿಂದ ಸಂತೋಷ. ಸಾಂಸಾರಿಕವಾಗಿ ಉತ್ತಮ ದಿನ.

ಕಟಕ: ಧಾರ್ಮಿಕ ಕಾರ್ಯಗಳಿಗೆ ಪ್ರಯಾಣ. ದೇವತಾ ಸ್ಥಳ ಸಂದರ್ಶನ. ಗುರುಹಿರಿಯರಿಂದ ಸಂಭ್ರಮ. ದೂರದ ಮಿತ್ರರೊಂದಿಗೆ ಸಮಾಲೋಚನೆ.

ಸಿಂಹ: ವ್ಯವಹಾರದಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಭವಿಷ್ಯದಲ್ಲಿ ಸಾಕಷ್ಟು ಲಾಭ. ಸ್ನೇಹಿತರನ್ನು ಭೇಟಿ ಮಾಡುವಿರಿ.

ಕನ್ಯಾ: ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ಇಂದು ಕೊನೆಗೊಳ್ಳುತ್ತವೆ. ಪ್ರೀತಿಯ ವಿಚಾರದಲ್ಲಿ ಅದೃಷ್ಟದ ದಿನ.

ತುಲಾ: ಹೊಸ ವ್ಯವಹಾರವನ್ನು ಪ್ರಾರಂಭಿಸಲು ಯೋಚಿಸುತ್ತಿದ್ದರೆ, ಅನುಭವಿಗಳ ಅಭಿಪ್ರಾಯ ಪಡೆದುಕೊಳ್ಳಿ. ಉದ್ಯೋಗ ಹುಡುಕುತ್ತಿರುವವರಿಗೆ ಅವಕಾಶ.

ವೃಶ್ಚಿಕ: ವ್ಯಾಪಾರದಲ್ಲಿ ಲಾಭಕ್ಕಾಗಿ ಹೊಸ ಕ್ರಮ ಅಳವಡಿಸಿಕೊಳ್ಳಬೇಕು. ಕೆಲಸದ ಸ್ಥಳದಲ್ಲಿನ ಬದಲಾವಣೆಗಳು ನಿಮ್ಮ ಪರವಾಗುವುದು.

ಧನು: ಕೆಲಸದ ಒತ್ತಡದಿಂದಾಗಿ ದೈಹಿಕವಾಗಿ ಬಳಲುತ್ತೀರಿ. ನಿಮ್ಮ ಬುದ್ಧಿವಂತಿಕೆ, ಚುರುಕುತನ ಪ್ರಶಂಸೆಗೆ ಪಾತ್ರವಾಗುತ್ತದೆ.

ಮಕರ: ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಜನಾನುರಾಗಿ ವರ್ತನೆಯಿಂದ ಮೆಚ್ಚುಗೆ. ಕುಟುಂಬದೊಂದಿಗೆ ಪ್ರಯಾಣ.

ಕುಂಭ: ನಿರೀಕ್ಷಿತ ಸ್ಥಾನ- ಗೌರವ ದೊರಕುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ತಲ್ಲೀನರಾಗುತ್ತೀರಿ. ಧಾರ್ಮಿಕ ಕಾರ್ಯಗಳಿಗೆ ದುಡ್ಡನ್ನು ವಿನಿಯೋಗಿಸುತ್ತೀರಿ.

ಮೀನ: ಮಕ್ಕಳಿಂದ ಸಂತೋಷ ವೃದ್ಧಿ. ಆರ್ಥಿಕ ಸಮೃದ್ಧಿಯ ದಿನ. ಪರೀಕ್ಷೆಗೆ ತಯಾರಿ ನಡೆಸುತ್ತಿರುವವರು ಅಧ್ಯಯನದ ಬಗ್ಗೆ ಗಮನ ಹರಿಸಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ರಾಷ್ಟ್ರೀಯ ಅಂಗಾಂಗದಾನ ದಿನಾಚರಣೆ
- 1907: ಹರಿವಂಶ ರೈ ಬಚ್ಚನ್ ಅವರ ಹುಟ್ಟುಹಬ್ಬ
- 1978: ಲಕ್ಷ್ಮೀಬಾಯಿ ಕೇಳ್ಕರ್ ಅವರು ದೇಹಾಂತ್ಯವಾದ ದಿನ

ಚಿತ್ರಸ್ಫೂರ್ತಿ



ಲಂಡನ್‌ನ ರಿಚ್‌ಮಂಡ್ ಪಾರ್ಕ್‌ನಲ್ಲಿರುವ ಕೆಂಪು ಜಿಂಕೆಗಳು

ಬಲಿಪಾಡ್ಯಮಿಯಂದು ಸ್ಥಾಪನೆಗೊಳ್ಳುವ ಗಣೇಶ!

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಸಹಸ್ರಾರು ವರ್ಷಗಳ ಹಿಂದೆ ಸಪ್ತರ್ಷಿಗಳಲ್ಲಿ ಒಬ್ಬರಾದ ಭೃಗು ಮಹರ್ಷಿಗಳು ಕಾಶಿಯಾತ್ರೆಯನ್ನು ಕೈಗೊಂಡರಂತೆ. ಹೀಗೆ ಸಾಗಿ ಬರುವಾಗ, ಗಣೇಶ ಚತುರ್ಥಿಯ ದಿನದಂದು ಈಗ ತುಮಕೂರಿನ ಬಳಿ ಗೂಳೂರು ಎಂದು ಕರೆಯಲ್ಪಡುವ ಆಗಿನ ಗೂಳಿಪಟವನ್ನು ತಲುಪಿದರಂತೆ. ಈ ಪ್ರದೇಶದಲ್ಲಿ ಗಣೇಶನ ವ್ರತವನ್ನು ಮಾಡಲು ಸುತ್ತಲೂ ಎಲ್ಲಿ ಹುಡುಕಿದರೂ ವಿಘ್ನನಿವಾರಕ ವಿನಾಯಕನ ಗುಡಿಯಾಗಲಿ, ಪ್ರತಿಮೆಯಾಗಲಿ ಭೃಗು ಮಹರ್ಷಿಗಳಿಗೆ ಕಾಣಿಸಲಿಲ್ಲವಂತೆ. ಆಗ ಸ್ವತ: ಮಹರ್ಷಿಗಳು ಅಲ್ಲೇ ಊರ ಬಳಿಯಿದ್ದ ಕೆರೆಯಿಂದ ಜೇಡಿ ಮಣ್ಣನ್ನು ತಂದು ತಾವೇ ಖುದ್ದಾಗಿ ಬೃಹದಾಕಾರದ ಗಣೇಶನ ಪ್ರತಿಮೆಯನ್ನು ಮಾಡಿ ವಿಶೇಷ ಪೂಜೆಯನ್ನು ಸಲ್ಲಿಸಿದರಂತೆ. ಇದನ್ನೆಲ್ಲ ವೀಕ್ಷಿಸುತ್ತಿದ್ದ ಅಲ್ಲಿನ ಗ್ರಾಮಸ್ಥರು ಅಚ್ಚರಿಗೊಳಗಾಗಿ ಮಹರ್ಷಿಗಳ ಬಳಿ ಗಣಪತಿಯ ವಿಗ್ರಹವನ್ನು ಮಾಡುವ ಬಗೆ ಹಾಗೂ ಪೂಜಾವಿಧಿ ವಿಧಾನಗಳನ್ನು ಕಲಿಸುವಂತೆ ಕೋರಿಕೆ ಇಟ್ಟರಂತೆ. ಕೂಡಲೇ ಮಹರ್ಷಿಗಳು ಗಣೇಶನ ಪ್ರತಿಮೆ ಮಾಡುವ ಬಗೆ ಹಾಗೂ ಪೂಜಾಕ್ರಮಗಳನ್ನು ತಿಳಿಸಿಕೊಟ್ಟರಂತೆ. ಅಂದಿನಿಂದ ಈ ಪದ್ಧತಿ ಅಸ್ತಿತ್ವಕ್ಕೆ ಬಂದಿದೆ ಎಂಬುದು ಇಲ್ಲಿನ ಗ್ರಾಮಸ್ಥರ ಅಭಿಪ್ರಾಯ. ಭೃಗು ಮಹರ್ಷಿಗಳು ತಮ್ಮ ಕೈಯ್ಯಾರೆ ಮಾಡಿದ ಗಣೇಶನ ಮೂರ್ತಿಯು ಬೃಹದಾಕಾರದ ಮೂರ್ತಿಯೆಂದು, ಅದೇ ರೀತಿಯಲ್ಲಿ ಅಲ್ಲಿನ ಸ್ಥಳೀಯ ಕಲಾವಿದರ ಮನೆತನವೊಂದು ಅನಾದಿ ಕಾಲದಿಂದಲೂ ಅಷ್ಟೇ ಬೃಹತ್ ಗಾತ್ರದ ಗಣಪತಿಯ ಮೂರ್ತಿಯನ್ನು ನಿರ್ಮಾಣ ಮಾಡುತ್ತಾ ಬರುತ್ತಿದ್ದಾರೆ ಎಂಬುದಾಗಿ ಹೇಳಲಾಗುತ್ತದೆ.

ಸಾಮಾನ್ಯವಾಗಿ ಪ್ರತಿ ವರ್ಷ ಭಾದ್ರಪದ ಮಾಸದ ಶುಕ್ಲ ಪಕ್ಷದಲ್ಲಿ ನಾಡಿನೆಲ್ಲೆಡೆ ಗಣೇಶ ಚತುರ್ಥಿಯ ದಿವಸ ಗಣಪತಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ ವೈಭವವಾಗಿ ಆಚರಿಸುತ್ತೇವೆ. ಆದರೆ ಗೂಳೂರಿನಲ್ಲಿ ಗಣೇಶ ಚತುರ್ಥಿಯಂದು ಗಣಪನ ಪ್ರತಿಮೆಯ ನಿರ್ಮಾಣದ ಕಾರ್ಯ ಆರಂಭಗೊಳ್ಳುತ್ತದೆ. ಗಣೇಶನ ಹಬ್ಬದಂದು ಅಂದರೆ ಗಣೇಶ ಚತುರ್ಥಿಯಂದು ಗೂಳೂರು ಕೆರೆಯ ಜೇಡಿ ಮಣ್ಣಿನಿಂದ ಚಿಕ್ಕದಾದ ಗಣೇಶನ ಮೂರ್ತಿಯನ್ನು ಮಾಡಿ ಅಲ್ಲಿನ ಗಣಪತಿಯ ದೇವಾಲಯದಲ್ಲಿ ಇಟ್ಟು ಪೂಜಿಸಲಾಗುತ್ತದೆ. ಬೃಹದಾಕಾರದ ಗಣೇಶನ ಪ್ರತಿಮೆಯನ್ನು ನಿರ್ಮಿಸುವಾಗ ಗಣಪತಿಯ ಉದರದೊಳಗೆ ವಿಜಯದಶಮಿಯಂದು ಆ ಪುಟ್ಟ ಗಣೇಶನನ್ನು ಇಟ್ಟು ಕಡುಬು, ಮುಂತಾದ ನೈವೇದ್ಯಗಳನ್ನು ಇಡಲಾಗುತ್ತದೆ ಎಂಬುದು ಇಲ್ಲಿನ ವಿಶೇಷ. ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ಥಿಯ ದಿನದಂದು, ಮೊದಲಿಗೆ ಗೂಳೂರು ಕೆರೆಗೆ ಗಂಗೆ ಪೂಜೆಯನ್ನು ಸಲ್ಲಿಸಿ ಗಣಪತಿಯ ಪ್ರತಿಮೆಯ ನಿರ್ಮಾಣಕ್ಕೆ ಅಗತ್ಯವಾದಂತಹ ಮಣ್ಣಿನ ಉಂಡೆಗಳನ್ನು ತಂದು ದೇವಾಲಯದಲ್ಲಿ ಇಟ್ಟು ಪೂಜೆ ಸಲ್ಲಿಸಿ, ಅಲ್ಲಿಯೇ ವಿಗ್ರಹ ಮಾಡುವ ಕಾರ್ಯವನ್ನು ಭಕ್ತಿಪರ್ವಕವಾಗಿ ಆರಂಭಿಸುತ್ತಾರೆ. ಸುಮಾರು ಎರಡು ತಿಂಗಳುಗಳ ಕಾಲ ಗಣಪನ ನಿರ್ಮಾಣದ ಕಾರ್ಯ ಸುದೀರ್ಘವಾಗಿ ಸಾಗುತ್ತದೆ.

ಕಾರ್ತಿಕ ಮಾಸದ ದೀಪಾವಳಿಯ ವೇಳೆಗೆ ಪ್ರತಿಮೆ ನಿರ್ಮಿಸುವ ಕಾರ್ಯವನ್ನು ಪೂರ್ಣಗೊಳಿಸಿ, ಬಲಿಪಾಡ್ಯಮಿಯ ದಿನದಂದು ಬೃಹದಾಕಾರದ (ಸುಮಾರು 9 ರಿಂದ 10 ಅಡಿ ಉದ್ದದ) ಗಣೇಶನ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾರೆ. ಈ ಬೃಹತ್ ಗಣಪನಿಗೆ ಬೆಲೆ ಬಾಳುವ ಆಭರಣಗಳನ್ನು ತೊಡಿಸಿ, ಕಾರ್ತೀಕ ಮಾಸದ ಒಂದು ತಿಂಗಳ ಕಾಲ ನಿತ್ಯವೂ ವಿಶೇಷವಾದ ಪೂಜಾಕೈಂಕರ್ಯಗಳನ್ನು ನೆರವೇರಿಸಲಾಗುವುದು. ಕಾರ್ತೀಕ ಮಾಸದ ಅಮಾವಾಸ್ಯೆಯ ಬಳಿಕ ಊರಿನ ಕೆಲವು ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಸಡಗರದಿಂದ ಗೂಳೂರು ಕೆರೆಗೆ ಬೃಹತ್ ಮಹಾಗಣಪತಿಯನ್ನು ವಿಸರ್ಜಿಸಲಾಗುತ್ತದೆ.

ಕಾರ್ತೀಕ ಮಾಸದ ಚಳಿಗಾಲದಲ್ಲಿ ಸುಮಾರು ಒಂದು ತಿಂಗಳ ಕಾಲ ನಡೆಯುವ ಈ ಏಕೈಕ ಗೂಳೂರು ಗಣೇಶೋತ್ಸವಕ್ಕೆ ಇಲ್ಲಿನ ಭಕ್ತಾದಿಗಳು ಮಾತ್ರವಲ್ಲ, ತುಮಕೂರು ಜಿಲ್ಲೆಯ ಸುತ್ತಮುತ್ತ ಮತ್ತು ನಾಡಿನಾದ್ಯಂತ ನಾನಾ ಭಾಗಗಳಿಂದ ಭಕ್ತರು ಆಗಮಿಸಿ ಪೂಜೆ ಸಮರ್ಪಣೆ ಮಾಡಿ, ಈ ವಿಶೇಷ ಮಹಾಗಣಪತಿಯ ಕೃಪೆಗೆ ಪಾತ್ರರಾಗುತ್ತಾರೆ. ಇಂತಹ ಪೌರಾಣಿಕ ಮಹತ್ವವಿರುವ ಅನೇಕ ಸ್ಥಳಗಳು ನಮ್ಮ ಸುತ್ತಮುತ್ತಲು ವಿಶೇಷ ಯಾತ್ರಾ ಸ್ಥಳಗಳಾಗಿ ಪ್ರಸಿದ್ಧಿಯಾಗಿವೆ. ನಮ್ಮ ಮಕ್ಕಳಿಗೂ ಕೂಡ ಇವುಗಳ ಬಗ್ಗೆ ತಿಳಿಯ ಹೇಳುತ್ತಾ ನಾವು ಕೂಡ ಸ್ಥಳ ಪುರಾಣವನ್ನು ತಿಳಿದುಕೊಂಡು ಇಂತಹ ಸ್ಥಳಗಳಿಗೆ ಹೋಗಿ ಭಗವಂತನ ಕೃಪೆಗೆ ಪಾತ್ರರಾಗೋಣ.

ಪದಬಂಧ



ಎಡದಿಂದ ಬಲಕ್ಕೆ:

2. ಹುಲಿಗೆ ಮತ್ತೊಂದು ಹೆಸರಿದು (3)
5. ಸೋಮವಾರಕ್ಕೆ ಮತ್ತೊಂದು ಹೆಸರು (4)
6. ವಸ್ತುಗಳ ಪ್ರಚಾರಕ್ಕಾಗಿ ಹೊರಡಿಸುವ ಪ್ರಕಟಣೆ (4)
7. ನದಿಗಳು ಸೇರುವ ಸ್ಥಳ (3)
10. 'ಗೋಕುಲ ನಿರ್ಗಮನ' ಕೃತಿಯ ಕರ್ತೃ ತಿರುಗಿ ಬಂದಿದಾರೆ (3)
11. ಬರಿಯ ಹೊಯಿಗೆ ತುಂಬಿರುವ ವಿಶಾಲವಾದ ಪ್ರದೇಶ (5)
12. ವಸ್ತುವಿನಲ್ಲಿರುವ ದೋಷ (3)
14. ಪದ್ಯ, ಕವಿತೆಗೆ ಮತ್ತೊಂದು ಹೆಸರು (3)
18. ಅಹಂಕಾರಕ್ಕೆ ಅಲಕ್ಷ್ಯವೇ ಮದ್ದು (4)
19. ಚಂದ್ರನಿಗೆ ಮತ್ತೊಂದು ಹೆಸರು (4)
20. ಬೆಳಗಿನ ಜಾವ (3)

ಮೇಲಿನಿಂದಕೆಳಕ್ಕೆ:

1. ಪರಿಣಯದ ಗಂಡು (4)
2. ನಿಸ್ಸಾರವಾದುದು ಎಂದರ್ಥ (3)
3. ಹತ್ತಿಯಿಂದ ಮಾಡಿದ ಮೇಲುಹೊದಿಕೆ (3)
4. ಜೋಗದಲ್ಲಿ ಧುಮ್ಮಿಕ್ಕುವ ನದಿ (4)
8. ನಾನು, ನನ್ನದೆಂಬ ಮೋಹ (3)
9. ಒಳ್ಳೆಯ ಶ್ರೋತೃ (3)
10. ಮಧ್ಯದಲ್ಲಿ ಇದೇನಿದು ಕಂಪನ (3)
13. ಅಪ್ಪಣೆಚೀಟಿ (4)
15. ಬೇಂದ್ರೆಯವರಿಗೆ ಇದ್ದ ಬಿರುದು (4)
16. ಮುಖ, ವದನ (3)
17. ಮರಳು, ಹೊಯಿಗೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಜವನಿಕೆ 3. ಭಾವಚಿತ್ರ 5. ಸಮರ 6. ಕಾರು 7. ತಮ 9. ರುಮಾಲು 12. ರಿಕಾಶಿ 14. ತಳಕು 15. ಪಂಕಜ 17. ಅಜಿತ 19. ವನ 21. ಸಾರ 22. ವಿರೋಧ 23. ಮಜಕೂರು 24. ನಮಸ್ಕಾರ

ಮೇಲಿನಿಂದಕೆಳಕ್ಕೆ: 1. ಜಹಗೀರು 2. ಕೆಸರು 3. ಭಾರತ 4. ತ್ರಯೋದಶಿ 6. ಕಾಲು 8. ಮರಿ 10. ಮಾರಕ 11. ಕೊಳಗ 13. ಕಾಳಜಿ 15. ಪಂಗನಾಮ 16. ಜವ 17. ಅರ 18. ತಲಾಂತರ 20. ನವಿರು 21. ಸಾಧನ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

25 ಘಂಟೆ ಹೆಂಗೆ?!

ಇತ್ತೀಚೆಗೆ ಒಂದು ಸುದ್ದಿ ಎಲ್ಲರ ಚಿತ್ತವನ್ನು ಸೆಳೆದಿತ್ತು. ಅದು, ಕೆಲವು ವರ್ಷಗಳ ನಂತರ, ಭೂಮಿಯ ಸಮಯ ಹೆಚ್ಚುತ್ತದೆ. ಅಂದರೆ, ಈಗ ದಿನಕ್ಕೆ 24 ಘಂಟೆಯ ಸಮಯವನ್ನು ಅನುಭವಿಸುತ್ತಿರುವ ನಾವುಗಳು ಇನ್ನೂ ಹಲವಾರು ವರ್ಷಗಳನ್ನು ಬಿಟ್ಟು ನೋಡಿದರೆ, ದಿನಕ್ಕೆ 25 ಘಂಟೆಗಳಿರುತ್ತವೆ ಎಂಬುವುದು ವಿಜ್ಞಾನಿಗಳ ಅಂಬೋಣ. ದಿನಕ್ಕೆ 25 ಘಂಟೆ ನಾವುಗಳು ಬದುಕಿದ್ದಾಗ ಬರಲಿಲ್ಲವೆಂದರೂ, ನಮ್ಮ ನಂತರದ ನೂರಾರು ತಲೆಮಾರುಗಳು 25 ಘಂಟೆಯನ್ನು ಅನುಭವಿಸಬಹುದು. ಆದರೆ, ಆ 25 ಘಂಟೆ ಹೇಗಾಗುತ್ತದೆ ಗೊತ್ತಾ? ಮೊದಲನೆಯದಾಗಿ ಭೂಮಿ ಮತ್ತು ಚಂದ್ರನ ನಡುವೆ ಗುರುತ್ವಾಕರ್ಷಣೆ ಬಲ ಇದೆ. ಅದರಿಂದಲೇ ಚಂದ್ರ ಭೂಮಿಯನ್ನು ಸುತ್ತುತ್ತಿರುವುದು, ಆದರ ಜತೆಗೆ ಚಂದ್ರ ಪ್ರತಿವರ್ಷವೂ 1.5 ಇಂಚಿನಷ್ಟು ಭೂಮಿಯಿಂದ ದೂರಸರಿಯುತ್ತಿದ್ದಾನೆ. ಅದು ಸಮಯವನ್ನು ಹೆಚ್ಚಿಗೆ ಮಾಡುತ್ತದೆ. ಅದರ ಜತೆಗೆ ಚಂದ್ರನ ಜತೆ ಭೂಮಿ ಹೊಂದಿರುವ ಗುರುತ್ವಾಕರ್ಷಣೆಯೂ ಭೂಮಿಯಲ್ಲಿನ ನೀರಿನ ಶಕ್ತಿಯಿಂದ ಭೂಮಿಯು ಚಂದ್ರನಿಂದ ಸ್ವಲ್ಪ ದೂರ ಸರೆಸುತ್ತದೆ. ಈ ಪ್ರಕ್ರಿಯೆ ಹೀಗೆ ನಡೆದು, ಭೂಮಿ ಮತ್ತು ಚಂದ್ರನ ನಡುವಿನ ಅಂತರ ಹೆಚ್ಚಿಸಿ, ಸಮಯವನ್ನು ಜಾಸ್ತಿ ಮಾಡುತ್ತದೆ.

ಪುಸ್ತಕ ಲೋಕ

ತಾರಿ ದಂಡೆ

ಈ ಕೃತಿಯು ಜಯಂತ್ ಕಾಯ್ಕಿಣಿ ಅವರ ಬಿಡಿ ಬರಹಗಳ ಸಂಕಲನವಾಗಿದೆ. ಇಲ್ಲಿ ಲೇಖಕರ ಅಂಕಣ ಬರಹ, ವ್ಯಕ್ತಿರೇಷೆ ಹಾಗೂ ಓದಿನ ಪ್ರತಿಫಲನಗಳು ಹೊಸ ರೂಪವನ್ನು ಪಡೆದುಕೊಂಡಿದೆ. ತಾರಿ ದಂಡೆ ಅಂದರೆ ನದಿ ದಾಟಿಸುವ ದೋಣಿಯನ್ನು ಜನ ಹಿಡಿಯುವ ಜಾಗ ಈ ದಂಡೆಯಿಂದ ಕಾಣುವ ಆಚೆ ತಡಿಯ ಅವ್ಯಕ್ತ ಆಕರ್ಷಣೆಯೇ ಬೇರೆ. ಕೇವಲ ಪ್ರಾಕೃತಿಕ ಸೌಂದರ್ಯದ ಕ್ಯಾಲೆಂಡರ್ ನೋಟದ ನಿರ್ಜನ ರಮಣೀಯಂತೆ ಅಲ್ಲ. ಅಲ್ಲೂ ಜನ ಜೀವನ ಇದೆ ಎಂಬ ಅಂಶದಿಂದಲೇ ಮೂಡಿಬಂದ ಸೆಳೆತ ಅದು. ಅಲ್ಲಿಂದ ದಾರಿ ಮತ್ತೆಲ್ಲೋ ಹೋಗುತ್ತದೆ. ತಟದಲ್ಲಿ ಮರವಿದ್ದರೆ ನದಿಗೆ ಹಿಗ್ಗು. ಅದು ತನ್ನ ಉಡಿಗೆ ಬಿದ್ದ ಹೂಗಳನ್ನು ಎಲೆಗಳನ್ನು ಸೆರಗಿನಲ್ಲಿ ಕಟ್ಟಿಕೊಂಡು ಹರಿಯುತ್ತಲೇ ಇರುತ್ತದೆ. ಆಗ ಮರ ಯಾವುದು? ನದಿ ಯಾವುದು? ಎನ್ನುವುದೇ ಗೊತ್ತಾಗಲ್ಲ ಎಂದಿದ್ದಾರೆ ಇಲ್ಲಿ ಲೇಖಕರು.



ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ಸುದ್ದಿಯಲ್ಲಿ ಕಂಡುಬಂದ 'ಧೋಲವೀರಾ', ಯಾವ ರಾಜ್ಯದಲ್ಲಿದೆ?

- ಎ. ಗುಜರಾತ್.
- ಬಿ. ಪಶ್ಚಿಮ ಬಂಗಾಳ.
- ಸಿ. ಪಂಜಾಬ.
- ಡಿ. ಅಸ್ಸಾಂ.

ಉತ್ತರ: ಎ. ಗುಜರಾತ್

ಮಾಹಿತಿ

ಕ್ರಿ.ಪೂ 3500 (ಪೂರ್ವ-ಹರಪ್ಪನ್)ಕ್ರಿ.ಪೂ 1800 ವರೆಗೆ ಧೋಲಾವೀರವನ್ನು ಆಕ್ರಮಿಸಿಕೊಂಡಿದೆ ಎಂದು ನಂಬಲಾಗಿದೆ. ಜುಲೈ 2021 ರಲ್ಲಿ ಇದನ್ನು UNESCO ವಿಶ್ವ ಪರಂಪರೆಯ ತಾಣವಾಗಿ ಹೆಸರಿಸಲಾಯಿತು. ಮೊದಲ ಎ20 ಪ್ರವಾಸೋದ್ಯಮ ವರ್ಕಿಂಗ್ ಗ್ರೂಪ್ ಸಭೆಯು ಗುಜರಾತ್ನ ರಾನ್ ಆಫ್ ಕಚ್‌ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ, ಪ್ರತಿನಿಧಿಗಳನ್ನು ಹರಪ್ಪನ್ ನಾಗರಿಕತೆಯ ದಕ್ಷಿಣ ಕೇಂದ್ರವಾದ ಧೋಲವೀರಾಕ್ಕೆ ವಿಹಾರಕ್ಕೆ ಕರೆದೊಯ್ಯಲಾಯಿತು. ವಿಶ್ವಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಸಂಸ್ಥೆ (UNWTO), ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO) ಯ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದವು.

ಸುಭಾಷಿತಗಳೆಂಬ ಅನರ್ಘ್ಯ ರತ್ನಗಳು

● ವಿದ್ಯಾಶಂಕರ ಶರ್ಮ

ಲೌಕಿಕವಾದ ಎಷ್ಟೇ ಸಂಪತ್ತುಗಳು ನಮ್ಮದಾಗಿದ್ದರೂ ಮನಶಾಂತಿಯು ಬೇಕೆಂದರೆ ಯಾವ ಸೌಕರ್ಯಗಳೂ ಸಹಾಯ ಮಾಡಲಾರವು. ಐಷಾರಾಮಿ ಸುಪ್ಪತ್ತಿಗೆ ಸುಖ ನಿದ್ದೆ ತರಲಾರದು, ಭವ್ಯ ಭವನಗಳು ಮುದ ನೀಡಲಾರವು. ಮನೆ ತುಂಬ ಇರುವ ಪರಿಚಾರಕರ ಸೇವೆ ಏನೂ ಸಹ್ಯವೆನಿಸದು. ಬಾಹ್ಯ ಸುವಿಧಗಳು ಮನಸ್ಸಿನ ತುಮುಲಗಳನ್ನು ತಹಬಂದಿಗೆ ತರಲು ನಮಗೆ ಸಹಾಯಕಾರಿ ಎನಿಸವು. ಗಾಯವಾಗಿರುವುದು ಅಂತರಂಗಕ್ಕೆ, ಹೃದಯದ ಗೂಡಿಗೆ, ಮನವೆಂಬ ಮರ್ಕಟಕ್ಕೆ! ಅಂಕೆ ಇಲ್ಲದ ನಮ್ಮ ಯೋಚನೆಗಳೇ ನಮ್ಮನ್ನು ಈ ರೀತಿ ಕಾಡುತ್ತಿರುತ್ತವೆ. ಇಂತಹ ಸನ್ನಿವೇಶಗಳಲ್ಲಿ ನಮಗೆ ಆಧಾರವಾಗುವವು ಒಳ್ಳೆಯ ಮಾತುಗಳು, ಹಿತ ನುಡಿಗಳು,

ಇಷ್ಟಮಿತ್ರರೊಡನೆ ಸುಮಧುರ ಸಂವಾದಗಳು. ಆದರೆ ಇವುಗಳಿಗೂ ಒಂದು ಎಲ್ಲೆ ಇದೆ. ಕೆಲವು ಸಮಯಗಳ ನಂತರ ಇವೆಲ್ಲ ಹಳಸುತ್ತವೆ. ಇಂತಹ ಸಂದರ್ಭದಲ್ಲಿ ನಮಗೆ ಜೊತೆಗಾರ ಎನಿಸುವುದು, ಕಾಲದ ಮಿತಿ ಇರದ ಜ್ಞಾನದ ಅಕ್ಷಯ ಭಂಡಾರಗಳಾದ 'ಸುಭಾಷಿತಗಳು'. ಸುಪ್ರಸಿದ್ಧ ಸುಭಾಷಿತ ರತ್ನಭಾಂಡಾಗಾರದಲ್ಲಿ ಹೇಳಿರುವದನ್ನು ನೋಡಿ–

'ಧರ್ಮೋ ಯಶೋ ನಯೋ ದಾಕ್ಷ್ಯಂ ಮನೋಹಾರಿ ಸುಭಾಷಿತಂ।

ಇತ್ಯಾದಿ ಗುಣರತ್ನಾನಾಂ ಸಂಗ್ರಹೀ ನಾವಸೀದತಿ॥

ಧರ್ಮ, ಯಶಸ್ಸು, ನೀತಿ, ದಾಕ್ಷಿಣ್ಯ ಹಾಗೂ ಮನೋಹರವಾದ ಸುಭಾಷಿತಗಳು, ಇಂತಹ ನಿಧಿಗಳನ್ನು ಹೊಂದಿರುವನು ಎಂದೂ ದುಃಖಕ್ಕೆ ಒಳಗಾಗುವುದಿಲ್ಲ.

ನಾವು ಗಮನಿಸಬೇಕು, ಎಲ್ಲ ಇತರ ಗುಣಗಳ ಜೊತೆಗೆ ಸುಭಾಷಿತವೂ ಇರಬೇಕು ಎಂಬುದು ಈ ಮಾತುಗಳ ಅರ್ಥ. ಅದಿಲ್ಲದಿದ್ದರೆ ಎಂದು ಬೇರೆ ಗುಣಗಳ ಪ್ರಯೋಜನ ಶೂನ್ಯವೇ. ಸುಭಾಷಿತ ರತ್ನಭಾಂಡಾಗಾರ ಮತ್ತೆ ಹೇಳುತ್ತದೆ–

ಪೃಥಿವ್ಯಾಂ ತ್ರೀಣಿ ರತ್ನಾನಿ ಜಲಮನ್ನಂ ಸುಭಾಷಿತಂ।
ಮೂಢೈಃ ಪಾಷಾಣಖಂಡೇಶು ರತ್ನಸಂಜ್ಞಾ ವಿಧೀಯತೆ॥

ಅಂದರೆ ಭೂಮಿಯಲ್ಲಿ ಇರುವುದು ಮೂರೇ ಸರ್ವಶ್ರೇಷ್ಠ ವಸ್ತುಗಳು, ನೀರು, ಆಹಾರ ಮತ್ತು ಸುಭಾಷಿತ!

ಆದರೆ ಮೂರ್ಖರು ಕಲ್ಲಿನ ಚೂರುಗಳನ್ನು ರತ್ನ ಎಂದು ಕರೆಯುವುದು ವಿಷಾದಕರ! ಎಷ್ಟು ಅರ್ಥಪೂರ್ಣ! ನಾವು ಇದರ ಸತ್ಯವನ್ನು ಇಂದು ಕಾಣುತ್ತಿದ್ದೇವೆ. ಹಣ, ಸಂಪತ್ತು, ಆಭರಣ, ಭೂಮಿ ಇವುಗಳಿಗಾಗಿ ಏನೆಲ್ಲ ಅವಘಡಗಳು ಸಂಭವಿಸುತ್ತಿವೆ. ಮಾನವ ಸಂಬಧಗಳು ಅಧೋಗತಿಗೆ ತಲುಪಿವೆ. ಮೋಸ, ವಂಚನೆ ದಿನ ನಿತ್ಯದ ಕತೆಯಾಗಿದೆ. ನಾವು ಯಾವುದರಿಂದ ನಮಗೆ ಸಂತೋಷ ಸಿಗುವುದು ಅಂದು ಕೊಂಡಿರುವೆವೋ ಅವುಗಳಿಂದಲೇ ನಮಗೆ ನೋವು ಉಂಟಾಗುತ್ತಿದೆ. ಇಷ್ಟಾದರೂ ನಾವು ಬುದ್ಧಿ ಕಲಿತದ್ದೇವೆಯೇ? ಹಾಗೆ ಕಾಣುತ್ತಿಲ್ಲ. ಸುಭಾಷಿತಗಳ ಮಹತ್ವ ಇರುವುದೇ ಇಲ್ಲಿ. ಅವು ಹೇಳುವ ಮೌಲ್ಯಗಳು ಮಾನವ ಜನಾಂಗಕ್ಕೆ ನೀತಿ ಪಾಠಗಳು. ಸುಭಾಷಿತಗಳ ಜ್ಞಾನ ನಮ್ಮ ವ್ಯಕ್ತಿತ್ವವನ್ನು ಒಂದು ಆರೋಗ್ಯಕರ ಚಿಂತನೆಯ ಆಗರವನ್ನಾಗಿ ಮಾಡುತ್ತದೆ. ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಿರುವ ಆಧುನಿಕ ಜೀವನ ಶೈಲಿ, ಪ್ರಪಂಚದಲ್ಲಿ ನಡೆಯುತ್ತಿರುವ ಹಿಂಸೆ, ಯುದ್ಧಗಳು ಇವುಗಳನ್ನು ನೋಡಿದಾಗ ನಮ್ಮ ಮನಸ್ಸು ವಿಚಲಿತಗೊಳ್ಳುವುದು ಸಹಜ. ಹೀಗಿರುವಾಗ ಸುಭಾಷಿತ ರತ್ನಭಾಂಡಾಗಾರದ ಈ ನುಡಿಗಳು ನಮಗೆ ದಾರಿದೀಪವಾಗುತ್ತವೆ–

ಸಂಸಾರಕಟುವೃಕ್ಷಸ್ಯ ದ್ವೇ ಫಲೇ ಹ್ಯಮೃತೋಪಮೇ।
ಸುಭಾಷಿತರಸಾಸ್ವಾದ: ಸಂಗತಿ: ಸುಜನೇ ಜನೇ॥

ಸಂಸಾರ ಅಥವಾ ಜೀವನ ಒಂದು ಕಹಿಯಾದ ಮರ, ಆದರೆ ಅದರಲ್ಲಿಯೂ ಅಮೃತಕ್ಕೆ ಸಮಾನವಾದ ಎರಡು ಹಣ್ಣುಗಳಿವೆ. ಸುಭಾಷಿತ ಮತ್ತು ಒಳ್ಳೆಯ ಮಾತುಗಳನ್ನು ಆಲಿಸುವುದು, ಮತ್ತು ಸಜ್ಜನರ ಸಹವಾಸ ಮಾಡುವುದು. ಎರಡು ಅತ್ಯಮೂಲ್ಯ ವಿಷಯಗಳ ಬಗೆಗೆ ಇಲ್ಲಿ ಹೇಳಲಾಗಿದೆ. ಸುಭಾಷಿತ ಮತ್ತು ಒಳ್ಳೆಯ ಜನರ ಸಂಗ. ಸಜ್ಜನರ ಸಂಗಕ್ಕೆ ಕೆಲವೊಂದು ಸಾಮಾಜಿಕ ಅಡೆ ತಡೆಗಳು ಬರಬಹುದು, ಆದರೆ ಸುಭಾಷಿತಗಳ ಓದಿಗೆ, ಶ್ರವಣಕ್ಕೆ ಯಾವ ಅಡ್ಡಿಯೂ ಬರಲಾರದು. ಸುಭಾಷಿತಗಳು ಮುಟ್ಟದ ವಿಷಯಗಳಿಲ್ಲ. ಜೀವನದ ಅನಿಶ್ಚಿತತೆ, ಸಿರಿತನ- ಬಡತನ, ಮಿತ್ರ- ಶತ್ರು, ಸದ್ಗುಣ-ದುರ್ಗುಣ, ಧರ್ಮ, ವಿವೇಕ, ವೈರಾಗ್ಯ, ಭಕ್ತಿ, ರಾಜನೀತಿ ಹೀಗೆ ವಿವಿಧ ವಿಷಯಗಳ ಕುರಿತು ನಮಗೆ ನೀತಿ ಹೇಳುತ್ತವೆ. ದಿನವೂ ಇವುಗಳ ಪಠನ, ಮನನ ನಮಗೆ ಬಹಳ ಉಪಕಾರಿ. ಬದುಕಿನ ದ್ವಂದಗಳು, ಸವಾಲುಗಳು, ದುರಂತಗಳು, ಸಂಬಂಧ ಗಳು, ನಿರ್ಧಾರಗಳು, ಇವುಗಳನ್ನು ಎದುರಿಸುವ ಮತ್ತು ನಿಭಾಯಿಸುವ ಛಾತಿ ದೊರೆಯುವುದು ಸುಭಾಷಿತಗಳಿಂದಲೇ. ಬದುಕಿನೆಡೆಗೆ ನಮ್ಮ ದೃಷ್ಟಿಕೋನವನ್ನು ವಿಭಿನ್ನ ಆಯಾಮದಲ್ಲಿ ನೋಡುವ ತಿಳುವಳಿಕೆ ನಮಗೆ ಸುಭಾಷಿತಗಳಿಂದಲೇ ಲಭ್ಯ.

ಸಜ್ಜನರನ್ನು ವರ್ಣಿಸುವ ಸುಭಾಷಿತ ಎಷ್ಟು ಸುಂದರ–

ಅಂಜಲಿಸ್ಥಾನಿ ಪುಷ್ಪಾಣಿ ವಾಸಯಂತಿ ಕರದ್ವಯಂ।
ಅಹೋ ಸುಮನಸಾಂ ಪ್ರೀತರ್ವಾಮದಕ್ಷಿಣಯೋ ಸಮಾ॥

ಅರ್ಥ -ಬೊಗಸೆಯಲ್ಲಿರುವ ಹೂಗಳು ಪಕ್ಷಪಾತವಿಲ್ಲದೆ ಎರಡೂ ಕರಗಳನ್ನು ಸುವಾಸಿತಗೊಳಿಸುತ್ತವೆ. ಅದೇ ರೀತಿ ಸುಜನರು ಒಳ್ಳೆಯವರು ಮತ್ತು ಕೆಟ್ಟವರ ನಡುವೆ ಭೇದ ಮಾಡರು. ಸಜ್ಜನರ ಸಂಪೂರ್ಣ ವ್ಯಕ್ತಿತ್ವವನ್ನು ಹೇಳಿದ ರೀತಿ ನಿಜಕ್ಕೂ ಅದ್ಭುತ. ವಿಧಿಯ ವೈಖರಿಯ ಬಗೆಗೆ ಇರುವ ಮಾತುಗಳು –

ಆಯಾಚಿತ: ಸುಖಂ ದತ್ತೇ ಯಾಚಿತಶ್ಚ ಯಚ್ಛತಿ।
ಸರ್ವಸ್ವಂ ಚಾಪಿ ಹರತೇ ವಿಧಿರುಚ್ಛೃಂಖಲೋ ನೃಣಾಮ್॥

ತಾತ್ಪರ್ಯ -ಬೇಡದಿದ್ದರೂ ವಿಧಿಯು ಸುಖವನ್ನು ತರುತ್ತಾನೆ, ಆದರೆ ಯಾವ ಸೂಚನೆಯೂ ಇಲ್ಲದೆ ನಮ್ಮ ಸರ್ವಸ್ವವನ್ನೂ ಕಿತ್ತುಕೊಳ್ಳುತ್ತಾನೆ, ಅವನಿಗೆ ಯಾವ ನಿಯಮಗಳೂ ಅನ್ವಯಿಸವು. ಸುಭಾಷಿತಗಳ ಸೊಗಡೇ ಇದು. ಮಿತವಾದ ಶಬ್ದಗಳಲ್ಲಿ ಅಪರಿಮಿತವಾದ ಜ್ಞಾನವನ್ನು ಕೊಡುವುದು. ವಿವೇಕವನ್ನು ತಿಳಿಹೇಳುವ ಸುಭಾಷಿತ ನಮ್ಮ ಕಣ್ಣು ತೆರೆಸುತ್ತದೆ–

ಭಿನಾ ಪ್ರಾಪ್ಯಮಭಿವಾಂಛಂತಿ ನಷ್ಟಂ ನೇಚ್ಛಂತಿ ಶೋಚಿತುಂ।
ಆಪತ್ಸು ಚ ನ ಮುಹ್ಯಂತಿ ನರಾ: ಪಂಡಿತಬುದ್ಧಯ: ॥

ವಿವೇಕಶಾಲಿಗಳಾದವರು ಅಲಭ್ಯವಾದುದನ್ನು ಬಯಸುವುದಿಲ್ಲ, ನಷ್ಟವಾಗಿರುವುದಕ್ಕೆ ವ್ಯಥೆ ಪಡುವುದಿಲ್ಲ, ಆಪತ್ಕಾಲದಲ್ಲಿ ಮೋಹಗೊಳ್ಳುವುದೂ ಇಲ್ಲ. ಎರಡು ಸಾಲುಗಳಲ್ಲಿ ಸಾವಿರದಷ್ಟು ಅರ್ಥ!

ನಶ್ವರ ಮನುಷ್ಯ ದೇಹದ ಕುರಿತು ಸುಭಾಷಿತವು ಹೀಗಿದೆ–

ಯತ್ರಾಪ್ತ ಸಂಸ್ಕೃತಂ ಭೋಜ್ಯಂ ಸಾಯಂ ತಚ್ಚ ವಿನಶ್ಯತಿ।
ತದನ್ನರಸಸಂಪುಷ್ಟೇ ಕಾಯೇ ಕಾ ನಾಮ ನಿತ್ಯತಾ॥

ಬೆಳಿಗ್ಗೆ ಮಾಡಿದ ಅನ್ನವು ಸಂಜೆಯ ವೇಳೆಗೆ ಹಳಸುತ್ತದೆ. ಹಾಗಿರುವಾಗ, ಅದೇ ಅನ್ನವನ್ನು ತಿಂದು ಪುಷ್ಟವಾದ ದೇಹವು ಹೇಗೆ ಹೊಸತಾಗಿರಲು ಸಾಧ್ಯ!

ಸುಭಾಷಿತಗಳು ಋಷಿಗಳ, ದೈವಾಂಶ ಸಂಭೂತರ, ಗುರು ಹಿರಿಯರ ಜೀವನಾನುಭವದ ಫಲಶ್ರುತಿಗಳೇ ಆಗಿರುವುದನ್ನು ನಾವು ಕಾಣುತ್ತೇವೆ. ನಮಗೆ ದಾರಿ ತೋರುವ ಮಾತಾ ಪಿತರು, ಗುರು ಹಿರಿಯರು, ಜ್ಞಾನಿಗಳು, ಸಾಧಕರಿಂದ ನಾವು ಕೇಳಿರುವ ಹಿತನುಡಿಗಳೇ ಈ ಸುಭಾಷಿತಗಳು. ನಮ್ಮ ದೈನಂದನ ಕಾಯಕಗಳಿಂದ ಹಿಡಿದು, ವಿವೇಕ, ವೈರಾಗ್ಯದ ತನಕ ವ್ಯಾಪಿಸಿವೆ ಸುಭಾಷಿತಗಳು. ಸುಭಾಷಿತಗಳ ಅತ್ಯಂತ ದೊಡ್ಡ ಹಿರಿಮೆಯೆಂದರೆ, ಅವು ಎಂದೂ ಅಪ್ರಸ್ತುತವಾಗದಿರವುದು. ದೇಶ, ಕಾಲಗಳನ್ನು ಮೀರಿದ ಅವುಗಳ ಬಾಹುಳ್ಯ ಆಶ್ಚರ್ಯ ತರುವಂಥದ್ದು. ಅವು ಎಂದಿಗೂ ನಾಶವಾಗದೇ ನಮಗೆ ಉಪಲಬ್ದವಾಗಿರುವುದು ಕೂಡ ನಮ್ಮ ಅದೃಷ್ಟವೇ. ಬಂಧು ಮಿತ್ರರ, ಹಿತ ಚಿಂತಕರ ನುಡಿಗಳು ಎಲ್ಲ ಕಾಲದಲ್ಲೂ ದೊರಕುವದೆಂಬ ಭರವಸೆ ಇಲ್ಲ. ಆದರೆ ಸುಭಾಷಿತಗಳು ಅವಿನಾಶಿ ಮತ್ತು ಅಮರ. ಅವುಗಳನ್ನು ಸಂರಕ್ಷಿಸುವ, ಮುಂದಿನ ಪೀಳಿಗೆಗೆ ತಲುಪಿಸುವ ಗುರುತರ ಹೊಣೆಗಾರಿಕೆ ನಮ್ಮೆಲ್ಲರದು.

ಸಮಾಚಾರ ಸಣ್ಣದಲ್ಲ

ಆರ್‌ಸಿಬಿಗೆ ವಿರಾಟ್ ಕೊಹ್ಲಿ ನಾಯಕ?

ದೆಹಲಿ: ಐಪಿಎಲ್ 18ನೇ ಆವೃತ್ತಿಯ ಎರಡು ದಿನಗಳ ಮೆಗಾ ಹರಾಜು ಪ್ರಕ್ರಿಯೆ ಮುಕ್ತಾಯ ಕಂಡಿದ್ದು, ಎಲ್ಲಾ 10 ಫ್ರಾಂಚೈಸಿಗಳು ಬಲಿಷ್ಠ ತಂಡವನ್ನು ಕಟ್ಟಿದೆ. 2025ರ ಮಾರ್ಚ್ 14ರಿಂದ ಮೇ 25ರವರೆಗೆ ಟೂರ್ನಿ ನಡೆಯಲಿದೆ. ಇದೀಗ ಆರ್‌ಸಿಬಿ ತಂಡಕ್ಕೆ ವಿರಾಟ್ ಕೊಹ್ಲಿ ಮತ್ತೆ ನಾಯಕನಾಗಲಿದ್ದಾರೆ ಎನ್ನಲಾಗಿದೆ. ವಿರಾಟ್ ಕೊಹ್ಲಿ 2013ರಲ್ಲಿ ಆರ್‌ಸಿಬಿಯ ಪೂರ್ಣ ಪ್ರಮಾಣದ ನಾಯಕನಾಗಿ ನೇಮಕಗೊಂಡಿದ್ದರು. 2021ರ ತನಕ ಅವರು ಆರ್‌ಸಿಬಿಯನ್ನು ಮುನ್ನಡೆಸಿದ್ದರು. ಭಾರತ ತಂಡದ ಮೂರು ಮಾದರಿಯ ನಾಯಕತ್ವದ ಒತ್ತಡದಿಂದ ಅವರು ಐಪಿಎಲ್ ನಾಯಕತ್ವದಿಂದ ಕೆಳಗಿಳಿದಿದ್ದರು. ಇದೀಗ ಅವರು ಭಾರತ ತಂಡದ ನಾಯಕನಾಗಿಲ್ಲ, ಜತೆಗೆ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೂ ವಿದಾಯ ಹೇಳಿದ್ದಾರೆ. ಒತ್ತಡ ರಹಿತವಾಗಿರುವ ಅವರು ಮತ್ತೆ ಈ ಸಲ ಆರ್‌ಸಿಬಿ ನಾಯಕನಾದರೂ ಅಚ್ಚರಿಯಿಲ್ಲ. ಕಳೆದ ಬಾರಿಯ ಆವೃತ್ತಿಯಲ್ಲಿ ಡು ಪ್ಲೆಸಿಸ್ ಅಲಭ್ಯದ ವೇಳೆ ಕೊಹ್ಲಿ ಉಸ್ತುವಾರಿ ನಾಯಕನಾಗಿ ಕೆಲವು ಪಂದ್ಯದಲ್ಲಿ ಆರ್‌ಸಿಬಿಯನ್ನು ಮುನ್ನಡೆಸಿದ್ದರು.

ತವರಿಗೆ ಮರಳಿದ ಕೋಚ್ ಗಂಭೀರ್



ಸಿಡ್ನಿ: ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯ ಗೆದ್ದ ಖುಷಿಯಲ್ಲಿರುವ ಭಾರತ ತಂಡಕ್ಕೆ ಆಘಾತವೊಂದು ಎದುರಾಗಿದೆ. ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ದಿಢೀರ್ ಆಗಿ ತವರಿಗೆ ಮರಳಿದ್ದಾರೆ. ಕೌಟುಂಬಿಕ ತುರ್ತು ಪರಿಸ್ಥಿತಿ ಹಿನ್ನೆಲೆಯಲ್ಲಿ ಗಂಭೀರ್ ಭಾರತಕ್ಕೆ ಮರಳಿದ್ದಾರೆ ಎಂದು ಬಿಸಿಸಿಐ ಮಾಹಿತಿ ನೀಡಿದೆ. ಡಿಸೆಂಬರ್ 6ರಂದು ನಡೆಯುವ ದ್ವಿತೀಯ ಪಂದ್ಯದ ವೇಳೆ ಗಂಭೀರ್ ಮತ್ತೆ ತಂಡವನ್ನು ಕೂಡಿಕೊಳ್ಳುವ ನಿರೀಕ್ಷೆ ಇದೆ. ಎರಡು ದಿನಗಳ ಪಿಂಕ್ ಬಾಲ್ ಪ್ರವಾಸದ ಆಟಕ್ಕಾಗಿ ಭಾರತ ತಂಡ ಬುಧವಾರ ಕ್ಯಾನ್‌ಬೆರಾಗೆ ಪ್ರಯಾಣಿಸಲಿದೆ. ಆದರೆ ಶನಿವಾರ ಆರಂಭವಾಗಲಿರುವ ಅಭ್ಯಾಸ ಪಂದ್ಯಕ್ಕೆ ಗೌತಮ್ ಗಂಭೀರ್ ತಂಡದ ಭಾಗವಾಗುವುದಿಲ್ಲ ಎಂದು ಬಿಸಿಸಿಐ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಭಾರತ ತಂಡ ಕೂಡಿಕೊಂಡಿರುವ ರೋಹಿತ್ ಶರ್ಮ ಸೋಮವಾರ ನೆಟ್ಸ್‌ನಲ್ಲಿ ಪಿಂಕ್ ಬಾಲ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದರು. ಮಂಗಳವಾರ ಟೀಮ್ ಇಂಡಿಯಾ ಆಟಗಾರರು ಕೂಡ ಅಭ್ಯಾಸ ಆರಂಭಿಸಿದ್ದಾರೆ.

ಐಪಿಎಲ್ : ಸೌದಿ ಅರೇಬಿಯಾದ ಜೆಡ್ಡಾ ನಗರದಲ್ಲಿ ಮುಕ್ತಾಯವಾದ ಮೆಗಾ ಹರಾಜು

ಐವರು ಟಾಪ್ ಆಟಗಾರರು ಅನ್‌ಸೋಲ್ಡ್

ನವದೆಹಲಿ: ಸೌದಿ ಅರೇಬಿಯಾದ ಜೆಡ್ಡಾ ನಗರದಲ್ಲಿ ನಡೆದಿದ್ದ 2025ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್-2025) ಟೂರ್ನಿಯ ಮೆಗಾ ಹರಾಜಿನಲ್ಲಿ ಎಲ್ಲಾ 10 ತಂಡಗಳು ಒಟ್ಟು 182 ಆಟಗಾರರನ್ನು ಖರೀದಿಸಿವೆ. ಭಾರತ ತಂಡದ ವಿಕೆಟ್ ಕೀಪರ್ ರಿಷಭ್ ಪಂತ್ ಈ ಸಲದ ಐಪಿಎಲ್ ಹರಾಜಿನ ಇತಿಹಾಸದಲ್ಲಿಯೇ ಅತ್ಯಂತ ದುಬಾರಿ ಆಟಗಾರ ಎನಿಸಿಕೊಂಡಿದ್ದಾರೆ. ರಿಷಭ್ ಪಂತ್ ಅವರನ್ನು ಲಖನೌ ಸೂಪರ್ ಜಯಂಟ್ಸ್ ತಂಡ 27 ಕೋಟಿ ರೂ. ಗಳನ್ನು ನೀಡುವ ಮೂಲಕ ಖರೀದಿಸಿತ್ತು. ಶ್ರೇಯಸ್ ಅಯ್ಯರ್ ಅವರನ್ನು ಪಂಜಾಬ್ ಕಿಂಗ್ಸ್ 26.75 ಕೋಟಿ ರೂ. ಖರೀದಿಸಿದ್ದು, ಅವರು ಎರಡನೇ ಅತ್ಯಂತ ದುಬಾರಿ ಆಟಗಾರ ಎನಿಸಿಕೊಂಡಿದ್ದಾರೆ. ಈ ಸಲದ ಐಪಿಎಲ್‌ನಲ್ಲಿ ಟಾಪ್ ಐವರು ಆಟಗಾರರ ಅನ್‌ಸೋಲ್ಡ್ ಆಗಿದ್ದಾರೆ.

ಅನ್‌ಸೋಲ್ಡ್ ಆಗಲು ಕಾರಣವೇನು?

ಐಪಿಎಲ್ ಟೂರ್ನಿಯ ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾಗಿರುವ ಡೇವಿಡ್ ವಾರ್ನರ್ ಸೇರಿದಂತೆ ವಿಶ್ವದ ಕೆಲ ಸ್ಟಾರ್ ಬ್ಯಾಟ್ಸ್‌ಮನ್‌ಗಳನ್ನು ಖರೀದಿಸಲು ಈ ಸಲ ಯಾವುದೇ ಫ್ರಾಂಚೈಸಿಯೂ ಒಲವು ತೋರಲಿಲ್ಲ. ಕೆಲ ಆಟಗಾರರ ಮೂಲ ಬೆಲೆ ಅಧಿಕವಾಗಿದ್ದ ಕಾರಣ ಅವರೆಲ್ಲಾ ಅನ್‌ಸೋಲ್ಡ್ ಆಗಿ ಉಳಿಯಬೇಕಾಯಿತು. ಹಾಗಾಗಿ ವಾರ್ನರ್, ಶಾರ್ದುಲ್, ಮಯಾಂಕ್, ವಿಲಿಯಮ್ಸ್ ಮತ್ತು ಬೈರ್‌ಸ್ಟೋವ್ ಅನ್‌ಸೋಲ್ಡ್ ಪರಿಸ್ಥಿತಿಯನ್ನು ಎದುರಿಸಬೇಕಾಯಿತು.

ಡೇವಿಡ್ ವಾರ್ನರ್

ಐಪಿಎಲ್ ಕ್ರಿಕೆಟ್‌ನ ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿರುವ ಆಸ್ಟ್ರೇಲಿಯಾದ ಮಾಜಿ ಆರಂಭಿಕ ಡೇವಿಡ್ ವಾರ್ನರ್ ಮೆಗಾ ಹರಾಜಿನಲ್ಲಿ ಅನ್‌ಸೋಲ್ಡ್ ಆಗಿದ್ದಾರೆ. ಇತ್ತೀಚೆಗೆ ವಾರ್ನರ್ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದರೂ, ಅವರು ವಿಶ್ವದಾದ್ಯಂತ ಫ್ರಾಂಚೈಸಿ ಲೀಗ್‌ಗಳಲ್ಲಿ ಆಡುವುದನ್ನು ಮುಂದುವರಿಸಿದ್ದರು. ಐಪಿಎಲ್‌ನಲ್ಲಿ ಯಾವುದಾದರೂ ಒಂದು ತಂಡ ಖರೀದಿಸಬಹುದೆಂದು ನಿರೀಕ್ಷೆ ಮಾಡಿದ್ದ ವಾರ್ನರ್‌ಗೆ ಈ ಸಲ ಭಾರಿ ನಿರಾಶೆ ಆಗಿದೆ.

ಶಾರ್ದುಲ್ ಠಾಕೂರ್

ಭಾರತ ತಂಡದ ಎಲ್ಲಾ ಸ್ವರೂಪದ ಆಟಗಾರನಾಗಿ ಹಲವು ವರ್ಷಗಳ ಕಾಲ ಆಡಿದ್ದ ಸೀಮ್ ಬೌಲಿಂಗ್ ಆಲ್‌ರೌಂಡರ್ ಶಾರ್ದುಲ್ ಠಾಕೂರ್ ಅವರು ಕೂಡ ಮೆಗಾ ಹರಾಜಿನಲ್ಲಿ ಅನ್‌ಸೋಲ್ಡ್ ಆದರು. ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರ ಹಲವು ಸೀಸನ್‌ಗಳಲ್ಲಿ ನಿಯಮಿತವಾಗಿ ಆಡಿದ್ದ ಶಾರ್ದುಲ್, ಕಳೆದ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್‌ನ ಬಹುತೇಕ ಪಂದ್ಯಗಳಲ್ಲಿ ಬೆಂಚ್ ಕಾದಿದ್ದರು. ಈ ಬಾರಿ ಅವರನ್ನು ಖರೀದಿಸಲು ಯಾವುದೇ ತಂಡ ಮನಸ್ಸು ಮಾಡಲಿಲ್ಲ.

ಮಯಾಂಕ್

ಕರ್ನಾಟಕ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಮಯಾಂಕ್ ಅಗರ್ವಾಲ್ ಅವರನ್ನು ಕೂಡ ಈ ಸಲ ಐಪಿಎಲ್ ಮೆಗಾ ಹರಾಜಿನಲ್ಲಿ ಖರೀದಿಸಲು ಯಾವುದೇ ತಂಡ ಮುಂದೆ ಬರಲಿಲ್ಲ. ಕಳೆದ ಹಲವು ಆವೃತ್ತಿಗಳಲ್ಲಿ ಮಯಾಂಕ್ ಅಗರ್ವಾಲ್ ಅವರು ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ್ದರು. ಸ್ಫೋಟಕ ಬ್ಯಾಟಿಂಗ್ ಮಾಡುವ ಕೌಶಲ್ಯವನ್ನು ಹೊಂದಿರುವ ಅವರು ಕಳೆದ ಆವೃತ್ತಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಕಾಣಿಸಿಕೊಂಡಿದ್ದರು.

ಕೇನ್ ವಿಲಿಯಮ್ಸನ್

ಟೆಸ್ಟ್, ಒಡಿಐ ಹಾಗೂ ಟಿ20 ಹೀಗೆ ಮೂರೂ ಸ್ವರೂಪಗಳಲ್ಲಿ ಬ್ಯಾಟಿಂಗ್ ಸಾಮರ್ಥ್ಯವನ್ನು ಹೊಂದಿರುವ ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಅವರು ಕೂಡ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೆಗಾ ಹರಾಜಿನಲ್ಲಿ ಅನ್‌ಸೋಲ್ಡ್ ಆಗಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ತಂಡದ ಮಾಜಿ ನಾಯಕರಾಗಿದ್ದ ಕೇನ್ ವಿಲಿಯಮ್ಸ್ ಗುಜರಾತ್ ಟೈಟನ್ಸ್ ತಂಡವನ್ನು ಕೊನೆಯ ಬಾರಿ ಪ್ರತಿನಿಧಿಸಿದ್ದರು. ಆದರೆ ಗಾಯದ ಕಾರಣ ಅವರು ಮತ್ತೆ ಐಪಿಎಲ್‌ಗೆ ಮರಳಿರಲಿಲ್ಲ.

ಜಾನಿ ಬೈರ್‌ಸ್ಟೋವ್

ಇಂಗ್ಲೆಂಡ್ ತಂಡದ ಸ್ಫೋಟಕ ಬ್ಯಾಟ್ಸ್‌ಮನ್ ಜಾನ್ ಬೈರ್‌ಸ್ಟೋವ್ ಅವರು ಕೂಡ ಈ ಬಾರಿ ಮೆಗಾ ಹರಾಜಿನಲ್ಲಿ ಅನ್‌ಸೋಲ್ಡ್ ಆಗಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ತಂಡದಿಂದ ಪಂಜಾಬ್ ಕಿಂಗ್ಸ್ ತಂಡಕ್ಕೆ ತೆರಳಿದ್ದ ಅವರು ಅಲ್ಲಿ ಸ್ಥಿರ ಪ್ರದರ್ಶನ ತೋರುವಲ್ಲಿ ವಿಫಲರಾಗಿದ್ದರು. ಪ್ರಸ್ತುತ ಬ್ಯಾಟಿಂಗ್ ಫಾರ್ಮ್ ಕಳೆದುಕೊಂಡಿರುವ ಜಾನಿ ಬೈರ್‌ಸ್ಟೋವ್ ವಿಕೆಟ್ ಕೀಪಿಂಗ್‌ನಲ್ಲಿ ಅತ್ಯುತ್ತಮ ಕೌಶಲ್ಯ ಹೊಂದಿದ್ದಾರೆ, ಆದರೂ ಅವರನ್ನು ಈ ಸಲ ಯಾವುದೇ ಫ್ರಾಂಚೈಸಿಯೂ ಖರೀದಿಸಲು ಒಲವು ತೋರಲಿಲ್ಲ.

ಆರ್‌ಸಿಬಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡ ದೇವದತ್ ಪಡಿಕ್ಕಲ್, ಮನೋಜ್ ಭಾಂಡಗೆ

ಐಪಿಎಲ್: ಡೆಲ್ಲಿಯಲ್ಲಿ ಮೂವರು ಕನ್ನಡಿಗರಿಗೆ ಸ್ಥಾನ

ದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರ ಮೆಗಾ ಹರಾಜಿನಲ್ಲಿ ಕರ್ನಾಟಕದ 24 ಆಟಗಾರರು ಕಾಣಿಸಿಕೊಂಡಿದ್ದರು. ಇವರಲ್ಲಿ ಆರ್‌ಸಿಬಿ ಫ್ರಾಂಚೈಸಿಯು ಕೇವಲ ಇಬ್ಬರನ್ನು ಮಾತ್ರ ಖರೀದಿಸಿದೆ, ಆದರೆ ಅತ್ತ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮೂವರು ಕನ್ನಡಿಗರನ್ನು ಖರೀದಿಸಿ ಒಂದು ಹೆಜ್ಜೆ ಮುಂದೆ ಹೋಗಿರುವುದು ವಿಶೇಷ.

ಐಪಿಎಲ್ ಮೆಗಾ ಹರಾಜಿನ ಮೂಲಕ ಆರ್‌ಸಿಬಿ ಫ್ರಾಂಚೈಸಿಯು 22 ಸದಸ್ಯರ ಬಲಿಷ್ಠ ಬಳಗವನ್ನು ಈಗಾಗಲೇ ರೂಪಿಸಿದೆ. ಈ ಬಳಗದಲ್ಲಿ ಕರ್ನಾಟಕದಿಂದ ಆಯ್ಕೆಯಾಗಿರುವುದು ಕೇವಲ ಇಬ್ಬರು ಮಾತ್ರ ಎಂಬುದೇ ಅಚ್ಚರಿ. ಅದರಲ್ಲೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಕರ್ನಾಟಕದ ಯುವ ಪ್ರತಿಭೆಗಳನ್ನು ನಿರ್ಲಕ್ಷಿಸಿದ್ದಾರೆ ಎಂಬ ಆರೋಪವೊಂದನ್ನು ಕೆಲವು ಕ್ರಿಕೆಟ್ ಪ್ರೇಮಿಗಳು ಸಮಾಜಿಕ ಜಾಲತಾಣದಲ್ಲಿ ಮಾಡತೊಡಗಿದ್ದಾರೆ. ಈ ಹಿಂದೆ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಆಡಿದ್ದ ದೇವದತ್ ಪಡಿಕ್ಕಲ್ ಅವರನ್ನು ತಂಡಕ್ಕೆ ಮತ್ತೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಕಳೆದ ಎರಡು ಸೀಸನ್‌ಗಳಿಂದ ಆರ್‌ಸಿಬಿ ಬಳಗದಲ್ಲಿದ್ದ ಮನೋಜ್ ಭಾಂಡಗೆಯನ್ನು ಮತ್ತೆ ಹರಾಜಿನಲ್ಲಿ ಖರೀದಿಸಿದ್ದಾರೆ. ಆದರೆ ಆರ್‌ಸಿಬಿಗಿಂತ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ಮೂವರು ಕನ್ನಡಿಗರಿಗೆ ಮಣೆ ಹಾಕಿರುವುದು ಈ ಸಲದ ವಿಶೇಷ, ಅಂದರೆ ಡೆಲ್ಲಿ ಕ್ಯಾಪಿಟಲ್‌ನ 23 ಆಟಗಾರರ ಬಳಗದಲ್ಲಿ ಮೂವರು ಕನ್ನಡಿಗರು ಸ್ಥಾನ ಪಡೆದಿದ್ದಾರೆ. ಅದರಂತೆ ಐಪಿಎಲ್ 2025ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಕೆ.ಎಲ್. ರಾಹುಲ್, ಕರುಣ್ ನಾಯರ್ ಹಾಗೂ ಮನ್ವಂತ್ ಕುಮಾರ್ ಕಾಣಿಸಿಕೊಳ್ಳಲಿದ್ದಾರೆ.

ಇತ್ತ ಐಪಿಎಲ್ ಮೆಗಾ ಹರಾಜಿನಲ್ಲಿ ಕರ್ನಾಟಕದ 24 ಆಟಗಾರರು ಕಾಣಿಸಿಕೊಂಡಿದ್ದರೂ, ಆರ್‌ಸಿಬಿ ಫ್ರಾಂಚೈಸಿ ಸ್ಥಳೀಯ ಆಟಗಾರರನ್ನು ನಿರ್ಲಕ್ಷಿಸಿರುವುದು ಇದೀಗ ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿದೆ.

ಅದರಲ್ಲೂ ಕೆ.ಎಲ್.ರಾಹುಲ್‌ರಂತಹ ಆಟಗಾರನಿಗಾಗಿ ಬಿಡ್ಡಿಂಗ್‌ನಲ್ಲಿ ಆರ್‌ಸಿಬಿ ಈ ಸಲ ಪ್ರಾಶಸ್ತ್ಯ ನೀಡದಿರುವ ಬಗ್ಗೆ ಅಭಿಮಾನಿಗಳು ಅಸಮಾಧಾನ ಹೊರಹಾಕಿದ್ದಾರೆ.

ಇವೆಲ್ಲದರ ನಡುವೆ ಬಲಿಷ್ಠ ಪಡೆಯನ್ನು ರೂಪಿಸಿರುವ ಆರ್‌ಸಿಬಿ ಈ ಬಾರಿಯಾದರೂ ಕಪ್ ಗೆಲ್ಲಲಿದೆಯಾ ಎಂಬುದನ್ನು ಕಾದು ನೋಡಬೇಕಿದೆ.

ಕೇವಲ 7 ರನ್‌ಗೆ ಆಲೌಟ್: ಟಿ20 ಇತಿಹಾಸ ಕನಿಷ್ಟ ರನ್

ಲಾಗೋಸ್: ಕ್ರಿಕೆಟ್ ಜಂಟಲ್‌ಮೆನ್ ಗೇಮ್ ಎನ್ನಲಾಗುತ್ತದೆ, ಹಾಗಾಗಿಯೂ ಕ್ರಿಕೆಟ್‌ನಲ್ಲಿ ಅಸಾಧ್ಯ ಎಂಬುದು ಯಾವುದೂ ಇಲ್ಲ. ಕೆಲವೊಮ್ಮೆ ಬ್ಯಾಟರ್‌ಗಳು 6 ಎಸೆತಕ್ಕೆ 6 ಸಿಕ್ಸರ್ ಬಾರಿಸಿ ಮೆರೆದಾಡುತ್ತಾರೆ, ಬೌಲರ್‌ಗಳೂ ಇನ್ನಿಲ್ಲದಂತೆ ಅಧಿಪತ್ಯ ಸ್ಥಾಪಿಸುತ್ತಾರೆ. ಇಂತಹದ್ದೇ ಘಟನೆಯೊಂದು ಇದೀಗ ಕ್ರಿಕೆಟ್ ವಲಯದಲ್ಲಿ ಭಾರೀ ವೈರಲ್ ಆಗಿದೆ. ಐವರಿ ಕೋಸ್ಟ್ ತಂಡವು ಕೇವಲ 7 ರನ್‌ಗೆ ಆಲೌಟ್ ಆಗಿ ಕೆಟ್ಟ ದಾಖಲೆಯೊಂದನ್ನು ಬರೆದಿದೆ. ಇದು ಟಿ20 ಕ್ರಿಕೆಟ್ ಇತಿಹಾಸದಲ್ಲೇ ತಂಡವೊಂದು ಗಳಿಸಿದ ಅತೀ ಕಡಿಮೆ ಮೊತ್ತ. ಲಾಗೋಸ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಆತಿಥೇಯ ನೈಜೀರಿಯಾ ಹಾಗೂ ಐವರಿ ಕೋಸ್ಟ್ ತಂಡಗಳು ಮುಖಾಮುಖಿಯಾಗಿದ್ದವು.

ವಿಟಾಕೀಸ್

ಹರಿದಾಸರ ದಿನಚರಿಗೆ ಸೆನ್ಸಾರ್ ಅಸ್ತು

ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಶ್ರೀಮಂತಿಕೆ ಯನ್ನ ಬೆಳ್ಳಿತೆರೆಗೆ ತರುವ ಉದ್ದೇಶದಿಂದ, ಕರಿಗಿರಿ ಫಿಲ್ಮ್ಸ್, ಹರಿದಾಸರ ದಿನಚರಿ ಚಿತ್ರವನ್ನು ನಿರ್ಮಿಸಿದೆ. ಸುಮಾರು ಒಂದೂವರೆ ಗಂಟೆಗಳಲ್ಲಿ ಪುರಂದರ ದಾಸರ ಒಂದು ದಿನದ ಜೀವನ ಯಾನವನ್ನು ಸಾಂಕೇತಿಕವಾಗಿ ತೆರೆದಿಡುವ ಪ್ರಯತ್ನವನ್ನು ಈ ಚಿತ್ರದಲ್ಲಿ ಮಾಡಲಾಗಿದೆ. ಹರಿದಾಸರ ದಿನಚರಿ ಸಿನಿಮಾವನ್ನು ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರವನ್ನು ಮೆಚ್ಚಿಕೊಂಡಾಡಿದ್ದು, ಯು ಸರ್ಟಿಫಿಕೇಟ್ ನೀಡಿದೆ. ಚಿತ್ರ ಹದಿನೈದನೇ ಶತಮಾನದ ದಾಸ ಶ್ರೇಷ್ಠ ಪುರಂದರ ದಾಸರ ದೈನಂದಿನ ಜೀವನದ ಮನೋಹರ ದೃಶ್ಯಗಳನ್ನು ಒಳ ಗೊಂಡಿದೆ.

ಇಂತಹ ಸಿನಿಮಾಗಳು ಶಾಲಾ ಕಾಲೇಜುಗಳಲ್ಲಿಯೂ ಪ್ರದರ್ಶನ

ವಾಗಬೇಕು ಎಂದು ಸೆನ್ಸಾರ್ ಮಂಡಳಿಯ ಸದಸ್ಯರು ಅಭಿಪ್ರಾಯ ಪಟ್ಟಿದ್ದಾರೆ. ಡಾ.ವಿದ್ಯಾಭೂಷಣ ಪುರಂದರ ದಾಸರಾಗಿ ಅಭಿನಯಿಸಿದ್ದು ಕೆ.ವಿ.ಘನಶ್ಯಾಮ್, ಗೋಕುಲ್ ಅಯ್ಯರ್, ವಾಸು ದೇವ ಮೂರ್ತಿ, ಚಲಪತಿ, ಪ್ರಸನ್ನ ವೆಂಕಟೇಶ ಮೂರ್ತಿ, ಪದ್ಮಕಲಾ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ಪುರಂದರ ದಾಸರ ಕೃತಿಗಳ ಸಾಹಿತ್ಯವನ್ನು ಸಮಯೋಚಿತವಾಗಿ ಬಳಸಿಕೊಳ್ಳಲಾ ಗಿದೆ. ಗಿರೀಶ್ ನಾಗರಾಜ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ನಮ್ಮ ರಾಜ್ಯದ ಪ್ರಸಿದ್ಧ ಐತಿಹಾಸಿಕ ತಾಣಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಅಬ್ಬರಿಸಲು ಸಿದ್ಧವಾದ ಪ್ರತಾಪ



ಸ್ತಬ್ದ ಚಿತ್ರದ ಮೂಲಕ ಮನಗೆದ್ದ ಪ್ರತಾಪ ಸಿಂಹ, ಈ ಬಾರಿ ಅದ್ಭುತ ಕಥೆ ಹೇಳಲು ಸಿದ್ಧವಾಗುತ್ತಿದ್ದಾರೆ. ಹೌದು ಪ್ರತಾಪ ಸಿಂಹ ಅಭಿನಯದ ಎರಡು ಸಿನಿಮಾಗಳು ಒಟ್ಟಿಗೆ ಸೆಟ್ಟೇರಲಿವೆ. ಇವಿಲ್ ಹಾಗೂ ಸೆವೆನ್ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರಲಿವೆ. ಇವಿಲ್ ಆ್ಯಕ್ಷನ್ ಸಿನಿಮಾವಾಗಿದ್ದು ಲಾಲಿ ರಾಘವ ನಿರ್ದೇಶನ ಮಾಡಲಿದ್ದಾರೆ. ನಾವು ತಾಳ್ಮೆ ಕಳೆದುಕೊಂಡಾಗ ನಮ್ಮೊಳಗಿರುವ ಇವಿಲ್ ಹೇಗೆ ಹೊರಬರುತ್ತದೆ ಇದರಿಂದ ಏನೆಲ್ಲಾ ಸಮಸ್ಯೆಗಳು ಸಂಭವಿಸುತ್ತದೆ ಎಂಬುದೇ ಚಿತ್ರದ ಒನ್ ಲೈನ್ ಸ್ಟೋರಿಯಾಗಿದೆ. ಇನ್ನು ಸೆವೆನ್, ಥ್ರಿಲ್ಲರ್ ಕಥೆಯ ಸಿನಿಮಾವಾಗಿದ್ದು ಕಗ್ಗಂಟಾದ ಸಮಸ್ಯೆಯನ್ನು ಭೇದಿಸುವ ಥ್ರಿಲ್ಲರ್ ಜಾನರ್‌ನ ಸಿನಿಮಾವಾಗಿ ಮೂಡಿಬರಲಿದೆ. ಪಿ.ರಶ್ಮಿ, ಸೆವೆನ್ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ಈ ಎರಡು ಸಿನಿಮಾಗಳು ಅದ್ದೂರಿ ಬಜೆಟ್‌ನಲ್ಲಿ ನಿರ್ಮಾಣವಾಗಲಿವೆ. ಸಾಯಿ ಸಾಗರ್ ಫಿಲಂಸ್ ಫ್ಯಾಕ್ಟರಿಯಲ್ಲಿ ಸಿನಿಮಾ ನಿರ್ಮಾಣವಾಗುತ್ತಿವೆ. ಈಗಾಗಲೇ ಸಿನಿಮಾದ ಪ್ರೀ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿದ್ದು ಜನವರಿಯಲ್ಲಿ ಮುಹೂರ್ತ ನೆರವೇರಲಿದೆ.

ಸೆವೆನ್ ಹಾಗೂ ಇವಿಲ್ ಸಿನಿಮಾಗಾಗಿ ಎರಡು ವರ್ಷಗಳಿಂದ ಕಥೆಯಲ್ಲಿ ಮುಳುಗಿದ್ದೆವು. ಈಗ ಸ್ಕ್ರಿಪ್ಟ್ ಕೆಲಸಗಳು ಮುಗಿದಿದ್ದು ಚಿತ್ರೀಕರಣಕ್ಕೆ ಸಿದ್ಧತೆ ನಡೆಸಿದ್ದೇವೆ. ಈ ಸಿನಿಮಾಗಳಲ್ಲಿನ ಪಾತ್ರಕ್ಕೆ ತಕ್ಕಂತೆ ಆ್ಯಕ್ಷನ್, ರೋಪ್ ತರಬೇತಿ ಪಡೆದಿದ್ದೇನೆ. ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲು ಉತ್ಸುಕನಾಗಿದ್ದೇನೆ.

-ಪ್ರತಾಪ ಸಿಂಹ ನಟ

ಕನ್ನಡಕ್ಕೆ ಮಹಿಳಾ ನಿರ್ದೇಶಕಿ

ಕನ್ನಡ ಚಿತ್ರರಂಗದಲ್ಲಿ ಮಹಿಳಾ ನಿರ್ದೇಶಕಿಯರ ಸಂಖ್ಯೆ ಬಲು ವಿರಳ. ಸುಮನಾ ಕಿತ್ತೂರು, ಸಂಜೋತಾ ಭಂಡಾರಿ.. ಅವರಂತಹ ಮಹಿಳಾ ನಿರ್ದೇಶಕಿಯರು ಕನ್ನಡ ಚಿತ್ರರಂಗಕ್ಕೆ ಒಳ್ಳೆಯ ಸಿನಿಮಾಗಳನ್ನು ನೀಡಿದ್ದಾರೆ. ಅಂತೆಯೇ ಈಗ, ಪಿ.ರಶ್ಮಿ ಕನ್ನಡ ಚಿತ್ರರಂಗಕ್ಕೆ ಪರಿಚಿತರಾಗುತ್ತಿದ್ದಾರೆ. ಹೌದು, ನಿರ್ದೇಶನದ ಬಗ್ಗೆ ತರಬೇತಿ ಪಡೆದಿರುವ ರಶ್ಮಿ, ಸ್ತಬ್ದ ಚಿತ್ರದಲ್ಲಿ ಸಹಾಯಕ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿದ್ದರು. ಈಗ ತಾವೇ ನಿರ್ದೇಶಕಿಯಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಸೆವೆನ್ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಚಿತ್ರಕ್ಕೆ ರಶ್ಮಿ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಸೆವೆನ್, ಥ್ರಿಲ್ಲರ್ ಕಥೆಯ ಸಿನಿಮಾವಾಗಿದ್ದು ಸೀಕ್ರೆಟ್ ಎಂಬ ಅಡಿಬರಹವೂ ಇದೆ. ಇದು ಒಂದು ನಿಗೂಢತೆಯನ್ನು ಭೇದಿಸುವ ಕುತೂಹಲಭರಿತ ಕಥನವಾಗಿದೆ. ವಿಶೇಷ ಎಂದರೆ ಈ ಸಿನಿಮಾದಲ್ಲಿ ಬಹುತೇಕ ಮಹಿಳೆಯರೇ ಕಾರ್ಯನಿರ್ವಹಿಸಲಿದ್ದಾರೆ.

ಸಾಮರಸ್ಯ ಬೆಸೆಯುವ ಎಕ್ಸ್ ಅಂಡ್ ವೈ

ರಾಮ ರಾಮ ರೇ.. ಅಂತಹ ಸಿನಿಮಾಗಳನ್ನು ನಿರ್ದೇಶಿಸಿ ಮನಗೆದ್ದಿದ್ದ ಸತ್ಯ ಪ್ರಕಾಶ್ ಈಗ ನಟನಾಗಿಯೂ ಪರಿಚಿತರಾಗುತ್ತಿದ್ದಾರೆ. ಎಕ್ಸ್ ಅಂಡ್ ವೈ ಚಿತ್ರದಲ್ಲಿ ಸತ್ಯ ಪ್ರಕಾಶ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಎಕ್ಸ್ ಅಂಡ್ ವೈ ಶಿರ್ಷಿಕೆ ಕೇಳಿದಾಕ್ಷಣ ಇದು ಕ್ರೋಮೋಜೋಮ್ ಸಿನಿಮಾ ಎನ್ನಿಸುತ್ತದೆ. ಅದು ಸತ್ಯ ಆದರೆ ಇದು ಸಮಾಜ ಬೆಸೆದಿರುವ ಕ್ರೋಮೋಜೋಮ್ ಸುತ್ತ ಸಾಗುವ ಕಥೆಯಾಗಿದೆ. ಎಕ್ಸ್ ಅಂಡ್ ವೈ ಫ್ಯಾಟಂಸಿ ಸ್ಟೋರಿಯ ಸಿನಿಮಾವಾಗಿದ್ದು ಅದಕ್ಕೆ ಒಂದಷ್ಟು ನವಿರಾದ ಹಾಸ್ಯವನ್ನು ಬೆರೆಸಿ ತೆರೆಗೆ ತರಲಾಗುತ್ತಿದೆ. ಈ ಹಿಂದಿನ ಸಿನಿಮಾಗಳಂತೆಯೇ ಇಲ್ಲಿಯೂ ಎಲ್ಲರಿಗೂ ಹೊಂದುವ ಸಂದೇಶವೂ ಅಡಕವಾಗಿದೆ. ಸತ್ಯ ಪ್ರಕಾಶ್ ಜತೆಗೆ ಅಥರ್ವ ಪ್ರಕಾಶ್, ಬೃಂದಾ ಆಚಾರ್ಯ, ಅಯನಾ ಮುಂತಾದವರು ನಟಿಸಿದ್ದಾರೆ. ಬೆಂಗಳೂರು ಹಾಗೂ ಮಂಗಳೂರು ಸುತ್ತಮುತ್ತ ಸುಮಾರು ಐವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಎಕ್ಸ್ ಅಂಡ್ ವೈ ಜನವರಿಯಲ್ಲಿ ತೆರೆಗೆ ಬರುವ ನಿರೀಕ್ಷೆ ಇದೆ.

ಗಮನಸೆಳೆದ ಆಂಬು ಆಟೋ

ಸಾಮಾನ್ಯವಾಗಿ ಕಾರು ಇಲ್ಲ ಟಿಟಿ ಮಾದರಿಯ ಆಂಬುಲೆನ್ಸ್‌ಗಳನ್ನು ನೋಡಿದ್ದೇವೆ. ಆದರೆ, ಎಕ್ಸ್ ಅಂಡ್ ವೈನಲ್ಲಿ ಆಂಬು ಆಟೋವನ್ನು ನೋಡಬಹುದಾಗಿದೆ. ಇದೇ ಚಿತ್ರದ ವಿಶೇಷ.



ಚಿತ್ರದ ನಾಯಕ ಆಟೊ ಚಾಲಕ ಆತ ಆಟೊ ಚಾಲನೆಯ ಜತೆಗೆ ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಂಡಿರುತ್ತಾನೆ. ಆಂಬುಲೆನ್ಸ್‌ನಲ್ಲಿ ಇರುವಂತೆ ಈ ಆಟೊ ದಲ್ಲಿಯೂ ಜೀವರಕ್ಷಕ ಪರಿಕರಗಳಿರುತ್ತವೆ. ನಗರ ಪ್ರದೇಶಗಳಲ್ಲಿ ವಾಹನ ದಟ್ಟಣೆ ಇದ್ದರೂ ಆದಷ್ಟು ಬೇಗ ಆಸ್ಪತ್ರೆಗೆ ತಲುಪಿಸಲು ಈ ಆಂಬು ಆಟೊ ಸಹಾಯಕವಾಗುತ್ತದೆ. ಇದು ಹೊಸ ಬಗೆಯ ಕಾನ್ಸೆಪ್ಟ್ ಆಗಿದ್ದು, ಇದಕ್ಕೆ ವ್ಯಾಪಕ ಮೆಚ್ಚುಗೆಯೂ ವ್ಯಕ್ತವಾಗಿದೆ.

ಈ ವಾರ ತೆರೆಗೆ ಜಲಂಧರ

ವಿಷ್ಣು.ವಿ.ಪ್ರಸನ್ನ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಜಲಂಧರ ಚಿತ್ರ ಇದೇ ವಾರ ತೆರೆಗೆ ಬರಲಿದೆ. ಜಲದ ಬಗೆಗಿನ ಕಥಾಹಂದರ ಹೊಂದಿರುವ ಈ ಚಿತ್ರ ಥ್ರಿಲ್ಲರ್, ಸಸ್ಪೆನ್ಸ್ ಜಾನರ್‌ನಲ್ಲಿ ಮೂಡಿಬಂದಿದ್ದು, ಹಾಡು ಹಾಗೂ ಟೀಸರ್ ಮೂಲಕವೇ ಗಮನಸೆಳೆದಿದೆ. ನಟ ಪ್ರಮೋದ್ ಶೆಟ್ಟಿ ಹಾಗೂ ಸ್ಟೆಪ್ ಆಫ್ ಲೋಕಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದು ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ. ಟಗರು ಖ್ಯಾತಿಯ ರುಷಿಕಾ ರಾಜ್, ಆರೋಹಿತಾ ಗೌಡ , ಬಲ ರಾಜವಾಡಿ, ರಘು ರಾಮನಕೊಪ್ಪ, ನವೀನ್ ಸಾಗರ್, ಪ್ರತಾಪ್ ನೆನಪು, ಆದಿ ಕೇಶವರೆಡ್ಡಿ, ಭೀಷ್ಮ ರಾಮಯ್ಯ, ವಿಜಯ ರಾಜ್, ಪ್ರಸಾದ್, ವಿಶಾಲ್ ಪಾಟೀಲ್ ಮತ್ತು ಅಂಬು ಮುಂತಾದವರು ತಾರಾಗಣದಲ್ಲಿದ್ದಾರೆ.

ಸ್ಟೆಪ್ ಅಪ್ ಪಿಕ್ಚರ್ಸ್ ಲಾಂಛನದಲ್ಲಿ ಎಸ್.ಮದನ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಚಂದ್ರಮೋಹನ್, ರಮೇಶ್ ರಾಮಚಂದ್ರ, ಪದ್ಮನಾಭನ್ ಮಂಗುದೊಡ್ಡಿ ನಿರ್ಮಾಣ ದಲ್ಲಿ ಕೈ ಜೋಡಿಸಿದ್ದಾರೆ. ಕೇರಳ ಮೂಲದ ಸರಿನ್ ರವೀಂದ್ರನ್ ಮತ್ತು ವಿದ್ಯಾ ಶಂಕರ್ ಛಾಯಾಗ್ರಹಣ, ಜೆ.ಜತಿನ್ ದರ್ಶನ್ ಸಂಗೀತ ನಿರ್ದೇಶನ ಹಾಗೂ ವೆಂಕಿ ಯು ಡಿ ವಿ ಸಂಕಲನ ಜಲಂಧರ ಚಿತ್ರಕ್ಕಿದೆ.